ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಕೋಲ್ಕತ್ತಾದಲ್ಲಿ ಭಾನುವಾರ ವೆಸ್ಟ್ ಇಂಡೀಸ್ ವಿರುದ್ಧ ನಡೆದ ನಿರ್ಣಾಯಕ ಟಿ-20 ವಿಶ್ವಕಪ್‌ನ ಸೂಪರ್ 8 ಪಂದ್ಯದಲ್ಲಿ ಭಾರತಕ್ಕೆ 5 ವಿಕೆಟ್ ರೋಚಕ ಜಯ... ಸಂಜು ಸ್ಯಾಮ್ಸನ್ ಭರ್ಜರಿ ಆಟ... (ಅಜೇಯ 97 ರನ್)

02 ಮಾರ್ಚ್ 2026 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 346 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629



ಮಾನಸಿಕ ಒತ್ತಡ, ಪರಿಣಾಮ ಮತ್ತು ನಿಯಂತ್ರಣ ಕ್ರಮಗಳು » 2



ರಾಜ್ಯದಲ್ಲಿ ವಿರೋಧ ಪಕ್ಷ ಸತ್ತಿದೆ : ಈಶ್ವರಪ್ಪ » 3



ಇರಾನ್ ಮೇಲೆ ದಿಢೀರ್ ದಾಳಿಗೆ ಕಾರಣವೇನು ? » 4

ಇರಾನ್ ಅಧ್ಯಕ್ಷ ಖಮೇನಿ ಹತ್ಯೆ

ಇಸ್ರೇಲ್-ಅಮೇರಿಕಾ ವಿರುದ್ಧ ಮುಗಿ ಬಿದ್ದ ಇರಾನ್

• ಪ್ರಜೋದಯ ವರದಿ

ದುಬೈ: ಹಲವು ದಶಕಗಳ ಪರಮ ಶತ್ರು ಇರಾನ್ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಇಸ್ರೇಲ್ ಹಾಗು ಅಮೇರಿಕಾ ನಡೆಸಿದ ದಾಳಿಗೆ ಬಲಿಯಾಗಿದ್ದಾರೆ. ಇರಾನ್ ತನ್ನ ನಾಯಕನ ಹತ್ಯೆಯ ಕಿಚ್ಚು ತೀರಿಸಿಕೊಳ್ಳಲು ಇಸ್ರೇಲ್ ಹಾಗು ತನ್ನ ಆಪ್ತ ರಾಷ್ಟ್ರಗಳಲ್ಲಿ ಅಮೇರಿಕಾ ಸ್ಥಾಪಿಸಿದ ಸೇನಾ ನೆಲೆಗಳನ್ನು ಧ್ವಂಸಗೊಳಿಸಿದೆ.

ಶನಿವಾರ ನಡೆದ ದಾಳಿಯಲ್ಲಿ ಖಮೇನಿ ಅಲ್ಲದೆ ಆತನೊಂದಿಗೆ ಬಂಕರ್‌ನಲ್ಲಿ ಆಶ್ರಯ ಪಡೆದಿದ್ದ ಮಗಳು, ಮೊಮ್ಮಗಳು, ಅಳಿಯ, ರಷ್ಯಾದ ರಕ್ಷಣಾ ಸಚಿವ ಹಾಗು ಅನೇಕ ಸೇನೆಯ ಅಧಿಕಾರಿಗಳು ಹತರಾಗಿದ್ದಾರೆ. ಇಸ್ರೇಲ್ ಮತ್ತು ಅಮೇರಿಕಾ ದಾಳಿಯ ಹಿನ್ನಲೆಯಲ್ಲಿ ತನ್ನ ಅರಮನೆಯ ಸನಿಹದಲ್ಲೇ ಬಂಕರ್‌ನಲ್ಲಿ ಅಡಗಿಕೊಂಡಿದ್ದ ಖಮೇನಿ ಇದ್ದ ತಾಣವನ್ನು ಇಸ್ರೇಲ್ ಗುಪ್ತಚರ ಪಡೆ ಮೊಸಾದ್ ಹಲವು

ತಿಂಗಳ ಪರಿಶ್ರಮದ ನಂತರ ನಿಖರವಾಗಿ ಪತ್ತೆ ಹಚ್ಚಿದ ಬೆನ್ನಲ್ಲೇ ಅಮೇರಿಕಾ ಮತ್ತು ಇಸ್ರೇಲ್ ಜಂಟಿಯಾಗಿ ಖಮೇನಿಯನ್ನು ಹತ್ಯೆ ಮಾಡುವಲ್ಲಿ ಯಶಸ್ವಿಯಾಗಿವೆ.

ಖಮೇನಿಯ ಹತ್ಯೆ ಬಳಿಕ ಇರಾನ್ ಸೇರಿ ಶಿಯಾ ಮುಸ್ಲಿಮರಿರುವ ರಾಷ್ಟ್ರಗಳಲ್ಲಿ ಇಸ್ರೇಲ್ ಹಾಗು ಅಮೇರಿಕಾದ ವಿರುದ್ಧ ಭಾರೀ ಪ್ರತಿಭಟನೆಗಳು ನಡೆಯುತ್ತಿವೆ. ಮೂರು ದಶಕಗಳ ಖಮೇನಿ ಸರ್ವಾಧಿಕಾರದಿಂದ ದಂಗೆ ಎದ್ದಿದ್ದ ಇರಾನ್‌ನ ಲಕ್ಷಾಂತರ ಜನರು ಖಮೇನಿ ಸಾವನ್ನು ಸಂಭ್ರಮಿಸುತ್ತಿದ್ದಾರೆ.

ಆಪರೇಷನ್ ಎಪಿಕ್ ಫ್ಯೂರಿ ಹೆಸರಿನಲ್ಲಿ ಶುರುವಾಗಿರುವ ಯುದ್ಧವು ಮತ್ತೊಂದು ವಿಶ್ವ ಯುದ್ಧದ ಭೀತಿ ಹುಟ್ಟಿಸಿದೆ. ಭಾನುವಾರದ ಬೆಳವಣಿಗೆ ಬೆನ್ನಲ್ಲೇ ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸದಂತೆ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ಗೆ ಎಚ್ಚರಿಕೆ ನೀಡಿದ್ದಾರೆ.

ಈ ಮಹಾಪಾರಾಧಕ್ಕೆ ಪ್ರತೀಕಾರ ತೀರಿಸಿಯೇ ಸಿದ್ದವೆಂದು ಇರಾನ್ ಸಂಪುಟ ಹೇಳಿದೆ. ಇಸ್ರೇಲ್ ಮತ್ತು ಅಮೇರಿಕಾದ ನೆಲೆಗಳನ್ನು ಗುರಿಯಾಗಿಸಿಕೊಂಡು ಕಂಡು ಕೇಳರಿಯದ ದಾಳಿ ನಡೆಸುವುದಾಗಿ ರೆವಲ್ಯೂಷನರಿ ಗಾರ್ಡ್ ಎಚ್ಚರಿಕೆ ನೀಡಿದೆ. ನೀವು ಲಕ್ಷ್ಮಣ ರೇಖೆ ದಾಟಿದ್ದೀರಿ ಮತ್ತು ಅದಕ್ಕೆ ಬೆಲೆ ತೆರಲೇಬೇಕೆಂದು ರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಗೇರ್ ಕಾಲಿಬಾಫ್ ಅವರು ಗುಡುಗಿದ್ದಾರೆ. ಅದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ

» ನಾಲ್ಕನೇ ಪುಟದಲ್ಲಿ

ಪ್ರಧಾನಿ ಮೋದಿ ಮಹತ್ವದ ಸಭೆ

ಇರಾನ್ ಮೇಲೆ ಅಮೇರಿಕಾ ಹಾಗು ಇಸ್ರೇಲ್ ಜಂಟಿ ದಾಳಿ ನಡೆಸಿದ ಹಿನ್ನಲೆಯಲ್ಲಿ ಜಾಗತಿಕ ಉದ್ವಿಗ್ನತೆ ಉಂಟಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಸಂಪುಟದ ಭದ್ರತಾ ಸಮಿತಿ ಸಭೆ (ಸಿಸಿಎಸ್) ನಡೆಸಿದರು.

ರಾಜಸ್ತಾನ್, ಗುಜರಾತ್, ತಮಿಳುನಾಡು ಮತ್ತು ಪುದುಚೇರಿ ಪ್ರವಾಸದ ಹಿನ್ನಲೆಯಲ್ಲಿ 2 ದಿನಗಳಿಂದ ರಾಷ್ಟ್ರ ರಾಜಧಾನಿ ಯಿಂದ ಹೊರಗಿದ್ದ ಪ್ರಧಾನಿ ಮೋದಿ ಸಂಜೆ ವಾಪಾಸ್ಸಾದರು. ಖಮೇನಿ ಹತ್ಯೆ, ಬಳಿಕ ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿ ಬದಲಾ ಗಿರುವ ರಾಜಕೀಯ ಹಾಗು ಭದ್ರತಾ ಪರಿಸ್ಥಿತಿಯ ಬಗ್ಗೆ ಚರ್ಚಿಸಿದರು. ಯುದ್ಧ ಭೀತಿಯಿಂದ ಕಚ್ಚಾ ತೈಲ ಬೆಲೆಯಲ್ಲಿ ಉಂಟಾಗಬಹುದಾದ ಏರಿಕೆ ಮತ್ತು ಭಾರತದ ಆರ್ಥಿಕತೆ ಮೇಲೆ ಉಂಟಾಗುವ ಪರಿಣಾಮಗಳ ಕುರಿತು ಚರ್ಚೆ ನಡೆಯಿತು ಎನ್ನಲಾಗಿದೆ.

ಸತ್ಯ-ಧರ್ಮದ ಸಂದೇಶ ಸಾರಿದ ರೇಣುಕಾಚಾರ್ಯರು



• ಪ್ರಜೋದಯ ವರದಿ

ಹಾಸನ: ಶಿವಭಕ್ತಿ, ಸಮಾನತೆ ಮತ್ತು ಸತ್ಯ ಧರ್ಮದ ಸಂದೇಶವನ್ನು ಸಾರಿದ ಶ್ರೇಷ್ಠ ಮಾನವತಾವಾದಿ ಶ್ರೀ ರೇಣುಕಾಚಾರ್ಯರು ಹಾಕಿಕೊಟ್ಟ ಮಾರ್ಗದಲ್ಲಿ ಎಲ್ಲರೂ ಸಾಗಬೇಕೆಂದು ತೆಂಕಲಗೂಡು ಬೃಹನ್ಮಠದ ಶ್ರೀ ಚನ್ನಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಶ್ರೀ ರೇಣುಕಾಚಾರ್ಯರ ಜಯಂತಿಯಲ್ಲಿ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಅವರು, ಅಸಮಾನತೆ, ಅಸ್ಪೃಶ್ಯತೆ, ಮೌಢ್ಯಗಳು ತಾಂಡವವಾಡುತ್ತಿದ್ದ ಸಂದರ್ಭದಲ್ಲಿ ಸಮಾನತೆಯ ದೀಪ ಬೆಳಗಿಸಿದವರು ರೇಣುಕಾಚಾರ್ಯರು. ಜಾತಿ, ಮತ, ಪಂಗಡಗಳ ನಡುವಿನ ಬೇಧವನ್ನು ಬೇರು ಸಮೇತ ಕಿತ್ತು ಹಾಕಲು ಅವರು ಪ್ರಯತ್ನಿಸಿದರು. ಮನುಷ್ಯತ್ವ ಮರೆಯಾಗುತ್ತಿದ್ದ ಸಂದರ್ಭದಲ್ಲಿ ಸಮಾನತೆಯ ಮೌಲ್ಯಗಳನ್ನು ಬಿತ್ತಿದರು. ಪುರುಷನಷ್ಟೇ ಮಹಿಳೆ ಕೂಡ ಪವಿತ್ರಳು ಎಂದು ಪ್ರತಿಪಾದಿಸಿ ಮಾನವ ಧರ್ಮವೇ ಶ್ರೇಷ್ಠ ಎಂಬುದನ್ನು ಒತ್ತಿ ಹೇಳಿದ್ದಾರೆಂದರು.

ರೇಣುಕಾಚಾರ್ಯರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಶಾಂತಿ, ಸಮಾನತೆ ಮತ್ತು ಸೌಹಾರ್ದತೆ ನೆಲೆಸಲು ಸಾಧ್ಯ. ಮನುಷ್ಯ ಜನ್ಮ ಅತ್ಯಂತ ಪವಿತ್ರವಾದುದು. ಅದನ್ನು ಸಾರ್ಥಕಗೊಳಿಸಲು ಮಹನೀಯರ ನುಡಿಗಳು, ಸಾಹಿತ್ಯ ಹಾಗು ಅವರು ನಡೆದು ಬಂದ ದಾರಿ ನೆರವಾಗುತ್ತವೆಂದು ತಿಳಿಸಿದರು.

ಉಪವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಿ.ಪಿ. ಕೃಷ್ಣೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಹೆಚ್.ಪಿ.ತಾರಾನಾಥ್, ವೀರಶೈವ ಲಿಂಗಾಯತ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ.ಐಸಾಮಿಗೌಡ, ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್, ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್, ಮಮತಾ ಪಾಟೀಲ್, ಜಿ.ಎಸ್. ಅವಿನಾಶ್ ಇತರರಿದ್ದರು.

ಪತ್ರಿಕಾ ವಿತರಕರ ಶ್ರೇಯೋಭಿವೃದ್ಧಿಯ ಭರವಸೆ

• ಪ್ರಜೋದಯ ವರದಿ

ಸಕಲೇಶಪುರ: ಪತ್ರಿಕಾ ವಿತರಕರ ಶ್ರೇಯೋಭಿವೃದ್ಧಿಗಾಗಿ ಕಾರ್ಯನಿರತ ಪತ್ರಕರ್ತರ ಸಂಘ ಸದಾ ಬದ್ಧವಾಗಿದ್ದು, ಅವರ ಸಮಸ್ಯೆಗಳಿಗೆ ಸ್ಪಂದಿಸಲಾಗುವುದೆಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಹೇಳಿದರು.

ಪಟ್ಟಣದ ಲಯನ್ಸ್ ಭವನದಲ್ಲಿ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದಿಂದ ಭಾನುವಾರ ಆಯೋಜಿಸಿದ್ದ ತಾಲ್ಲೂಕು ಘಟಕದ ಉದ್ಘಾಟನೆ, ಸದಸ್ಯರಿಗೆ ಗುರುತಿನ ಚೀಟಿ ವಿತರಣೆ ಹಾಗು ಪದಾಧಿಕಾರಿಗಳ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಕಾರ್ಮಿಕ ಇಲಾಖೆಯಿಂದ ದೊರೆಯುವ ವಿವಿಧ ಸೌಲಭ್ಯಗಳನ್ನು ಪತ್ರಿಕಾ ವಿತರಕರು ಪಡೆದುಕೊಳ್ಳಬೇಕು. ಡಿಜಿಟಲ್ ಮಾಧ್ಯಮಗಳ ಪ್ರಾಬಲ್ಯ ಹೆಚ್ಚಾದರೂ ಮುದ್ರಿತ ಪತ್ರಿಕೆಗಳ ಮೇಲಿನ ಓದುಗರ ನಂಬಿಕೆ ಕಡಿಮೆಯಾಗಿಲ್ಲ. ಪತ್ರಿಕೆಯಲ್ಲಿ

ಪ್ರಕಟವಾಗುವ ಸುದ್ದಿಗಳು ನಂಬಿಕೆಗೆ ಅರ್ಹವಾಗಿರುತ್ತದೆ. ಆದ್ದರಿಂದ ಜನರು ಪತ್ರಿಕೆಗಳನ್ನು ಇಷ್ಟಪಡುತ್ತಾರೆಂದರು.

ಇಂದಿನ ದಿನಗಳಲ್ಲಿ ಹಲವಾರು ವಿತರಕರು ಮಾಲೀಕರು ಹಾಗು ಸಂಪಾದಕರಾಗಿ ಬೆಳೆಯುತ್ತಿರುವುದು ಗಮನಾರ್ಹ ಬೆಳವಣಿಗೆ. ಸಮಯಕ್ಕೆ ಸರಿಯಾಗಿ ಪತ್ರಿಕೆ ತಲುಪಿಸುವ ಜವಾಬ್ದಾರಿಯನ್ನು ವಿತರಕರು ಶಿಸ್ತಿನಿಂದ ನಿರ್ವಹಿಸುತ್ತಿದ್ದು, ದೇಶವನ್ನು ಕಾಯುವ ಸೈನಿಕರಂತೆ ಸಮಯ ಪಾಲನೆಯೊಂದಿಗೆ ಕೆಲಸ ಮಾಡುತ್ತಿದ್ದಾರೆ. ಪತ್ರಿಕಾ ವಿತರಕರ ಸಮಸ್ಯೆಗಳ ಕುರಿತು ಶೀಘ್ರದಲ್ಲೇ ವಿಶೇಷ ಸಭೆ ನಡೆಸಿ ಸರ್ಕಾರದ ಗಮನಕ್ಕೆ ತರಲಾಗುವುದೆಂದು ಭರವಸೆ ನೀಡಿದರು.

ವಿತರಕರ ಸಂಘದ ರಾಜ್ಯಾಧ್ಯಕ್ಷ ಶಂಭುಲಿಂಗ ಅವರು ಮಾತನಾಡಿ, ಪತ್ರಿಕಾ ವಿತರಕರು ಸಮಾಜಕ್ಕೆ ಸುದ್ದಿಗಳನ್ನು ತಲುಪಿಸುವ ಪ್ರಮುಖ ಕೊಂಡಿಯಾಗಿದ್ದು, ಅವರ ಹಕ್ಕು-ಹಿತಗಳ ರಕ್ಷಣೆಗೆ ಒಕ್ಕೂಟ ಬದ್ಧವಾಗಿದೆ. ಪತ್ರಿಕಾ ವಿತರಕರು ಅಪಘಾತಗಳಲ್ಲಿ ಮೃತಪಟ್ಟ ಸಂದರ್ಭಗಳಲ್ಲಿ ಸರ್ಕಾರದಿಂದ 2 ಲ.ರೂ. ಪರಿಹಾರ ದೊರೆಯುವಂತೆ ಕ್ರಮ ಕೈಗೊಳ್ಳ

» ನಾಲ್ಕನೇ ಪುಟದಲ್ಲಿ

ಯುದ್ಧ ಪೀಡಿತ ಪ್ರದೇಶದಲ್ಲಿ ಜಿಲ್ಲೆಯ ಹಕ್ಕಿ ಪಿಕ್ಕಿಗಳು

ಸಹಾಯಕ್ಕಾಗಿ ಅಂಗಲಾಚಿದ ಕುಟುಂಬ | ವಿಮಾನಯಾನ ಸ್ಥಗಿತದಿಂದ ಪರದಾಟ

• ಪ್ರಜೋದಯ ವರದಿ

ಹಾಸನ: ಗಿಡಮೂಲಿಕೆಗಳ ವ್ಯಾಪಾರ ಉದ್ದೇಶದಿಂದ ಮಧ್ಯ ಪ್ರಾಚ್ಯ ರಾಷ್ಟಕ್ಕೆ ತೆರಳಿದ್ದ ಜಿಲ್ಲೆಯ ಐವರು ಹಕ್ಕಿ ಪಿಕ್ಕಿ ಸಮುದಾಯದವರು ಹಾಗು ಪ್ರಶಸ್ತಿ ಸ್ವೀಕಾರ ಸಮಾರಂಭಕ್ಕೆ ದುಬೈಗೆ ತೆರಳಿದ್ದ ಅರಸೀಕೆರೆಯ ಐವರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ತಾವು ಇರುವ ಜಾಗದಿಂದಲೇ ವಿಡಿಯೋ ಸಂದೇಶ ಕಳುಹಿಸಿರುವ ಅವರು ಅಲ್ಲಿನ ನೈಜ ಸ್ಥಿತಿಯನ್ನು ವಿವರಿಸಿದ್ದಾರೆ. ತಮ್ಮನ್ನು ಸುರಕ್ಷಿತವಾಗಿ ತವರಿಗೆ ವಾಪಾಸ್ ಕರೆಸಿಕೊಳ್ಳುವಂತೆ ಮನವಿ ಮಾಡಿದ್ದಾರೆ.

ಬೇಲೂರು ತಾಲ್ಲೂಕು ಅಂಗಡಿಹಳ್ಳಿ ಗ್ರಾಮದ ಪಂಜು ಹಾಗು ಪತ್ನಿ ಜಮುನ, ಪುತ್ರಿ ರತೀಶಾ, ಅಳಿಯ ವಿರೇಂದ್ರ, ಹಾಗು ಮೈಸೂರು ಜಿಲ್ಲೆಯ ಒಬ್ಬರು ಕಳೆದ ಒಂದು ತಿಂಗಳ ಹಿಂದೆ ಬೆಹರನ್‌ಗೆ ತೆರಳಿದ್ದಾರೆ. ಕೈ ಕಾಲು ನೋವಿಗೆ ನೀಡುವ ತೈಲ, ತಲೆ

ಕೂದಲು ಬೆಳೆಯುವ ಔಷಧಿ ಮಾರಾಟ ಮಾಡುವ ಕಾಯಕ ಮಾಡಿಕೊಂಡಿದ್ದೇವೆ. ಜೀವನ ನಿರ್ವಹಣೆಗಾಗಿ ಉದ್ಯೋಗ ಅರಸಿ ಇಲ್ಲಿಗೆ ಬಂದಿದ್ದೇವೆ. ಏಕಾಏಕಿ ಯುದ್ಧ ಕಾರ್ಮೋಡ ಆವರಿಸುತ್ತಿದ್ದಂತೆ ಇಲ್ಲಿನವರು ಕೂಡಲೇ ನಿಮ್ಮ ದೇಶಕ್ಕೆ ತೆರಳಿ ಎಂದು ಸೂಚಿಸಿದರು.

ಆದರೆ, ಪ್ರಯಾಣಕ್ಕೆ ಯಾವುದೇ ಸೌಲಭ್ಯ ಇರಲಿಲ್ಲ, ನಮಗೆ ಕುಡಿಯಲು ನೀರು, ಊಟ ಏನೂ ಸಿಗದೆ ಪರದಾಡುತ್ತಿದ್ದೇವೆ. ಮಂಗಳೂರಿನ ಪ್ರವೀಣ್ ಎಂಬುವವರು ನಮ್ಮನ್ನು ಭೇಟಿಯಾಗಿ ವಾಸ್ತವ್ಯಕ್ಕೆ ತಾತ್ಕಾಲಿಕ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ನಾವು ಇರುವ ಜಾಗದಲ್ಲೇ ಬಾಂಬ್ ಬ್ಲಾಸ್ಟ್ ಶಬ್ಧ ಕೇಳಿಸುತ್ತಿದೆ. ಭಾರತ ಸರ್ಕಾರ ನಮ್ಮನ್ನು ಬೇಗ ವಾಪಾಸ್ ಕರೆಸಿಕೊಳ್ಳಬೇಕೆಂದು ಜಮುನಾ ಅವರು ಮನವಿ ಮಾಡಿದ್ದಾರೆ.

» ನಾಲ್ಕನೇ ಪುಟದಲ್ಲಿ

> **ಉದ್ಯೋಗ ಅರಸಿ ನಮ್ಮ ಸಮುದಾಯದವರು ಬೆಹರನ್‌ಗೆ ತೆರಳಿದ್ದಾರೆ. ಪ್ರತಿ ಬಾರಿಯೂ ವಿದೇಶ ಪ್ರವಾಸ ಕೈ ಗೊಳ್ಳುತ್ತಾರೆ. ಇರಾನ್-ಇಸ್ರೇಲ್ ಯುದ್ಧದಿಂದ ಸಮಸ್ಯೆಗೆ ಸಿಲುಕಿದ್ದಾರೆ. ರಾಜ್ಯ ಹಾಗು ಕೇಂದ್ರ ಸರ್ಕಾರಗಳು ಮುತುವರ್ಜಿ ವಹಿಸಿ ಅವರನ್ನು ತವರು ರಾಷ್ಟ್ರಕ್ಕೆ ಕರೆಸಿಕೊಳ್ಳಬೇಕು.**
> **-ಹೂರಾಜು, ಹಕ್ಕಿಪಿಕ್ಕಿ ಹಾಗು ಆದಿವಾಸಿ ಜನಾಂಗದ ಮಾಜಿ ಜಿಲ್ಲಾಧ್ಯಕ್ಷ**

ಜಿಲ್ಲಾಡಳಿತದಿಂದ ತುರ್ತು ಸಹಾಯವಾಣಿ

ಇರಾನ್ ಹಾಗು ಇಸೇಲ್‌ನಲ್ಲಿ ಯುದ್ಧ ಸಂಭವಿಸಿದ್ದು, ಅಪಾರ ಪ್ರಮಾಣದ ಸಾವು ನೋವು ಸಂಭವಿಸುತ್ತಿವೆ. ಈ ದೇಶಗಳಲ್ಲಿ ಕರ್ನಾಟಕದ ಹಲವರು ಸಿಲುಕಿಕೊಂಡಿರುವ ಮಾಹಿತಿ ಇದೆ. ಜಿಲ್ಲೆಯ ಸಾರ್ವಜನಿಕರು ಯಾರಾದರೂ ಈ ಯುದ್ಧ ಪೀಡಿತ ದೇಶಗಳಲ್ಲಿ ಸಿಲುಕಿದ್ದರೆ ಕೂಡಲೇ ಹಾಸನ ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರಕ್ಕೆ ಅಥವಾ ದೂರವಾಣಿ ಸಂಖ್ಯೆ 08172-261111, ಟೋಲ್ ಫ್ರೀ 08172-1077 ಇಲ್ಲಿಗೆ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ತಿಳಿಸಿದ್ದಾರೆ.

ಬಡ ಹೆಣ್ಣು ಮಕ್ಕಳಿಂದ ಶಿಕ್ಷಣ ಕಸಿಯುವ ಹುನ್ನಾರ

ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ ರೂಪ ಹಾಸನ ವಿರೋಧ | ಎಐಡಿಎಸ್‌ಓ ನೇತೃತ್ವದಲ್ಲಿ ಸಮಾವೇಶ

• ಪ್ರಜೋದಯ ವರದಿ

ಹಾಸನ: ಗ್ರಾಮೀಣ ಪ್ರದೇಶದ ಬಡ ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ವಂಚಿಸಬೇಕೆಂಬ ದುರುದ್ದೇಶದಿಂದ ರಾಜ್ಯ ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳನ್ನು ಪ್ರಾರಂಭಿಸುತ್ತಿದೆ ಎಂದು ಲೇಖಕಿ ರೂಪ ಹಾಸನ ಅವರು ಆರೋಪಿಸಿದರು.

ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಸಂಸ್ಥೆಯಿಂದ ಭಾನುವಾರ (ಎಐಡಿಎಸ್‌ಓ) ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಏರ್ಪಡಿಸಿದ್ದ ವಿದ್ಯಾರ್ಥಿ-ಪೋಷಕರ ಸಮಾವೇಶದಲ್ಲಿ ಮಾತನಾಡಿದ ಅವರು, ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಕೇವಲ ಕೆಪಿಎಸ್ ಮ್ಯಾಗ್ನೆಟ್ ಯೋಜನೆಗೆ ಮಾತ್ರ

ಹಾಗು ಕೆಪಿಎಸ್ ಶಿಕ್ಷಣಕ್ಕೆ ಸಚಿವರಾಗಿದ್ದಾರೆ. ಸರ್ಕಾರಿ ಶಾಲೆ ಎಂದರೆ ಅದು ಒಂದು ಸಾಂಸ್ಕೃತಿಕ ತಾಣ. ಶಾಲೆಯನ್ನು ಮುಚ್ಚಿದರೆ ಅಲ್ಲಿನ ಸಂಸ್ಕೃತಿಯನ್ನು ನಾಶ ಮಾಡಿದಂತಾಗುತ್ತದೆಂದರು.

ಬಡ ರೈತರ, ಕಾರ್ಮಿಕರ ಮಕ್ಕಳನ್ನು, ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ದೂರ ಉಳಿಸುವ ಯೋಜನೆಗೆ ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಜಾರಿಗೊಳಿಸಲಾಗಿದೆ. ಸರ್ಕಾರದ ಈ ನೀತಿ ಶಿಕ್ಷಣ ಹಕ್ಕು ಕಾಯ್ದೆಯ ನೇರ ಉಲ್ಲಂಘನೆಯಾಗಿದೆ. ನಾವೆಲ್ಲರೂ ಸೇರಿ ಹೋರಾಟ ಮುಂದುವರಿಸೋಣ, ಬುದ್ಧಿಜೀವಿಗಳು ಮನೆ ಒಳಗೆ ಕೂತರೆ ಕುಳಿತುಕೊಳ್ಳಲಿ, ಸರ್ಕಾರ ಈ ನೀತಿಯನ್ನು ವಾಪಾಸ್ ಪಡೆಯುವವರೆಗೂ ಹೋರಾಟ ಮಾಡಬೇಕಿದೆ. ನಾನು ಕೊನೆಯವರೆಗೂ ನಿಮ್ಮ ಜೊತೆ ಇರುತ್ತೇನೆಂದು ಭರವಸೆ ನೀಡಿದರು.

ಎಐಡಿಎಸ್‌ಓ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ ಅವರು ಮಾತನಾಡಿ, ರಾಜ್ಯದಾದ್ಯಂತ 40,000ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸಿ ಬಡ, ರೈತ, ಕೂಲಿ-ಕಾರ್ಮಿಕರ ಮಕ್ಕಳಿಂದ ಶಿಕ್ಷಣವನ್ನು ಸಂಪೂರ್ಣವಾಗಿ

» ನಾಲ್ಕನೇ ಪುಟದಲ್ಲಿ

ಕನ್ನಡಿಗರ ಸುರಕ್ಷತೆಗೆ ಅಗತ್ಯ ಕ್ರಮಕ್ಕೆ ಸೂಚನೆ

• ಪ್ರಜೋದಯ ವರದಿ

ಬೆಂಗಳೂರು : ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ಧದಿಂದಾಗಿ ನೆರೆ ರಾಷ್ಟ್ರಗಳಲ್ಲಿ ನೆಲೆಸಿರುವ ಕನ್ನಡಿಗರ ಸುರಕ್ಷತೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ದೆಹಲಿಯ ನಿವಾಸಿ ಆಯುಕ್ತರ ಜೊತೆ ಸಮಾಲೋಚನೆ ನಡೆಸಿ, ಅವರ ಸುರಕ್ಷತೆಗೆ ಎಲ್ಲಾ ರೀತಿಯ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದೇನೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ

ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಟ್ವೀಟ್ ಮಾಡಿರುವ ಅವರು, ಮಧ್ಯಪ್ರಾಚ್ಯ ದೇಶಗಳಲ್ಲಿ ವಿಮಾನ ಸಂಚಾರ ಸ್ಥಗಿತಗೊಂಡಿರುವ ಕಾರಣ ನಾಡಿಗೆ ಮರಳಲು ಸಾಧ್ಯವಾಗದೆ ಯುದ್ಧಪೀಡಿತ ರಾಷ್ಟ್ರಗಳಲ್ಲಿ ಸಿಲುಕಿರುವವರು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಮನವಿ ಮಾಡುತ್ತೇನೆ ಎಂದಿದ್ದಾರೆ

ನಶಾ ಮುಕ್ತ ಸಮಾಜ ನಿರ್ಮಾಣ ಎಲ್ಲರ ಧ್ಯೇಯವಾಗಲಿ

• ಪ್ರಜೋದಯ ವರದಿ

ಹಾಸನ: ಗಾಂಜಾ, ಡ್ರಗ್ಸ್‌ನಂತಹ ಮಾದಕ ಪದಾರ್ಥಗಳು ಯುವಕರ ಜೀವನವನ್ನೇ ಹಾಳು ಮಾಡುತ್ತಿದ್ದು ಅದರ ವಿರುದ್ಧ ಎಲ್ಲರೂ ಒಟ್ಟಾಗಿ ಹೋರಾಡಬೇಕಿದೆ ಎಂದು ಸಂಸದ ಶ್ರೇಯಸ್ ಅವರು ಹೇಳಿದರು.

ನಶೆ ಮುಕ್ತ ಸಮಾಜ ನಿರ್ಮಾಣ ಧ್ಯೇಯ ವಾಕ್ಯದೊಂದಿಗೆ ಜಿಲ್ಲಾ ಪೊಲೀಸ್ ಇಲಾಖೆ ಹಾಗು ಸ್ಟೇಟ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ವತಿಯಿಂದ ಭಾನುವಾರ ನಗರದ ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಆವರಣದಿಂದ ಹಮ್ಮಿಕೊಂಡಿದ್ದ ನಮ್ಮ ಪೊಲೀಸ್ ನಮ್ಮ ಹೆಮ್ಮೆ ಓಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಡ್ರಗ್ಸ್ ವ್ಯಸನವು ಯುವ ಸಮುದಾಯದ ಭವಿಷ್ಯವನ್ನು ಕತ್ತಲೆಗೆ ದೂಡುತ್ತಿದೆ. ದುಶ್ಚಟಗಳಿಂದ ದೂರವಿರಬೇಕೆಂದರೆ ದೃಢ ಮನಸ್ಸು ಮುಖ್ಯ. ದೈಹಿಕವಾಗಿ

ಸದೃಢರಾಗಿರುವ ಯುವಕರು ಮಾನಸಿಕವಾಗಿಯೂ ಸದೃಢರಾಗಿರುತ್ತಾರೆ. ಇಂತಹ ಕಾರ್ಯಕ್ರಮಗಳು ಸಮಾಜದಲ್ಲಿ ಬದಲಾವಣೆಗೆ ಸಹಕಾರಿಯಾಗುತದೆ. ಪೊಲೀಸ್ ಇಲಾಖೆ ಕಾನೂನು-ಸುವ್ಯವಸ್ಥೆ ಕಾಪಾಡುವ ಜೊತೆಗೆ ಜನಜಾಗೃತಿ ಕಾರ್ಯಕ್ರಮಗಳ ಮೂಲಕ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ಮಾದಕ ವಸ್ತುಗಳ ನಿಷೇಧದ ಕುರಿತು ಯುವಜನರಲ್ಲಿ ಅರಿವು ಮೂಡಿಸುವುದು ಅತ್ಯಗತ್ಯ. ಎಲ್ಲಾ ಸಂಘಟನೆಗಳು, ಶಿಕ್ಷಣ ಸಂಸ್ಥೆಗಳು ಮತ್ತು ಪೋಷಕರು ಕೈಜೋಡಿಸಿದಾಗ ಮಾತ್ರ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ. ಯುವಕರು ದುಶ್ಚಟಗಳಿಂದ ದೂರವಿದ್ದು ಕ್ರೀಡೆ ಮತ್ತು ಸಕಾರಾತ್ಮಕ ಚಟುವಟಿಕೆಗಳತ್ತ ಗಮನ ಹರಿಸಬೇಕೆಂದರು.

» ನಾಲ್ಕನೇ ಪುಟದಲ್ಲಿ

ಆಧುನಿಕತೆ ಬೆಳೆದಂತೆ ಅಳಿವಿನಂಚಿಗೆ ಭಾರತೀಯ ಸಂಸ್ಕೃತಿ

• ಪ್ರಜೋದಯ ವರದಿ

ಸಕಲೇಶಪುರ: ಪ್ರಸ್ತುತ ತಂತ್ರಜ್ಞಾನ ಯುಗದಲ್ಲಿ ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಕಲೆ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಅವರು ಹೇಳಿದರು.

ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಿದ್ದ ರಾಜ್ಯ ಮಟ್ಟದ ಚಿತ್ರಕಲೆ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದ ಅವರು, ಯುವ ಪೀಳಿಗೆಯನ್ನು ಸರಿಯಾದ ದಾರಿಯಲ್ಲಿ ಕರೆದೊಯ್ಯಬೇಕಿದೆ. ಸಾಮಾಜಿಕ ಜಾಲತಾಣಗಳ ಅಬ್ಬರ, ಕೃತಕ ಬುದ್ಧಿಮತ್ತೆಯ ಸಲಕರಣೆಗಳಿಂದ ಮನುಷ್ಯನ ಯೋಚನೆಗಳೇ ತೆರೆಮರೆಗೆ ಸರಿಯುತ್ತಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಚಿತ್ರಕಲೆಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಸ್ಪರ್ಧೆ ಆಯೋಜಿಸಿರುವುದು ಶ್ಲಾಘನೀಯವೆಂದರು. ಸಮಾಜದಲ್ಲಿ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ ಹಾಗು ಕ್ರೀಡಾಕೂಟಗಳು ಹೆಚ್ಚಾಗಿ ನಡೆಯುತ್ತಿವೆಯಾದರೂ ಭಾರತೀಯ

ಸಂಸ್ಕೃತಿಯನ್ನು ಎತ್ತಿಹಿಡಿಯುವ ಕಾರ್ಯಕ್ರಮಗಳು ಅಪರೂಪವಾಗಿವೆ. ಮಕ್ಕಳು ಹಾಗು ಯುವಕರು ಮೊಬೈಲ್ ಮೇಲಿನ ಅವಲಂಬನೆ ಹೆಚ್ಚಿಸಿಕೊಂಡಿದ್ದಾರೆ. ಸಾಮಾಜಿಕ ಜಾಲತಾಣಗಳು ಮತ್ತು ಆನ್‌ಲೈನ್ ಆಟಗಳಲ್ಲಿ ಹೆಚ್ಚು ತೊಡಗಿಸಿ ಕೊಂಡಿದ್ದು, ದೈಹಿಕ ಚಟುವಟಿಕೆಗಳು ಹಾಗು ವ್ಯಕ್ತಿತ್ವ ವಿಕಸನಕ್ಕೆ ಸಹಾಯಕವಾಗುವ ಸಾಂಸ್ಕೃತಿಕ ಚಟುವಟಿಕೆಗಳಿಂದ ದೂರವಾಗುತ್ತಿದ್ದಾರೆಂದರು.

ಪೊಲೀಸ್ ಇಲಾಖೆಯ ಕೀರ್ತಿ ಅವರು ಮಾತನಾಡಿ, ಸಕಲೇಶಪುರದಲ್ಲಿ ಹಿಂದೆ ಕಲಾ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಇರಲಿಲ್ಲವಾದರೂ ಕೋವಿಡ್ ಬಳಿಕ ಚಿತ್ರಕಲೆ, ಸಂಗೀತ ಹಾಗು ನಾಟ್ಯ ಸೇರಿ ವಿವಿಧ ಕ್ಷೇತ್ರಗಳತ್ತ ಮಕ್ಕಳ ಆಸಕ್ತಿ ಹೆಚ್ಚಾಗಿದೆ ಎಂದರು.

ಕಲೆ ಎನ್ನುವುದು ಭಾವನೆ, ಆಲೋಚನೆ ಹಾಗು ಸೃಜನಶೀಲತೆಯ ಸಮನ್ವಯವಾಗಿದ್ದು, ಚಿತ್ರಕಲೆ, ಶಿಲ್ಪಕಲೆ, ಸಂಗೀತ, ನಾಟ್ಯ, ರಂಗಭೂಮಿ ಹಾಗು ಸಿನೆಮಾ ಸೇರಿ ವಿವಿಧ ರೂಪಗಳಲ್ಲಿ ವ್ಯಕ್ತವಾಗುತ್ತದೆಂದರು. ಮಕ್ಕಳ ಪ್ರತಿಭೆ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಿದರು. ಚಿತ್ರ ಕಲಾವಿದ ಕಲಾಪ್ರಿಯ ಮಂಜು, ಜೆಡಿಎಸ್ ಮುಖಂಡ ಪ್ರಜ್ವಲ್ ಇತರರಿದ್ದರು.

ವಾಸ್ತವಾಂಶ ತಲಾಶೆಗೆ ಮುಂದಾದ ಪೊಲೀಸರು

ಸಂಶಯದ ಸುಳಿಯಲ್ಲಿ ಸಾರಿಗೆ ನೌಕರ ವೀರಣ್ಣ ಸಾವಿನ ಪ್ರಕರಣ

• ಪ್ರಜೋದಯ ವರದಿ

ಆಲೂರು : ತಾಲ್ಲೂಕಿನ ರಾಜನಹಳ್ಳಿಯಲ್ಲಿ ಸಾರಿಗೆ ಸಂಸ್ಥೆಯ ನೌಕರ ವೀರಣ್ಣ ಎಂಬುವವರು ಸಾವಿಗೀಡಾದ ಪ್ರಕರಣದ ಹಿಂದೆ ಅನೇಕ ಸಂಶಯದ ಸುಳಿಗಳು ಹರಿದಾಡಲಾರಂಬಿಸಿವೆ. ಮೃತರ ಸಂಬಂಧಿಕರ ದೂರು ಆಧರಿಸಿ 11ಮಂದಿಯ ವಿರುದ್ಧ ಕೊಲೆ ಮೊಕದ್ದಮೆ ದಾಖಲು ಮಾಡಿಕೊಂಡ ಪೊಲೀಸರಿಗೆ ಕೊಲೆಯನ್ನು ದೃಢಪಡಿಸಬಹುದಾದ ಪೂರ್ಣ ಪ್ರಮಾಣದ ಪುರಾವೆಗಳು ಲಭ್ಯವಾಗದ ಕಾರಣದಿಂದಾಗಿ ಈ ತನಕ ಯಾರನ್ನೂ ಸಹ ಬಂಧಿಸಲು ಸಾಧ್ಯವಾಗಿಲ್ಲ.

ಸಾವಿಗೀಡಾದ ಹಾಸನ ನಗರದ ಶಾಂತಿನಗರ ನಿವಾಸಿ ಸಾರಿಗೆ ಸಂಸ್ಥೆ ಬಸ್ ಚಾಲಕ ವೀರಣ್ಣ ಮತ್ತು ಆತನ ದೊಡ್ಡಪ್ಪನ ಮಕ್ಕಳ ನಡುವೆ ಆಸ್ತಿ ವಿವಾದ ಇತ್ತು. ತನ್ನ ದೊಡ್ಡಪ್ಪ ಬಾಗಲಯ್ಯ ಎಂಬುವವರಿಂದ ದಾನ ಪತ್ರದ ಮೂಲಕ ಪಡೆದುಕೊಂಡ ಜಮೀನಿನ ವಿಚಾರವಾಗಿ ಬಾಗಲಯ್ಯ ಅವರ ಹೆಣ್ಣು ಮಕ್ಕಳು ತಗಾದೆ ತೆಗೆದು ನ್ಯಾಯಾಲಯದ ಮೆಟ್ಟಿಲು ಏರಿದ್ದಾರೆ.

ಈ ಪ್ರಕರಣದ ವಿಚಾರಣೆಯಲ್ಲಿ ಹಾಜರಾಗಲು ಫೆ.18 ರಂದು ಆಲೂರು ನ್ಯಾಯಾಲಯಕ್ಕೆ ತೆರಳಿದ್ದ ವೀರಣ್ಣ ಅವರು ಅಂದು ಸಂಜೆ ವಿವಾದಿತ ಜಮೀನಿನಲ್ಲಿ ಬೆಂದ ಸ್ಥಿತಿಯಲ್ಲಿ ಸಾವಿಗೀಡಾಗಿದ್ದರು.

ಬಳಿಕ ವೀರಣ್ಣ ಅವರ ಸಹೋದರ ಆರಂಭಿಕವಾಗಿ ನೀಡಿದ ಮಾಹಿತಿ ಆಧರಿಸಿ ಮಾಧ್ಯಮಗಳಲ್ಲಿ ಆತನ ಸಂಬಂಧಿಕರೇ ಹತ್ಯೆ ಮಾಡಿ ಪ್ರಕರಣ ಮುಚ್ಚಿ ಹಾಕಲು ಶವಕ್ಕೆ ಬೆಂಕಿ ಹಚ್ಚಿದ್ದಾರೆಂಬ ಸುದ್ದಿ ದೊಡ್ಡ ಸದ್ದು ಮಾಡಿತು. ಪೊಲೀಸ್ ಇಲಾಖೆ ಮೃತನ ಸಂಬಂಧಿಕರ ದೂರು ಆಧರಿಸಿ 11 ಜನರ ವಿರುದ್ಧ ಕೊಲೆ ಮೊಕದ್ದಮೆ ದಾಖಲು ಮಾಡಿಕೊಂಡು ಆ ಎಲ್ಲಾ ಆರೋಪಿತರನ್ನಲ್ಲದೆ, ಸಂಶಯದ ಮೇಲೆ ಗ್ರಾಮದ ಹಾಗು ಹೊರಗಿನ 10 ಕ್ಕೂ ಹೆಚ್ಚು ಜನರನ್ನು ಒಂದು ವಾರಗಳ ಕಾಲ ತೀವ್ರ ವಿಚಾರಣೆಗೆ ಗುರಿ ಪಡಿಸಿದ್ದರೂ ಈ ಪ್ರಕರಣದಲ್ಲಿ ಕೊಲೆ ಕುರಿತು ದೃಢವಾದ ನಿಲುವಿಗೆ ಬರಲು ಪೊಲೀಸರಿಗೆ ಕಾರಣವಾಗಿಲ್ಲವೆಂದು ಹೇಳಲಾಗುತ್ತಿದೆ.

ಘಟನೆ ನಡೆದ ದಿನ ಮೃತ ವೀರಣ್ಣ ಅವರು ಹೊಂದಿದ್ದ ಮೊಬೈಲ್ ಸನ್ನೆಗಳು ಹಾಗು ಆರೋಪಿಗಳಾಗಿ ಗುರುತಿಸಲ್ಪಟ್ಟ ವ್ಯಕ್ತಿಗಳ ಮೊಬೈಲ್ ಸಂಖ್ಯೆಯ ದತ್ತಾಂಶಗಳನ್ನು ತಾಂತ್ರಿಕ ಸಾಕ್ಷಿಗಳನ್ನಾಗಿ ಪರಿಗಣಿಸುವ ಪ್ರಯತ್ನದಲ್ಲೂ ತಾಳೆ ಬಾರದ ಕಾರಣ ಆರೋಪಿಗಳು ಕೃತ್ಯದಲ್ಲಿ ಭಾಗಿಯಾಗಿದ್ದಾರೆಯೇ ಅಥವಾ ಆಕಸ್ಮಿಕವಾಗಿ ಘಟನೆ ನಡೆದು ಹೋಗಿದೆಯೇ ಎಂಬ ಅನುಮಾನಗಳಿಗೆ ಉತ್ತರ ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನ ಮುಂದುವರೆಸಿದ್ದಾರೆ.

ಆರೋಪಿಗಳ ಸತತ ವಿಚಾರಣೆಯಲ್ಲದೆ, ತನ್ನ ತಮ್ಮನನ್ನು ಇಂತಹ ವ್ಯಕ್ತಿಗಳೇ ಹತ್ಯೆ ಮಾಡಿದ್ದಾಗಿ ಹೇಳಿಕೆ ಕೊಟ್ಟ ಮೃತ ವೀರಪ್ಪ ಅವರ ಸಹೋದರನನ್ನು ಪೊಲೀಸರು ಕರೆಸಿ ವಿಚಾರಣೆ ನಡೆಸಿದ್ದು, ಬಲವಾದ ಪುರಾವೆಗಳ ಕೊರತೆಯ ಕಾರಣದಿಂದಾಗಿ ಆರೋಪಿಗಳ ಬಂಧನವನ್ನು ಖಚಿತ ಪಡಿಸುವ ತೀರ್ಮಾನಕ್ಕೆ ಬರಲು ಸಾಧ್ಯವಾಗಿಲ್ಲವೆಂದು ಹೇಳಲಾಗುತ್ತಿದೆ. ಈ ಪ್ರಕರಣದಲ್ಲಿ ಕೃತ್ಯದಲ್ಲಿ ಭಾಗಿಯಾಗದ ಅಮಾಯಕರನ್ನು ಸಿಲುಕಿಸುವುದು ನ್ಯಾಯಬದ್ಧವಲ್ಲವೆಂಬ ಅಂಶಗಳ ವಿಚಾರವಾಗಿ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿರುವ ತನಿಖಾಧಿಕಾರಿಗಳ ತಂಡವು ಆರೋಪಿಗಳು ಒಪ್ಪಿ ಕೊಂಡಲ್ಲಿ ಮಂಪರು ಪರೀಕ್ಷೆಗೆ ಕೆಲವರನ್ನು ಗುರಿ ಪಡಿಸಿ ವಾಸ್ತವಾಂಶವನ್ನು ಬೆಳಕಿಗೆ ತರಬಹುದೆಂಬ ಆಲೋಚನೆಯಲ್ಲಿ ಇದ್ದಾರೆಂದು ಹೇಳಲಾಗುತ್ತಿದೆ.

ಈ ಪ್ರಕರಣದ ವಿಚಾರವಾಗಿ ಅನೇಕ ಸಂಶಯಾತ್ಮಕ ಸಂಗತಿಗಳು ಸ್ಥಳೀಯವಾಗಿ ಚರ್ಚೆಯಲ್ಲಿದ್ದು, ಪೊಲೀಸರು ಯಾವ ನಿಲುವಿಗೆ ಬರಲಿದ್ದಾರೆಂಬ ಕೌತುಕ ಇದೆ. ಪೊಲೀಸ್ ಇಲಾಖೆಗೆ ಈ ಪ್ರಕರಣದಲ್ಲಿ ವಾಸ್ತವಾಂಶವನ್ನು ಬೆಳಕಿಗೆ ತರುವ ಸವಾಲಂತೂ ಎದುರಾಗಿದೆ.

ಮಾನಸಿಕ ಒತ್ತಡ, ಪರಿಣಾಮ ಮತ್ತು ನಿಯಂತ್ರಣ ಕ್ರಮಗಳು



ಮನಃಏವ ಮನುಷ್ಯಾನಾಂಕಾರಣಂ ಬಂಧ ಮೋಕ್ಷಯೋಃ ಎಂಬಂತೆ ಮನುಷ್ಯನ ಸುಖ ದುಃಖಗಳಿಗೆ ಮನಸ್ಸೇ ಮೂಲ ಕಾರಣ ಎಂಬ ಸತ್ಯವು ಅರಿವಾಗುತ್ತದೆ. ಮಾನಸಿಕ ಆರೋಗ್ಯ ನಮ್ಮ ದೇಹದ ಮೇಲೆ ಪರಿಣಾಮವನ್ನು ಬೀರುತ್ತದೆ. ಪ್ರಸ್ತುತ ಸ್ಪರ್ಧಾತ್ಮಕ ಪ್ರಪಂಚದಲ್ಲಿ ನಾವೆಲ್ಲರೂ ಯಂತ್ರ ಮಾನವರಾಗುತ್ತಿದ್ದೇವೆ. ಹಲವಾರು ಒತ್ತಡಗಳಿಂದ ಬಳಲುತ್ತಿದ್ದೇವೆ. ಮನೆಯ ವಾತಾವರಣವಾಗಲಿ, ಕೆಲಸ ಮಾಡುವ ಪರಿಸರವಾಗಲಿ, ಪ್ರಯಾಣ ಮಾಡುವಾಗ ಅಥವಾ ಧಾರ್ಮಿಕ ಕಾರ್ಯಕ್ರಮಗಳಾಗಲಿ, ಎಲ್ಲವನ್ನೂ ಒತ್ತಡಗಳಿಗೆ ಒಳಗಾಗಿ ಮಾಡ ಬೇಕಾಗುತ್ತದೆ. ಅದರಲ್ಲು ಬೆಳಿಗ್ಗೆ ಮನೆ ಬಿಟ್ಟರೆ, ಸಾಯಂಕಾಲ ಕ್ಷೇಮವಾಗಿ ವಾಪಾಸಾಗುವ ಭರವಸೆ ಇರುವುದಿಲ್ಲ. ಜಾತಿ-ಕಲಹ, ಕೋಮು ಗಲಭೆ, ವಿವಿಧ ಕಾರ್ಖಾನೆಗಳ ನೌಕರರ ಚಳವಳಿ, ರಸ್ತೆ ತಡೆ ಹೀಗೆ ಹಲವಾರುಒತ್ತಡಕ್ಕೆ ಒಳಗಾಗಿ ಮನೋಕ್ಷೋಭೆಗೆ ತುತ್ತಾಗಬೇಕಾಗುತ್ತದೆ. ಈ ಒತ್ತಡದ ಜೀವನದಲ್ಲಿ ಮಾನಸಿಕ ಸ್ವಾಸ್ಥ ಕಾಪಾಡಿಕೊಳ್ಳುವುದು ಅವಶ್ಯಕ.

ಸ್ಟ್ರೆಸ್ ಅಥವಾ ಒತ್ತಡವನ್ನು, ಪರಿಸರದಲ್ಲಿನ ಹೆಚ್ಚಿನ ಬೇಡಿಕೆಗೆ ಪ್ರತಿಕ್ರಿಯಿಸಲು, ಮನುಷ್ಯನ ಮನಸ್ಸು ಹಾಗು ದೇಹ ಸಿದ್ಧವಾಗುವ ಸ್ಥಿತಿ ಎಂದು ಹೇಳಬಹುದು.

ನಾಗರಿಕತೆಯು ಬೆಳೆಯುತ್ತಿದ್ದ ಹಾಗೆ ತೀವ್ರತರವಾಗಿ ಬದಲಾಗುತ್ತಿರುವ ಪರಿಸರಕ್ಕೆ ಹೊಂದಿಕೊಳ್ಳುವ ಅವಶ್ಯಕತೆಯ ಪರಿಣಾಮದಿಂದ ನಮ್ಮ ಒತ್ತಡಗಳು ಹೆಚ್ಚಾಗುತ್ತಲೇ ಇವೆ. ಇದನ್ನು ನಾವು ಮನೋವೈಜ್ಞಾನಿಕವಾಗಿ ಸ್ಟ್ರೆಸ್ ಅಂಡ್ ಸ್ಟ್ರೈನ್ ಎಂದು ಕರೆಯುತ್ತೇವೆ. ಎಲ್ಲಾ ರಾಷ್ಟ್ರಗಳೂ, ಎಲ್ಲಾ ಜನಾಂಗಗಳು ತಾವು ಬೆಳೆಯುತ್ತಾ ಹೋದ ಹಾಗೆ ಅನುಭವಿಸಲೇ ಬೇಕಾದ ಈ ಒತ್ತಡ ಎಂಬ ವ್ಯಾದಿಯೊಂದಿಗೆ ಹೊಂದಿಕೊಂಡು ಹೋಗುವುದೇ ಒಂದು ಸವಾಲಾಗಿದೆ.

ಮನೋವೈಜ್ಞಾನಿಕವಾಗಿ ಸ್ವಲ್ಪ ಮಟ್ಟಿನ ಒತ್ತಡ ಅವಶ್ಯಕವಾಗಿರುತ್ತದೆ. ಇದು ನಮ್ಮ ಕೆಲಸ ಕಾರ್ಯಗಳ ದಕ್ಷತೆಯನ್ನು ಹೆಚ್ಚಿಸುವುದಲ್ಲದೆ, ಪೂರ್ಣವಾಗಿ ನಮ್ಮನ್ನು ನಾವು ಕೆಲಸದಲ್ಲಿ ತೊಡಗಿಸಿಕೊಳ್ಳಲು ಸಹಾಯಕವಾಗಿರುತ್ತದೆ. ಮಿತಿ ಮೀರಿದ ಒತ್ತಡ ನಮ್ಮ ಕಾರ್ಯದಕ್ಷತೆಯನ್ನು ಕುಗ್ಗಿಸಿ, ನಾವು ನಮ್ಮ ಸುತ್ತಮುತ್ತಲಿನ ಪರಿಸರಕ್ಕೆ ಹೊಂದಿಕೊಂಡು ಹೋಗಲು ಅಡ್ಡಿಯನ್ನುಂಟು ಮಾಡುತ್ತದೆ.

ಯಾವುದೇ ವಿಷಯವಿರಲಿ, ಒತ್ತಡಕ್ಕೆ ಪ್ರತಿಕ್ರಿಯಿಸಬೇಕಾದ ಸ್ಥಿತಿ, ದಿನ ಕಳೆಯುತ್ತಾ ಹೆಚ್ಚುತ್ತಲೇ ಹೋಗುವುದರಿಂದ ಇದನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಗಿ ಹೋಗಿದೆ. ಪರಿಸರದಲ್ಲಿನ ಬದಲಾವಣೆ ಹಿತಕಾರಿಯಾಗಿರಲಿ ಅಥವಾ ಅಹಿತಕಾರಿಯಾಗಿರಲಿ, ಹೊರಗಿನ ಪರಿಸರದ ಒತ್ತಡ, ಮನಸ್ಸಿನಲ್ಲಿ ಆತಂಕ, ಅಧೈರ್ಯ, ಅಭದ್ರತೆ ಮೂಡಿಸಬಹುದು. ಇದನ್ನು ಪ್ರತಿಯೊಬ್ಬನೂ ತನ್ನ ವ್ಯಕ್ತಿತ್ವಕ್ಕನುಗುಣವಾಗಿ ಎದುರಿಸುತ್ತಾ ಹೊಂದಾಣಿಕೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಕೆಲವರು ಮದ್ಯ ವ್ಯಸನಿಗಳಾಗಬಹುದು ಮತ್ತೆ ಕೆಲವರು ಧೂಮಪಾನಕ್ಕೆ ಮೊರೆ ಹೋಗಬಹುದು. ಹೆಂಡತಿ, ಮಕ್ಕಳನ್ನು ದಂಡಿಸಬಹುದು ಅಥವಾ ಅತಿಯಾದ ಧಾರ್ಮಿಕ ಆಚರಣೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬಹುದು. ಇಲ್ಲವೇ ಕಳ್ಳತನ, ಸುಳ್ಳು ಹೇಳುವಿಕೆ, ಅನಾಚಾರ, ಅತ್ಯಾಚಾರಗಳಲ್ಲಿ, ತೊಡಗಿತನ್ನ ಮಾನಸಿಕ ಆಕ್ರೋಶಕ್ಕೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಬಹುದು.

ಒತ್ತಡಗಳು ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಸಂದರ್ಭ-ಸನ್ನಿವೇಶಗಳೆಂದರೆ, ಮನೆಯಲ್ಲಿ ಅತ್ತೆ-ಸೊಸೆ ಜಗಳ, ಗಂಡ-ಹೆಂಡತಿಯ ನಡುವಿನ ಭಾವನಾತ್ಮಕ ಸಂಪರ್ಕದ ಕೊರತೆ, ಗೊಂದಲದ ವಾತಾವರಣ, ಹೆಚ್ಚಿನ ವಾಹನ ಸಂಚಾರ, ದೈಹಿಕ ಕಾಯಿಲೆಗಳು, ನಿರುದ್ಯೋಗ, ನಿರಾಶೆಯ ಪರಿಸರ, ಬಾಹ್ಯ ಪರಿಸರದ ಹಾಗು ಆಂತರಿಕ ಬೇಡಿಕೆಗಳು.

ಜೀವನ ಶೈಲಿಯಲ್ಲಿ ತೀವ್ರತರವಾದ ಬದಲಾ ವಣೆಗಳು, ಗುಂಪಿನಲ್ಲಿ ಹೊಂದಿಕೊಳ್ಳುವ ಸಾಮರ್ಥ್ಯ ಇಲ್ಲದಿರುವುದು, ಅಂಗವೈಕಲ್ಯ, ಇತ್ಯಾದಿಗಳೇ ಅಲ್ಲದೆ ಸುಧಾರಣೆಯಾಗದ ಆರ್ಥಿಕ ಪರಿಸ್ಥಿತಿ, ಕೆಲಸದಲ್ಲಿ ನಿರಾಸಕ್ತಿ, ಸವಾಲುಗಳನ್ನು ಎದುರಿಸಿ ಕೆಲಸ ಮಾಡುವ ಅವಕಾಶ ಗಳ ಕೊರತೆ, ತುಂಬಾ ಹೆಚ್ಚು ಅಥವಾ ತುಂಬಾ ಕಡಿಮೆ ಕೆಲಸದ ಸಮಯ, ಅತಿ ಹೆಚ್ಚು ವಿರಾಮ, ಅದನ್ನು ಕಳೆಯಲು ದುಶ್ಚಟಗಳಿಗೆ ಮೊರೆ ಹೋಗಬೇಕಾದ ಸಂದರ್ಭಗಳು.

ಸಂತೋಷಕರ ಸಂಗತಿಗಳಾದ ಮಗುವಿನ ಜನನ, ತಂದೆ-ತಾಯಿಗೆ ಮಕ್ಕಳನ್ನು ಶಾಲೆಗೆ ಸೇರಿಸುವ ಸಂದರ್ಭ, ವಿದ್ಯಾರ್ಥಿಗಳಿಗೆ, ಹೆಚ್ಚಿನ ಅಂಕಗಳನ್ನುಗಳಿಸಿಯೂ ವೃತ್ತಿಶಿಕ್ಷಣಕ್ಕೆ ಅವಕಾಶ ಸಿಗುತ್ತದೆಯೋ ಇಲ್ಲವೋ ಎನ್ನುವ ಅನಿಶ್ಚಿತ ಪರಿಸ್ಥಿತಿ, ಇತ್ತೀಚಿನ ದಿನಗಳಲ್ಲಿ ಸೆಕೆಂಡ್‌ಇಯರ್ ಪಿ.ಯು.ಸಿ. ವಿದ್ಯಾರ್ಥಿಗಳು ತಂದೆ-ತಾಯಿಯ ಆಶೋತ್ತರಗಳನ್ನು ಈಡೇರಿಸುವ ಸಲುವಾಗಿ ಟ್ಯೂಷನ್ ಹಾಗು ಕಾಲೇಜಿಗೆಂದು ಬೆಳಿಗ್ಗೆಯಿಂದ ರಾತ್ರಿಯವರೆಗೆ ಮನೆಯಿಂದ ಹೊರಗೆ ಉಳಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಇವೆಲ್ಲವೂ ಒತ್ತಡವನ್ನುಂಟು ಮಾಡುವಂತ ಹವುಗಳಾಗಿವೆ. ಮಾನಸಿಕ ಒತ್ತಡ ಹೆಚ್ಚಾದಾಗ, ಹಲವಾರು ಮನೋದೈಹಿಕ ರೋಗ ಚಿಹ್ನೆಗಳು ಕಾಣಿಸಿಕೊಳ್ಳಬಹುದು. ಮೈಗ್ರೇನ್, ಏಕಾಗ್ರತೆಯ ಕೊರತೆ, ನಿದ್ರಾಹೀನತೆ, ಅತಿಭಯ, ಗೀಳು-ಚಟ, (ಅಬ್ಸಿಸಿವ್-ಕಂಪಲ್ಸಿವ್), ಅಜೀರ್ಣ, ಮಲಬದ್ಧತೆ, ಸಿಟ್ಟು, ಸಿಡುಕು, ಕತ್ತು ಹಾಗು ಬೆನ್ನಿನಲ್ಲಿ ನೋವು, ಇತ್ಯಾದಿಗಳು.

ಒತ್ತಡವನ್ನು ನಿಯಂತ್ರಣದಲ್ಲಿಡಲು ತೆಗೆದುಕೊಳ್ಳಬೇಕಾದ ಕ್ರಮಗಳೆಂದರೆ

ದೈಹಿಕ ಆರೋಗ್ಯದ ಬಗ್ಗೆ ಗಮನವೀ ಯುವುದು

ಪ್ರತಿದಿನ ವ್ಯಾಯಾಮ, ಗುಂಪಿನ ಆಟಗಳಲ್ಲಿ ಭಾಗವಹಿಸುವುದು

ಉತ್ತಮ ಆಹಾರ ಸೇವನೆ, ಉಪ್ಪು ಹಾಗು ಸಕ್ಕರೆಯ ನಿಯಮಿತ ಬಳಕೆ

ಧೂಮಪಾನ,ಮದ್ಯಸೇವನೆಯನ್ನು ಬಿಡುವುದು ಇದರಿಂದ ಸಿಗುವ ಮನಃಶಾಂತಿತಾತ್ಕಾಲಿಕವಾದುದು.(ಇವುಗಳ ಸೇವನೆಯಿಂದ ಪೂರ್ಣ ಮನಃಶಾಂತಿ ಸಿಗುತ್ತದೆ ಎಂಬುದು ಭ್ರಮೆ)

ಸಮಯಕ್ಕೆ ಸರಿಯಾಗಿಆಹಾರ ಸೇವನೆ ಹಾಗು ಕಣ್ತುಂಬಾ ನಿದ್ರೆ

ಕೆಲಸದಲ್ಲಿ ಮನೋರಂಜನೆ ಕಂಡುಕೊಳ್ಳುವ ಮನೋಭಾವ ಬೆಳೆಸಿಕೊಳ್ಳುವುದು

ಮೇಲಾಧಿಕಾರಿಗಳು ಹಾಗು ಸಹವರ್ತಿಗಳೊಂದಿಗೆ ಸೌಹಾರ್ದಯುತ ಸಂಬಂಧ. ಇತರರೊಂದಿಗೆ ಹೋಲಿಕೆ ಮಾಡಿಕೊಳ್ಳುವ ಮನೋಭಾವವನ್ನು ಬಿಡುವುದು. ಆತ್ಮವಿಶ್ವಾಸ ಬೆಳೆಸಿಕೊಳ್ಳುವದು, ಯಾರಲ್ಲಿನಂಬಿಕೆಯಿರುತ್ತದೆಯೋ ಅವರೊಡನೆ ಸಮಸ್ಯೆಯನ್ನು ಚರ್ಚಿಸು ವುದು. ವಾಕಿಂಗ್ ಹೋಗುವುದು, ತೋಟಗಾರಿಕೆ, ಚಿತ್ರಕಲೆ, ಸಂಗೀತ, ಮುಂತಾದ ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳುವುದು. ಜಾಕಬ್ಸನ್ ಪ್ರೊಗ್ರೆಸಿವ್ ರಿಲ್ಯಾಕ್ಸೇಷನ್, ಇತ್ಯಾದಿಗಳು ಒತ್ತಡವನ್ನುಎದುರಿಸಲು ಸಹಾಯಕವಾಗುತ್ತವೆ.

-ಎನ್.ಆರ್.ಪ್ರಶಾಂತ್, ಆಪ್ತ ಸಲಹಾ ಮನಃಶಾಸ್ತ್ರಜ್ಞರು, ಮೊ: 9481545719

ಖಮೇನಿ ಹತ್ಯೆ: ಅಮೇರಿಕ-ಇಸ್ರೇಲ್ ವಿರುದ್ಧ ಅಕ್ರೋಶ: ಕಾಶ್ಮೀರದಲ್ಲಿ ಪ್ರತಿಭಟನೆ

ಶ್ರೀನಗರ: ಅಮೇರಿಕ-ಇಸ್ರೇಲ್ ಜಂಟಿ ದಾಳಿಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆ ಖಂಡಿಸಿ ಜಮ್ಮು ಮತ್ತು ಕಾಶ್ಮೀರದಾದ್ಯಂತ ಬೃಹತ್ ಪ್ರತಿಭಟನೆಗಳನ್ನು ನಡೆಸಲಾಯಿತು.

ಕಾಶ್ಮೀರದ ಧರ್ಮಗುರು, ಹುರಿಯತ್ ಕಾನ್ಫರೆನ್ಸ್ ಅಧ್ಯಕ್ಷ ಮಿರ್ವಾಯಿಜ್ ಉಮರ್ ಫಾರೂಕ್ ಅವರು ಕಾಶ್ಮೀರದಾದ್ಯಂತ ಸೋಮವಾರ ಬಂದ್‌ಗೆ ಕರೆ ನೀಡಿದ್ದಾರೆ. ಮುನ್ನೆಚ್ಚರಿಕೆ ಕ್ರಮವಾಗಿ ಸೋಮವಾರ ಮತ್ತು ಮಂಗಳವಾರ ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲಾಲ್ ಚೌಕ್ ಸೇರಿ ಶ್ರೀನಗರದ ಮಧ್ಯಭಾಗದಲ್ಲಿ ಖಮೇನಿ ಭಾವಚಿತ್ರಗಳನ್ನು ಹಿಡಿದಿದ್ದ ನೂರಾರು ಪ್ರತಿಭಟನಕಾರರು ಕಪ್ಪು ಬಾವುಟಗಳನ್ನು ಬೀಸುತ್ತಾ ಅಮೇರಿಕ ಮತ್ತು ಇಸ್ರೇಲ್ ವಿರುದ್ಧ ಘೋಷಣೆಗಳನ್ನು ಕೂಗಿದ್ದಾರೆ.ಪ್ರತಿಭಟನೆಯಿಂದಾಗಿ ಅಂಗಡಿ ಮುಂಗಟ್ಟುಗಳನ್ನು ಮುಚ್ಚಲಾಗಿತ್ತು. ಕೆಲವೆಡೆ ಸಂಚಾರ ದಟ್ಟನೆ ಉಂಟಾಗಿತ್ತು ಎಂದು ವರದಿಯಾಗಿದೆ. ಸುನ್ನಿ ನಾಯಕರು ಮತ್ತು ರಾಜಕಾರಣಿಗಳು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು. ಪಿಡಿಪಿ ನಾಯಕ ವಹೀದ್ ಪಾರಾ ಮತ್ತು ಜುಹೈಬ್ ಯೂಸುಫ್ ಮಿರ್ ಅವರು ಲಾಲ್ ಚೌಕ್‌ನಲ್ಲಿ ಪ್ರತಿಭಟನಾಕಾರರೊಂದಿಗೆ ಕಾಣಿಸಿಕೊಂಡಿದ್ದರು.

ಇಸ್ರೇಲ್‌ನ ಕ್ರಮಗಳಿಗೆ ಅಂತರ ರಾಷ್ಟ್ರೀಯ ಹೊಣೆಗಾರಿಕೆಯ ಕೊರತೆ ಇದೆ ಎಂದು ಹುರಿಯತ್ ಕಾನ್ಫರೆನ್ಸ್ ಅಧ್ಯಕ್ಷ ಮಿರ್ವಾಯಿಜ್ ಉಮರ್ ಫಾರೂಕ್ ಟೀಕಿಸಿದ್ದಾರೆ. ಹಾಗೆಯೇ ಶಾಂತಿಯುತ ಬಂದ್ ಆಚರಿಸಲು ಮತ್ತು ಖಮೇನಿ ಪರ ವಿಶೇಷ ಪ್ರಾರ್ಥನೆ ಸಲ್ಲಿಸುವಂತೆ ಮನವಿ ಮಾಡಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಮತ್ತು ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಇರಾನ್‌ಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಇಸ್ರೇಲ್‌ನ ಮತ್ತೊಂದು ಆಕ್ರಮಣಕಾರಿ ಕೃತ್ಯವನ್ನು ಎದುರಿಸುತ್ತಿರುವ ಇರಾನ್ ಮತ್ತು ಅಲ್ಲಿನ ಜನರಿಗಾಗಿ ನಾನು ಪ್ರಾರ್ಥನೆ ಸಲ್ಲಿಸುತ್ತೇನೆಂದು ಅವರು ಹೇಳಿದ್ದಾರೆ.

ಇರಾನ್ ಅನ್ನು ಮುಸ್ಲಿಂ ಸಮುದಾಯದ ನಿರ್ಣಾಯಕ ಧ್ವನಿ ಎಂದು ಬಣ್ಣಿಸಿರುವ ಮುಫ್ತಿ, ಯಾವುದೇ ಕ್ಷಿಪಣಿ ಅಥವಾ ಬೆದರಿಕೆ ಅದರ ಸಾರ್ವಭೌಮತ್ವವನ್ನು ನಂದಿಸಲು ಅಥವಾ ಚೈತನ್ಯವನ್ನು ಮುರಿಯಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದ್ದಾರೆ.

ಶ್ರೀನಗರ, ಬುಡ್ಗಾಮ್ ಮತ್ತು ಬಂಡಿಪೋರಾದಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದೆ. ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚುವರಿ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆಂದು ಪೊಲೀಸರು ತಿಳಿಸಿದ್ದಾರೆ.

ವದಂತಿ ಹರಡುವುದನ್ನು ತಡೆಗಟ್ಟುವ ಮುನ್ನೆಚ್ಚರಿಕೆ ಕ್ರಮವಾಗಿ ಕಣಿವೆಯ ಕೆಲವು ಭಾಗಗಳಲ್ಲಿ ಮೊಬೈಲ್ ಇಂಟರ್‌ನೆಟ್ ಸೇವೆಯನ್ನು ಹಗಲಿನಲ್ಲಿ ಸ್ಥಗಿತಗೊಳಿಸಲಾಗಿದೆ ಅಧಿಕಾರಿಗಳು ತಿಳಿಸಿದ್ದಾರೆ.

2019ರಲ್ಲಿ ಜಮ್ಮು-ಕಾಶ್ಮೀರಕ್ಕೆ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನ ರದ್ದು ಪಡಿಸಿದ್ದನ್ನು ಖಂಡಿಸಿ ಕಾಶ್ಮೀರದ ಹಲವು ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದಿದ್ದವು.

ಮುದಿ ಕಪ್ಪೆ

ಅಡಿಗೆಯ ಮನೆಯಿಂದ ಉಮೆಯು ಓಡಿ ಬಂದು ''ನೀರಿನ ಕೊಡದ ಬಳಿಗೆ ಒಂದು ಕಪ್ಪೆ ಕುಳಿತಿದೆ. ಹೊರಗೆ ಹಾಕಿ ಕೊಡಿ'' ಅಂದಳು. ತನಗೆ ಹೆದರದವಳು ಒಂದು ಕಪ್ಪೆಗೆ ಅಂಜುತ್ತಾಳಲ್ಲ ಅಂದುಕೊಂಡು ಉಮೇಶ ಒಳಗೆ ಬಂದ.

ಕಪ್ಪೆಯು ಭದ್ರಾಸನ ಹಾಕಿತ್ತು. ಉಮೇಶ ಒಂದು ಸೌದೆಯಿಂದ ಕೊಡವನ್ನು ಕುಟ್ಟಿದ. ಕಪ್ಪೆ ಕದಲಲಿಲ್ಲ. ಅವನ ಹೆಂಡತಿಯೇ ಅವನಿಗೆ ಹೆದರುವದಿಲ್ಲ, ಅಂದ ಮೇಲೆ ಕಪ್ಪೆ ಬೆದರುತ್ತದೆಯೇ? ಕಪ್ಪೆಗೇ ಹೊಡೆಯಲು ಅವನ ಮನಸ್ಸಾ ಗಲಿಲ್ಲ. ಈ ಕಪ್ಪೆಯನ್ನೋಡಿಸಲು ಹಿಂದೆ ಮುಂದೆ ನೋಡುವವರು ಯುದ್ಧಗಿದ್ದಕ್ಕೆ ಹೋದರೆ. ಎಂದು ಉಮೆ ಚುಚ್ಚಿದಳು. ತನಗೆ ಕಪ್ಪೆಯನ್ನೊಡಿಸುವ ಧೈರವೂ ಇಲ್ಲವೆಂದು ಮಡದಿ ತೀರ್ಮಾನಿಸಿ ಕೊಂಡಳಲ್ಲ ಎಂದು ಉಮೇಶನಿಗೆ ನಾಚಿಕೆಯಾಯಿತು. ಆದರೆ ಅವನ ಸಂಕಟ ಅವಳಿಗೆಲ್ಲಿ ತಿಳಿಯಬೇಕು? ಕುರುಕ್ಷೇತ್ರದಲ್ಲಿ ಬಿಲ್ಲು ಬಾಣ ಬಿಸಾಡಿ ನಿಂತ ಅರ್ಜುನನಂತಾಗಿದ್ದ ಉಮೇಶ ಅವನ ತಲೆತುಂಬ ವಿಚಾರ.

ಪಾಪ, ಈ ಕಪ್ಪೆ ಕಚ್ಚುವದಿಲ್ಲ. ಏನೂ ಕದ್ದು ತಿನ್ನುವದಿಲ್ಲಸುಮ್ಮನೆ ನೀರಿನ ತಂಪಿಗಾಗಿ ಕೊಡದ ಬಳಿಗೆ ಕುಳಿತಿದೆ. ಹೊಡೆದರೆ ಸಾಯುವದು. ನನ್ನ ಮೇಲೆ ತಿರುಗಿ ಬೀಳುವ ಪಾಶ್ವೀವೃತ್ತಿಯದಲ್ಲ. ಇಂಥಹ ಪ್ರಾಣಿಯನ್ನು ಓಡಿಸಬೇಕೇ, ಏಕೆ? ನನ್ನ ಮನೆಯೊಳಗೆ ಬಂದಿತೆಂದೇ? ಹೆಂಡತಿ ಹೇಳುತ್ತಾಳೆಂದೇ? ನನಗೆ ಈ ಕಪ್ಪೆಯನ್ನು ಹೊಡೆಯಲು ಯಾವ ಅಧಿಕಾರವಿದೆ? ನನ್ನ ಮನೆಯೊಳಗೆ ಬಂದಿತೆಂದು ನಿಜ. ಆದರೆ ಈ ಮನೆ ನನ್ನದು ಎಷ್ಟರ ಮಟ್ಟಿಗೆ? ಬಾಡಿಗೆ ಕೊಟ್ಟು ಬಿಟ್ಟರೆ ಮನೆ ನನ್ನದಾಗಲಿಲ್ಲ. ನಾಳೆ ಮಾಲಿಕನು ಬಂದು ಹೊರಡಿರಿ ಎಂದರೆ ನಾನು-ನಾವು-ಕಪ್ಪೆಯಂತೆ ಕುಳಿತು ಕೊಳ್ಳುತ್ತೇವೆ! ಇನ್ನು ನಾನು. ಎಂದರೆ ಹತ್ತುವರುಷಗಳ ಹಿಂದೆ ವಿದ್ಯಾರ್ಥಿಯಾಗಿದ್ದಾಗ ಎಲ್ಲಿಯೋ ಹೇಗೋ ದಿನ ಕಳೆಯುತ್ತಿದ್ದಾಗ ಜ್ವರ ಬಂದು ನರಳುತ್ತಿದ್ದಾಗ ಈ ಕಪ್ಪೆಯಂತೆ ಒಂದು ಮೂಲೆಯಲ್ಲಿ ಬಿದ್ದಿದ್ದಾಗ ಯಾರೋ ತಾಯಿಯಂತೆ ಆರೈಕೆ ಮಾಡಿ ಬದುಕಿಸದಿದ್ದರೆ. ಬೇಗ ಓಡಿಸಿ ಅಂದ್ರೆ, ಎಂದು ಉಮೆಯು ತನ್ನ ಗೀತೆಯನ್ನು ನುಡಿದಳು. ಉಮೇಶನು ತನ್ನ ಹತ್ತರ ಸಾಧ್ಯವಿಲ್ಲವೆಂದು ಸೌದೆಯನ್ನು ಬಿಸಾಡಿ ಕೋಣೆಯೊಳಗೆ ನಡೆದನು. ಅವಳು ನಕ್ಕು, ತನ್ನ ಅತ್ತೆಯನ್ನು ಕರೆದು ಹೇಳಿ ಚೇಷ್ಟೆ ಮಾಡಿದಳು. ಕಲಿತವರೆಲ್ಲಾ ಹೀಗೇ, ಪುಕ್ಕರು. ಕಪ್ಪೆ ಓಡಿಸಲಿಕ್ಕೂ ಬರುವದಿಲ್ಲ! ಎಂದು ಅತ್ತೆ ಸೊಸೆಯರಿಬ್ಬರೂ ಕೂಡಿ ಟೀಕಿಸಿದರು. ಉಮೇಶ ಕೇಳಿಯೂ ಕೇಳದವನಂತೆ ಮಲಗಿದ.

ಹೊರಗೆ ಮಲಗಿದ ಆಳನ್ನು ಕರೆದು ಒಂದೇ ನಿಮಿಷದೊಳಗೆ ಓಡಿಸಿ ಬಂದು ಗಂಡನಿಗೆ ''ನಿಮ್ಮ ಹತ್ತಿರ ಆಗದಿದ್ದರೇನು? ಸುಬ್ಬ ಒಂದೇ ಪೆಟ್ಟಿಗೆ ಓಡಿಸಿಬಿಟ್ಟ, ಓಹೋ!'' ಅಂದಳು ಉಮೆ.

ಉಮೇಶನಿಗೆ ನಿದ್ದೆಯೇ ಹತ್ತಲಿಲ್ಲ. ತಾನು ಹೇಡಿಯೇ? ಎಂದು ತನ್ನನ್ನೇ ಕೇಳಿ ಕೊಂಡ. ಹೇಡಿಯಾಗಿದ್ದರೆ ದಾರಿದ್ರ್ಯದ ದಿನ ಗಳನ್ನು ದಾಟಿ ಊರೂರಲೆದು ಕಲಿಯಲು ಸಮರ್ಥನಾಗುತ್ತಿದ್ದಿಲ್ಲ. ಆದರೆ ಸಾಹಸಕ್ಕೂ ಕಪ್ಪೆಯನ್ನು ಹೊಡೆದೋಡಿಸುವದಕ್ಕೂ ಯಾವ ಸಂಬಂಧ? ಈ ಕೆಲಸದಲ್ಲಿ ಹೇಡಿಯೇ ಆದೆ. ಆಗಲಿ, ಅಡ್ಡಿಯಿಲ್ಲ. ಆದರೆ ಹೆಂಡತಿಯೂ ಚೇಷ್ಟೆ ಮಾಡುವಂತಾಯಿತಲ್ಲ.

ಬದಿಗೆ ಉಮೆಯು ನಿದ್ದೆ ಹೋಗಿದ್ದಳು. ಉಮೇಶನು ಎದ್ದು ಆ ಕಪ್ಪೆಯನ್ನು ಹೊರಗೆ ಹಾಕಿ ಮುಚ್ಚಿದ ಬಾಗಿಲನ್ನೇ ತೆರೆದ. ಬೇಟ್ರಿ ಹಿಡಿದು ನೋಡಿದ. ಅಲ್ಲೇ ಇತ್ತು ಆ ಮುದಿಕಪ್ಪೆ! ಅದು ಉಬ್ಬಸ ಬಿಡುವದೂ ಅವನಿಗೆ ಕಂಡಿತು. ಅದಕ್ಕೆ ಮಾತಾಡಲು ಬರುತ್ತಿದ್ದರೆ ಏನೆಲ್ಲ ಹೇಳುತ್ತಿತ್ತೋ! ಉಮೇಶ ಏನೇನು ಹೇಳುತ್ತಿದ್ದನೋ! ಒಂದೆರಡು ನಿಮಿಷ ಅವನು ಏನೋ ವಿಚಾರಿಸಿದ. ಮೂರು ನಾಲ್ಕು ಸಲ ಬೇಟ್ರಿಯ ಬೆಳಕು ಬಿಟ್ಟು ನೋಡಿದ. ಕೊನೆಗೆ ಒಂದು ತಂಬಿಗೆ ನೀರು ತಂದು ಅದರ ಬಳಿಗೆ ಸುರಿದು ಬಾಗಿಲ ಹಾಕಿ ಕೊಂಡು ಬಂದ. ''ಎಲ್ಲಿಗೆ ಹೋಗಿದ್ದಿರಿ?'' ಉಮೆಗೆ ಎಚ್ಚರವಾಗಿ ಬಿಟ್ಟಿತ್ತು! ''ನಿತ್ಯದಂತೆ ಹೊರಗೆ ಹೋಗಿದ್ದೆ'' ಎಂದು ಮಲಗಿದ. ಅವನಿಗೆ ಹಿಂದಿನ ದಾರಿದ್ರ್ಯವೆಲ್ಲ ನೆನಪಾಗಿ ಕನಸಿನಲ್ಲಿಯೂ ತೋರಿಸಿ ಕೊಂಡವು. ಹೀಗೆ ಸ್ಮೃತಿ ಪಟಲವನ್ನು ತಟ್ಟಿದವರು ಯಾರು? ಮುದಿ ಕಪ್ಪೆಯೋ ಮಡದಿಯೋ ಎಂಬುದು ಮಾತ್ರ ಅವನಿಗೆ ತಿಳಿಯಲಿಲ್ಲ.

ವಿಜ್ಞಾನವು ಎಲ್ಲರ ನಿತ್ಯ ಜೀವನದಲ್ಲಿ ಹಾಸುಹೊಕ್ಕಾಗಿದೆ

ಮನೆಯ ಬಾಗಿಲ ಮೇಲೆ ಸೂರ್ಯನ ಬೆಳಕು ಮೂಡಿದೆ. ಹಾಸಿಗೆಯಿಂದ ಮೇಲೆದ್ದು ಬಂದು ಬಾಗಿಲು ತೆರೆದೆ. ಸೂರ್ಯನ ಪ್ರಕಾಶಮಾನವಾದ ಬೆಳಕು ಕಣ್ಣನ್ನು ರಾಚಿತು. ಕೂಡಲೇ ಕಣ್ಣನ್ನು ಸ್ವಲ್ಪ ಚಿಕ್ಕದಾಗಿ ಮಾಡಿ ಬಾಗಿಲಿಂದ ಹೊರಬಂದು ನೋಡಿದೆ. ಗಿಡದಲ್ಲಿ ಹೂಗಳು ಅರಳಿ ನಗುತ್ತಿರುವಂತೆ ಅನ್ನಿಸಿತು.

ಅರೆರೆ! ಈ ಹೂಗಳು ನಿನ್ನೆ ಸಂಜೆ ನೋಡಿದಾಗ ಮೊಗ್ಗುಗಳಾಗಿದ್ದವು. ಈಗ ಅರಳಿಸಿ. ಕಂಪನ್ನು ಸೂಸುತ್ತಿವೆ. ಇದು ಸೂರ್ಯನ ಬೆಳಕಿನ ಪವಾಡವೇ ಅನ್ನಿಸಿತು. ಪಕ್ಕದಲ್ಲಿಯೇ ಬೆಳಗಿನ ವೃತ್ತಪತ್ರಿಕೆ ಬಂದಿತ್ತು. ನ್ಯೂಸ್ ಪೇಪರ್ ಓದಲು ಪತ್ರಿಕೆಯನ್ನು ತೆರೆದೆ. ಅಲ್ಲಿ ಪುಟದ ತುಂಬೆಲ್ಲಾ ಒಂದೇ ವಿಚಾರ. ಅದು ವಿಜ್ಞಾನ ದಿನಾಚರಣೆಗೆ ಸಂಬಂಧಿಸಿದ್ದಾಗಿದೆ. ಜಿಲ್ಲೆಯ ವಿವಿಧ ಶಾಲೆಗಳಲ್ಲಿ ಮಕ್ಕಳು, ಶಿಕ್ಷಕರು, ಪೋಷಕರು, ಸಾರ್ವಜನಿಕರು ಎಲ್ಲರೂ ಭಾಗಿಯಾಗಿ ವಿಜ್ಞಾನದ ಮಾದರಿ ಗಳನ್ನು ರಚಿಸಿರುವುದು, ವಸ್ತು ಪ್ರದರ್ಶನ ಗಳನ್ನು ಏರ್ಪಡಿಸಿರುವುದು, ಭಾಷಣಗಳನ್ನು ಮಾಡಿರುವುದು, ರಸಪ್ರಶ್ನೆ ಕಾರ್ಯಕ್ರಮ ನಡೆಸಿರುವುದು, ವಿಚಾರ ಸಂಕಿರಣ ಆಯೋ ಜಿಸಿರುವುದು, ಸ್ಥಳದಲ್ಲಿಯೇ ಪ್ರಯೋಗ ಮಾಡಿ ನಿರೂಪಿಸಿರುವುದು, ವಿಜ್ಞಾನದ ಪುಸ್ತಕ ಓದುವ ಕಾರ್ಯಕ್ರಮ ರೂಪಿಸಿರು ವುದು, ವಿವಿಧ ರೀತಿಯ ಛಾರ್ಟ್‌ಗಳನ್ನು ಬರೆದು ವಿವರಿಸುತ್ತಿರುವುದು, ಬಾಲ ವಿಜ್ಞಾನಿಗಳನ್ನು ಅಭಿನಂದಿಸಿ ಗೌರವಿಸಿರುವುದು ಈ ರೀತಿಯ ಎಲ್ಲಾ ಕಾರ್ಯಕ್ರಮಗಳನ್ನು ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಏರ್ಪಡಿಸಿರುವುದು-ಎಲ್ಲಾ ವಿಷಯಗಳನ್ನು ಓದಿ ಮನಸ್ಸಿಗೆ ಸಂತೋಷವಾಯಿತು. ವಿಜ್ಞಾನದ ಕುರಿತಾಗಿ ಜನಜಾಗೃತಿ ಮೂಡು ತ್ತಿದೆ ಎಂದೆನಿಸಿತು. ಹೌದು. ಆತ್ಮೀಯ ಓದುಗರೇ, ಫೆ.28ನೇ ತಾರೀಖಿನಂದು ನಮ್ಮ ದೇಶದ ಹೆಮ್ಮೆಯ ಭೌತಶಾಸ್ತ್ರಜ್ಞರಾದ ಸರ್ ಸಿ.ವಿ.ರಾಮನ್ ರವರು ಜಗತ್ತಿಗೆ ಬೆಳಕಿನ ಚೆದುರುವಿಕೆ ಯನ್ನು ಪರಿಚಯಿಸಿದ ದಿನವಾಗಿದೆ. ಅದಕ್ಕಾಗಿ ಅವರಿಗೆ 1930ರಲ್ಲಿ ನೊಬೆಲ್ ಪಾರಿ ತೋಷಕವೂ ಭಾರತೀಯರಾಗಿ ಮಾತ್ರವಲ್ಲ, ಏಷ್ಯಾ ಖಂಡದ ವಿಜ್ಞಾನಿಯೋರ್ವರು ಮೊದಲ ಬಾರಿಗೆ ನೊಬೆಲ್ ಪ್ರಶಸ್ತಿಯನ್ನು ಪಡೆದಿದ್ದು ಚರಿತ್ರೆಯಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದ ಪುಟವಾಗಿದೆ.

ಇಂದಿನ ಮಕ್ಕಳಲ್ಲಿ ಮೊಬೈಲ್ ಗೀಳಿನಿಂದಾಗಿ ನೈಜ ಪುಸ್ತಕಗಳನ್ನು ಓದುವ ಅಭ್ಯಾಸ ಮತ್ತು ಹವ್ಯಾಸ ಕಡಿಮೆಯಾಗಿರುದಂತೂ ಕಂಡುಬಂದಿದೆ. ಇಂದು ಪೋಷಕರು ಮಕ್ಕಳ ಕೈಗೆ ಮೊಬೈಲ್ ಬದಲಿಗೆ ಪುಸ್ತಕವನ್ನು ನೀಡುವುದು ಅನಿವಾರ್ಯವಾಗಿದೆ. ಒಂದೆಡೆ ಕುಳಿತು ಪುಸ್ತಕ ಗಳನ್ನು ಗಂಟೆಗಟ್ಟಲೆ ಓದಿದರೆ ತಾನೇ, ಮಗು ಏನನ್ನಾದರೂ ಸ್ವತಃ ತಿಳಿಯಲು ಸಾಧ್ಯ. ಪುಸ್ತಕ ಗಳನ್ನು ಓದಲೇ ಇಲ್ಲವೆಂದರೆ ಮಗುವಿಗೆ ಜ್ಞಾನ ಸಂಪಾದನೆ, ವಿಚಾರ ಮಂಡನೆ, ಬರವಣಿಗೆ ಕೌಶಲ, ಪ್ರಯೋಗ ವಿಚಾರ ತಿಳಿದು ಬರುವುದಾದರೂ ಹೇಗೆ? ಒಮ್ಮೆ ನಾವು ನೀವು ಎಲ್ಲರೂ ಯೋಚಿಸಬೇಕಾದ ಅಗತ್ಯ ವಿಚಾರವಾಗಿದೆ.

ಮಾನವನ ನಿತ್ಯ ಜೀವನದಲ್ಲಿ ವಿಜ್ಞಾನವು ಹಾಸುಹೊಕ್ಕಾಗಿದ್ದು ಮಹತ್ವದ ಪಾತ್ರ ನಿರ್ವಹಿ ಸುತ್ತದೆ. ಆರೋಗ್ಯ, ಕೃಷಿ, ತಂತ್ರಜ್ಞಾನ, ಸಂವಹನ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ವಿಜ್ಞಾನ ಮಹತ್ತರ ಪಾತ್ರವಹಿಸಿದೆ. ರಾಷ್ಟ್ರೀಯ ವಿಜ್ಞಾನ ದಿನವು ಯುವಜನರಲ್ಲಿ ಹೊಸ ಸಂಶೋಧ ನೆಗಳತ್ತಾ ಆಸಕ್ತಿಯನ್ನು ಮತ್ತು ಸೃಜನಶೀಲತೆಯನ್ನು ಉತ್ತೇಜಿಸುತ್ತದೆ. ಪ್ರತಿವರ್ಷ ಫೆ.28 ರಂದು ಭಾರತದಲ್ಲಿ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಗುತ್ತದೆ. ಈ ದಿನದಂದು ಭಾರತದ ಮಹಾನ್ ಭೌತವಿಜ್ಞಾನಿ ಸರ್.ಸಿ.ವಿ.ರಾಮನ್ ಅವರು 1928ರಲ್ಲಿ ಕಂಡುಹಿಡಿದ ರಾಮನ್ ಪರಿಣಾಮವನ್ನು ಸ್ಮರಿಸಲಾಗುತ್ತದೆ. ರಾಮನ್ ಅವರು 1928ರ ಫೆ.28ರಂದು ಬೆಳಕಿನ ಕಿರಣಗಳು ವಸ್ತುವಿನ ಮೂಲಕ ಹಾದುಹೋಗುವಾಗ ಹೇಗೆ ಚದುರುತ್ತದೆ ಮತ್ತು ಬದಲಾವಣೆಗೆ ಒಳಪಡುತ್ತದೆಂಬ ಮಹತ್ವದ ಆವಿಷ್ಕಾರವನ್ನು ಪ್ರಕಟಿಸಿದರು. ಈ ಆವಿಷ್ಕಾರಕ್ಕಾಗಿ ಅವರಿಗೆ 1930ರಲ್ಲಿ ಭೌತಶಾಸ್ತ್ರದ ನೋಬೆಲ್ ಪ್ರಶಸ್ತಿ ಬಂದಿತು. ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಕುರಿತು ಆಸಕ್ತಿ ಮೂಡಿಸುವ ಮೂಲಕ, ವಿಜ್ಞಾನಕ್ಕೆ ಗೌರವ ಸಲ್ಲಿಸುವುದು. ಸಂಶೋಧನೆ ಮತ್ತು ಆವಿಷ್ಕಾರಗಳಿಗೆ ಉತ್ತೇಜನ ನೀಡುವುದು ವೈಜ್ಞಾನಿಕ ಚಿಂತನೆ ಬೆಳೆಸುವುದು. ಒಂದು ದೇಶದ ಸರ್ವತೋಮುಖ ಅಭಿವೃದ್ಧಿಗೆ ವಿಜ್ಞಾನ ಕ್ಷೇತ್ರದ ಸುಸ್ಥಿರ ಬೆಳವಣಿಗೆ ಎಷ್ಟು ಮುಖ್ಯ ಎಂಬ ಅರಿವನ್ನು ಜನಸಾಮಾನ್ಯರಲ್ಲಿ ಮೂಡಿಸುವ ಉದ್ದೇಶದಿಂದ 1987 ರಿಂದ ಮೊದಲ್ಗೊಂಡು ಭಾರತ ಸರ್ಕಾರ ರಾಷ್ಟ್ರೀಯ ವಿಜ್ಞಾನ ದಿನ ವನ್ನು ಆಚರಿಸುತ್ತಾ ಬಂದಿದೆ. ಶಾಲಾ ಕಾಲೇಜುಗಳಲ್ಲಿ, ಸಾರ್ವಜನಿಕವಾಗಿ ವಿಜ್ಞಾನ ಪ್ರದರ್ಶನಗಳನ್ನು ಏರ್ಪಡಿಸುವುದು. ಪ್ರಬಂಧ, ಭಾಷಣ ಮತ್ತು ರಸಪ್ರಶ್ನೆ ಸ್ಪರ್ಧೆಗಳು, ವಿಜ್ಞಾನಿಗಳ ಕುರಿತ ಉಪನ್ಯಾಸಗಳು ಮತ್ತು ವಿಜ್ಞಾನ ಸಂಬಂಧಿತ ಚಟುವಟಿಕೆಗಳನ್ನು ಆಯೋಜಿಸುವ ಮೂಲಕ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಗುತ್ತದೆ. ಆ ಮೂಲಕ ಮನೆ ಮನೆಗೂ ವಿಜ್ಞಾನ ಮನ ಮನಕ್ಕೂ ವಿಜ್ಞಾನ ತಲುಪಿಸಿದರೆ ಮೌಢ್ಯತೆ ಅಳಿದು ವಿಜ್ಞಾನ ರೂಪುಗೊಳ್ಳುತ್ತದೆ. ಇಪ್ಪತ್ತೊಂದನೇ ಶತಮಾನವು ವಿಜ್ಞಾನ ಮತ್ತು ತಂತ್ರಜ್ಞಾನದ ಯುಗವಾಗಿದೆ. ಆದರೂ ವೈಜ್ಞಾನಿಕವಾದ, ವೈಚಾರಿಕವಾದ ಇನ್ನೂ ಬೆಳೆಯಬೇಕಿದೆ.

ಮೂಲ ವಿಜ್ಞಾನ ವಿಷಯಗಳಾದ ಭೌತಶಾಸ್ತ್ರ, ಜೀವಶಾಸ್ತ್ರ ಮತ್ತು ರಾಸಾಯನಶಾಸ್ತ್ರ ಇವುಗಳನ್ನು ಪ್ರತ್ಯೇಕವಾಗಿ ಓದುವವರ ಸಂಖ್ಯೆಯೂ ಕಡಿಮೆಯಿದೆ. ಮೂಲ ವಿಜ್ಞಾನಗಳ ಅರಿವು ಇಂದಿನ ವಿದ್ಯಾರ್ಥಿಗಳ ಯುಗಕ್ಕೆ ಅತೀ ಅಗತ್ಯವಿದೆ. ಅಲ್ಲದೇ ಮೂಲ ವಿಜ್ಞಾನ ವಿಷಯಗಳನ್ನು ತಿಳಿದ ನಂತರವೇ ವಿಜ್ಞಾನದ ಇತರೆ ಶಾಖೆಗಳನ್ನು ತಿಳಿದರೆ ಒಳಿತು. ವಿಶ್ವದ ಎಲ್ಲಾ ನಾಗ ರೀಕರಲ್ಲೂ ದೇಶಕ್ಕಾಗಿ ವಿಜ್ಞಾನ ಮತ್ತು ವಿಶ್ವಕ್ಕಾಗಿ ವಿಜ್ಞಾನ ಎಂಬ ಅರಿವು ಜಾಗತಿಕ ಮಟ್ಟದಲ್ಲಿ ಮೂಡಬೇಕು. ವಿಜ್ಞಾನವನ್ನು ಸದ್ಬಳಕೆ ಮಾಡಿಕೊಂಡು ಪ್ರಗತಿಯತ್ತ ಮುನ್ನಡೆಯೋಣ.

-ಕೆ.ಎನ್.ಚಿದಾನಂದ

ಮೂಗಿನ ಜ್ಯೂಸು

ರಜೆಗೆ ಮನೆಗೆ ಬಂದಿದ್ದ ನಮ್ಮ ಐದು ವರ್ಷದ ಮೊಮ್ಮಗನ ಜೊತೆಗೆ ಸಂಜೆ ಪಕ್ಕದ ಮನೆಗೆ ಹೋಗಿದ್ದೆ. ಮಾತುಕತೆಯ ನಂತರ ಗೆಳತಿ ನನ್ನ ಮೊಮ್ಮಗನಿಗೆ, ನಿಂಬೆಹಣ್ಣಿನ ಶರಬತ್ತು ಕೊಡಲಾ? ಎಂದು ವಿಚಾರಿಸಿದಾಗ, ಬೇಡಾ ಅಂಟೀ... ಈಗ ತಾನೇ ಇಲ್ಲಿಗೆ ಬರುವಾಗ ಅಜ್ಜಿ ಮೂಗಿನ ಜ್ಯೂಸ್ ಮಾಡಿಕೊಟ್ಟರು. ಹೊಟ್ಟೆ ಫುಲ್ ಇದೆ ಎಂದ. ಇದನ್ನು ಕೇಳಿದ ಅವರ ಮೊಮ್ಮಗ ಅಯ್ಯೋ... ಥೂ... ಮೂಗಿನ ಜ್ಯೂಸಾ ಎಂದು ಮುಖ ಸಿಂಡರಿಸಿದಾಗ, ಇನ್ನು ಅನರ್ಥವಾಗುವುದು ಬೇಡ ಎಂದು ನಾನು ಕೂಡಲೇ, ನೋಡು ಮಗಾ. ನಮ್ಮ ಕೊಂಕಣಿಯಲ್ಲಿ ಮೂಗು ಅಂದರೆ ಹೆಸರುಕಾಳು ಅಂತರ್ಥ, ಅದನ್ನು ರುಬ್ಬಿ ಬೆಲ್ಲಾ ಹಾಕಿ ಪಾನಕ ಮಾಡಿದ್ದೆ. ಬೇಸಿಗೆಗೆ ತಂಪಾಗಿರಲಿ ಅಂತಾ. ಅದನ್ನೇ ಇವನು ಮೂಗಿನ ಜ್ಯೂಸು ಅಂದಿದ್ದು ಎಂದು ವಿವರಿಸಿದಾಗ ಎಲ್ಲರಿಗೂ ನಗುಬಂದಿತು.

-ಜಯಮಾಲಾ ಪೈ

ಎತ್ತಬೇಕು

ನಾನು ವಾರಾಂತ್ಯದ ಒತ್ತಡದಲ್ಲಿ ಕೆಲಸ ಮಾಡುತ್ತಿದ್ದೆ. ಓರ್ವ ಗ್ರಾಹಕಿ ನೈಟಿ ಅದರ ಮೇಲೆ ಮಾಸಲು ಚೆಕ್ಸ್ ಟವಲ್ ಹಾಕಿಕೊಂಡು ಚಿಕ್ಕ ಮಗುವನ್ನು ಎತ್ತಿಕೊಂಡು ನಮ್ಮ ಬ್ಯಾಂಕಿಗೆ ಬಂದಳು. ಅವಳ ಇನ್ನೊಂದು ಕೈಯಲ್ಲಿ ಬ್ಯಾಂಕ್ ಪಾಸ್ ಬುಕ್ ಇತ್ತು. ನನ್ನ ಬಳಿ ಬಂದವಳೇ ಎತ್ತಕಬೇಕು ಅಂದಳು. ನಾನು ತಟ್ಟನೇ ಮಗು ವನ್ನು ಎತ್ತಲೆಂದು ನನ್ನ ಕೈಗಳನ್ನು ಮುಂದಕ್ಕೆ ಚಾಚಿದೆ. ಈಗೀಗ ಬ್ಯಾಂಕಿನಲ್ಲಿ ಬೇರೆ ಬೇರೆ ಯೋಜನೆಗಳು ಬಂದಿರುವಂತೆ ಮಗುವನ್ನು ಎತ್ತಿಕೊಳ್ಳುವ ಹೊಸ ಯೋಜನೆ ಏನಾದ್ರೂ ಬಂದಿರಬಹುದೇ ಎಂದು ನಾನು ಯೋಚಿಸಿದೆ. ಅವಳಿಗೆ ನಾಚಿಕೆಯಾಗಿ, ಪಾಸ್‌ಬುಕ್ ಅನ್ನು ನನ್ನ ಕೈಗೆ ಕೊಟ್ಟಳು. ಆಗ ಪಕ್ಕದಲ್ಲಿರುವ ಸಹೋದ್ಯೋಗಿ ಯೊಬ್ಬರು ಎತ್ತಕಬೇಕು ಅಂದರೆ ಅಕೌಂಟಿನಲ್ಲಿರುವ ದುಡ್ಡನ್ನು ತೆಗೆಯಬೇಕು ಅಂತರ್ಥ ಎಂದು ವಿವರಿಸಿದರು!

-ಬಿ.ಎನ್.ಭರತ್

ತವಾ ಫ್ರೈ

ನಮ್ಮ ಮನೆಯ ಓನರ್ ತಾತ ಕರಾವಳಿ ಭಾಗದವರು. ಪತ್ನಿ ಅಗಲಿದ್ದರು, ಮಕ್ಕಳು ವಿದೇಶದಲ್ಲಿದ್ದರು. ಅವರ ಮನೆಗೆ ಹೋದಾಗೆಲ್ಲ ಮೀನು ತಿನ್ನದೇ ಬಾಯಿ ಕೆಟ್ಟಿದೆ ಅನ್ನೋರು ಪ್ರತಿಬಾರಿಯೂ ಅನಾರೋಗ್ಯ ಉಂಟಾದಾಗ ಮೀನು ತಿನ್ನದೇ ನನ್ನ ಆರೋಗ್ಯ ಹೀಗಾಯ್ತು ಎಂದೇ ಹೇಳುತ್ತಿದ್ದರು. ಹೋದಾಗಲೆಲ್ಲ ಮೀನಿನ ತವಾ ಫ್ರೈ ಮಾಡುವುದು ಹೇಗೆ? ಮಸಾಲೆ ಹಚ್ಚುವುದು ಹೇಗೆ, ಅದನ್ನು ಮಗುಚಿ ಹಾಕಿ ಬೇಯಿಸಿ ತಟ್ಟೆಗೆ ಹಾಕುವುದು ಹೇಗೆ ಎನ್ನುವುದುತ್ತೆಲ್ಲಾ. ರಸಭರಿತವಾಗಿ ಹೇಳುತ್ತಿದ್ದರು. ನಾನು ಒಂದು ದಿನ ಬೆಳಗ್ಗೆ ಮೀನು ತಂದು ಅವರು ಹೇಳಿದಂತೆ ಮಸಾಲ ಹಚ್ಚಿ ತವಾ ಫ್ರೈ ಮಾಡಿ ಕೊಟ್ಟೆ. ಎರಡು ದಿನ ಬಿಟ್ಟು, ನೀನು ಮಾಡಿದ ಮೀನಿನ ತವಾ ಫ್ರೈ ತಿಂದು ನನ್ನ ಆರೋಗ್ಯ ಹಾಳಾಯಿತು ಅನ್ನಬೇಕೆ ತಾತ!

-ಬಿ.ಎನ್.ಪಲ್ಲವಿ

ರೆಡ್ ಬಸ್

ಅಶ್ವಿನಿ ಅಂದು ತವರಿಗೆ ಹೊರಡಬೇಕಿತ್ತು. ಗಂಡ ವಿನಾಯಕ ಅವಳನ್ನು ಬಸ್ಸು ಹತ್ತಿಸಲು ಬಂದಿದ್ದ. ಬಸ್ಸು ಬಂದು ಮುಂದೆ ನಿಂತರೂ ಅಶ್ವಿನಿ ಬಸ್ಸು ಹತ್ತಲು ತಯಾರಿರಲಿಲ್ಲ. ಇದೆ ಬಸ್ಸು ಕಣೆ... ನಂಬರ್ ನೋಡಿದಿನಿ. ಹತ್ತು ಎಂದ ವಿನಾಯಕ. ಅಶ್ವಿನಿ, ಅಲ್ಲ ಕಣ್ರೋ ನಾನು ರೆಡ್ ಬಸ್ ಡಾಟ್ ಕಾಮ್‌ನಲ್ಲಿ ಬುಕ್ ಮಾಡಿದ್ದು. ಇದು ಬ್ಲೂ ಇದೆ? ಎಂದಳು. ಕರ್ಮ... ನಮ್ಮಮ್ಮ ಬಡ್ಕೊಂಡ್ಲು ಕಣೆ. ಜನರಲ್ ನಾಲೆಡ್ಜ್ ಇರೋಳನ್ನು ಮದುವೆ ಆಗೊ ಅಂತ. ನಾನೇ ಪ್ರೀತಿ-ಪ್ರೇಮ ಅಂತ ನಿನ್ನ ಕಟ್ಕೊಂಡೆ.. ಇದೇ ಬಸ್ಸು ಕಣೆ. ಹತ್ತು ಮೊದಲು ಎಂದ ವಿನಾಯಕ.

-ಜ್ಯೋತಿ ಪರಬತ್

ಇರಾನ್ ಹಾರಿಸಿದ 137 ಕ್ಷಿಪಣಿ, 209 ಡ್ರೋಣ್‌ಗಳನ್ನು ಹೊಡೆದುರುಳಿಸಿದ್ದೇವೆ: ಯುಎಇ

• ಪ್ರಜೋದಯ ವರದಿ



ಅಬುಧಾಬಿ: ಇರಾನ್ ಉಡಾಯಿಸಿದ 137 ಖಂಡಾಂತರ ಕ್ಷಿಪಣಿಗಳು, 209 ಡ್ರೋಣ್‌ಗಳನ್ನು ವಾಯುಪಡೆ ಹಾಗೂ ವಾಯು ರಕ್ಷಣಾ ಪಡೆಗಳು ಸಮರ್ಥವಾಗಿ ಹಿಮ್ಮೆಟ್ಟಿಸಿ, ನಾಶಪಡಿಸಿವೆ ಎಂದು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಭಾನುವಾರ ತಿಳಿಸಿದೆ.

137 ಕ್ಷಿಪಣಿಗಳ ಪೈಕಿ 132 ನಾಶವಾಗಿವೆ. ಉಳಿದ ಐದು ಸಮುದ್ರಕ್ಕೆ ಬಿದ್ದಿವೆ. ದೇಶದತ್ತ ಹಾರಿ ಬಂದ 209 ಡ್ರೋಣ್‌ಗಳಲ್ಲಿ 195 ಅನ್ನು ಹಿಮ್ಮೆಟ್ಟಿಸಲಾಗಿದೆ. ಉಳಿದ 14 ಡ್ರೋಣ್‌ಗಳು ದೇಶದ ಭೂ ಪ್ರದೇಶ, ಸಾಗರದಲ್ಲಿ ಉರುಳಿವೆ ಎಂದು ರಕ್ಷಣಾ ಸಚಿವಾಲಯ ಹೇಳಿಕೆ ಬಿಡುಗಡೆ ಮಾಡಿದೆ.

ಕ್ಷಿಪಣಿ, ಡ್ರೋಣ್‌ಗಳ ಅವಶೇಷಗಳು ಹಲವೆಡೆ ಬಿದ್ದಿವೆ. ಇದರಿಂದಾಗಿ, ಅಲ್ಲಲ್ಲಿ ಸಣ್ಣಪುಟ್ಟ ಹಾನಿಯಾಗಿದೆ. ಸಾರ್ವಜನಿಕರ ಸುರಕ್ಷತೆಯನ್ನು ಖಾತ್ರಿಪಡಿಸಿಕೊಳ್ಳುವ ಸಲುವಾಗಿ ಅಧಿಕಾರಿ ಗಳು ಅಗತ್ಯ ಕ್ರಮ ಕೈಗೊಳ್ಳುತ್ತಿದ್ದಾರೆ ಎಂದೂ ತಿಳಿಸಿದೆ.

ಅಬುಧಾಬಿಯ ಝಾಯೆದ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಗುರಿಯಾಗಿಸಿ ಕೊಂಡು ಡ್ರೋಣ್ ದಾಳಿ ನಡೆಸಲಾಗಿತ್ತು. ಅವನ್ನು ಸಮರ್ಥವಾಗಿ ಹಿಮ್ಮೆಟ್ಟಿಸಲಾಗಿದೆ. ಈ ವೇಳೆ, ಅವಶೇಷಗಳು ಕೆಳಗೆ ಬಿದ್ದ ಪರಿಣಾಮ, ಏಷ್ಯಾ ಮೂಲದ ಪ್ರಜೆಯೊಬ್ಬರು ಮೃತಪಟ್ಟು, 7 ಮಂದಿ ಗಾಯಗೊಂಡಿದ್ದಾರೆ ಎಂದು ವಿಮಾನ ನಿಲ್ದಾಣದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾಳಿಯಿಂದಾಗಿ ವಿಮಾನ ಸೇವೆಯಲ್ಲಿ ವ್ಯತ್ಯಯಗಳಾಗಿವೆ. ಅದರಿಂದಾಗಿ ಸುಮಾರು 20,200 ಪ್ರಯಾಣಿಕರಿಗೆ ತೊಂದರೆಯಾಗಿದೆ. ಅವರಿಗೆಲ್ಲ ತಾತ್ಕಾಲಿಕ ವಸತಿ, ಊಟದ ವ್ಯವಸ್ಥೆ ಮಾಡಲಾಗಿದೆ. ಮತ್ತೊಮ್ಮೆ ಟಿಕೆಟ್ ಕಾಯ್ದಿರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ವಿಮಾನಯಾನ ಪ್ರಾಧಿಕಾರ ಹೇಳಿದೆ.

ಕೊಹ್ಲಿ ದಾಖಲೆ ಮುರಿದ ಫರ್ಹಾನ್

• ಪ್ರಜೋದಯ ವರದಿ

ಪಲ್ಲೆಕೆಲೆ: ಶ್ರೀಲಂಕಾ ವಿರುದ್ಧದ ಟಿ-20 ವಿಶ್ವಕಪ್‌ನ ಸೂಪರ್ 8ರ ಪಂದ್ಯದಲ್ಲಿ ಪಾಕಿಸ್ತಾನ ತಂಡದ ಆರಂಭಿಕ ಬ್ಯಾಟರ್ ಸಾಹಿಬ್‌ಝಾದಾ ಫರ್ಹಾನ್ ಹಲವು ದಾಖಲೆಗಳನ್ನು ತಮ್ಮ ಹೆಸರಿಗೆ ಸೇರಿಸಿಕೊಂಡಿದ್ದಾರೆ.

ಶ್ರೀಲಂಕಾ ವಿರುದ್ಧದ ಪಂದ್ಯದಲ್ಲಿ 5 ರನ್‌ಗಳಿಂದ ಗೆದ್ದ ಪಾಕಿಸ್ತಾನ ತಂಡವು ರನ್‌ರೇಟ್ ಆಧಾರದಲ್ಲಿ ಟೂರ್ನಿಯಿಂದ ಹೊರಬಿದ್ದಿದೆ. ಅದಾಗ್ಯೂ, ಪಾಕ್ ತಂಡದ ಆರಂಭಿಕ ಬ್ಯಾಟರ್ ಸಾಹಿಬ್‌ಝಾದಾ ಫರ್ಹಾನ್, ವಿರಾಟ್ ಕೊಹ್ಲಿ ಹೆಸರಿನಲ್ಲಿದ್ದ ವಿಶೇಷ ದಾಖಲೆ ಒಂದನ್ನು ಮುರಿದಿದ್ದಾರೆ. ಮಾತ್ರವಲ್ಲ, ಟಿ-20 ವಿಶ್ವಕಪ್‌ನಲ್ಲಿ ಯಾವುದೇ ಬ್ಯಾಟರ್ ಮಾಡದ ಹೊಸ ದಾಖಲೆಯೊಂದನ್ನು ತಮ್ಮ ಹೆಸರಿಗೆ ಬರೆದಿದ್ದಾರೆ.

ಒಂದೇ ಸೀಸನ್‌ನಲ್ಲಿ ಎರಡು ಶತಕ ಟಿ-20 ವಿಶ್ವಕಪ್‌ನ ಒಂದೇ ಸೀಸನ್‌ನಲ್ಲಿ 2 ಶತಕ ಸಿಡಿಸಿದ ವಿಶ್ವದ ಮೊದಲ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಫರ್ಹಾನ್ ಭಾಜನರಾಗಿದ್ದಾರೆ. ಅವರು, ಈ ಆವೃತ್ತಿಯಲ್ಲಿ ನಮೀಬಿಯಾ ವಿರುದ್ಧ ಅಜೇಯ 100 ಹಾಗೂ ಸೂಪರ್ 8ರ ಕೊನೆಯ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ 60 ಎಸೆತಗಳಲ್ಲಿ 100 ರನ್ ಸಿಡಿಸಿದ್ದಾರೆ.

ಇನ್ನೂ ಟಿ-20 ವಿಶ್ವಕಪ್‌ನಲ್ಲಿ ಇದುವರೆಗೆ ಕ್ರಿಸ್ ಗೇಲ್ ಮಾತ್ರ ಎರಡು ಶತಕ ಸಿಡಿಸಿದ್ದಾರೆ. ಅದು 2007 ಮತ್ತು 2016ರ ಬೇರೆ ಬೇರೆ ಆವೃತ್ತಿಗಳಲ್ಲಿ. ಒಂದೇ ಆವೃತ್ತಿಯಲ್ಲಿ ಎರಡು ಶತಕ ಸಿಡಿಸಿದ ಏಕೈಕ ಆಟಗಾರ ಫರ್ಹಾನ್ ಮಾತ್ರ.

ವಿರಾಟ್ ಕೊಹ್ಲಿ ದಾಖಲೆ ಮುರಿದ ಫರ್ಹಾನ್

ಟಿ-20 ವಿಶ್ವಕಪ್‌ನ ಒಂದೇ ಆವೃತ್ತಿಯಲ್ಲಿ ಅತೀ ಹೆಚ್ಚು ರನ್ ಗಳಿಸಿದ ಬ್ಯಾಟರ್ ಎಂಬ ದಾಖಲೆ ಹೊಂದಿದ್ದ ವಿರಾಟ್ ಕೊಹ್ಲಿ ಅವರ ದಾಖಲೆಯನ್ನು ಸಾಹಿಬ್‌ಝಾದಾ ಫರ್ಹಾನ್ ಅವರು ಮುರಿದಿದ್ದಾರೆ. ವಿರಾಟ್ ಕೊಹ್ಲಿ 2014ರ ವಿಶ್ವಕಪ್‌ನಲ್ಲಿ 6 ಇನಿಂಗ್ಸ್‌ಗಳಿಂದ 319 ರನ್ ಗಳಿಸಿದ್ದರು. ಸದ್ಯ, ಸಾಹಿಬ್ಜಾದಾ ಫರ್ಹಾನ್ ಅವರು 8 ಪಂದ್ಯಗಳಿಂದ 383 ರನ್ ಗಳಿಸಿದ್ದಾರೆ. ಆ ಮೂಲಕ ಕೊಹ್ಲಿ ಅವರಿಗಿಂತ 64 ರನ್‌ಗಳಿಂದ ಮುಂದಿದ್ದಾರೆ.

ಕಚ್ಚಾ ತೈಲ ಬೆಲೆ ಏರಿಕೆ ಭೀತಿ: ವ್ಯಾಪಾರ ವಹಿವಾಟಿಗೆ ಧಕ್ಕೆ

• ಪ್ರಜೋದಯ ವರದಿ

ನವದೆಹಲಿ: ಪಶ್ಚಿಮ ಏಷ್ಯಾದಲ್ಲಿನ ಸಮರವು ವ್ಯಾಪಾರ ವಹಿವಾಟಿಗೆ ಧಕ್ಕೆ ಉಂಟು ಮಾಡಬಹುದು, ಸರಕು ಸಾಗಣೆ ಮತ್ತು ವಿಮಾ ವೆಚ್ಚವನ್ನು ಹೆಚ್ಚಿಸಬಹುದು, ಸರಕು ಸಾಗಣೆಯಲ್ಲಿ ವಿಳಂಬಕ್ಕೆ ಕಾರಣವಾಗಬಹುದು, ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಗೆ ದಾರಿ ಮಾಡಿಕೊಟ್ಟು ಭಾರತದ ಆಮದು ವೆಚ್ಚಗಳು ಹೆಚ್ಚುವಂತೆ ಮಾಡ ಬಹುದೆಂದು ಪರಿಣತರು ಅಂದಾಜು ಮಾಡಿದ್ದಾರೆ.

ಪಶ್ಚಿಮದ ದೇಶಗಳು ವಿಧಿಸಿದ ವಿವಿಧ ನಿರ್ಬಂಧಗಳ ಕಾರಣದಿಂದಾಗಿ ಭಾರತ ಮತ್ತು ಇರಾನ್ ನಡುವಿನ ವ್ಯಾಪಾರವು ಈಚಿನ ವರ್ಷಗಳಲ್ಲಿ ಕಡಿಮೆ ಆಗಿದೆ. ಆದರೆ ಬಹರೇನ್, ಕುವೈತ್, ಒಮಾನ್, ಕತಾರ್‌ಮ ಸೌದಿ ಅರೇಬಿಯಾ ಮತ್ತು ಯುಎಇ ಜೊತೆಗಿನ ವ್ಯಾಪಾರ ವಹಿವಾಟು ಹೆಚ್ಚಳವಾಗಿದೆ. ಸಮರವು ದೀರ್ಘ ಅವಧಿಗೆ ಮುಂದುವರಿದರೆ ಭಾರತದ ವ್ಯಾಪಾರ ವಹಿವಾಟುಗಳಿಗೆ ಧಕ್ಕೆ ಆಗಬಹುದೆಂದು ತಜ್ಞರು ಹೇಳಿದ್ದಾರೆ.

ಹೊರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಿದೆ ಎಂದು ವರದಿಗಳು ಹೇಳುತ್ತಿವೆ. ಇಲ್ಲಿ ಉಂಟಾಗುವ ಯಾವುದೇ ಅಡಚಣೆಯು ಸರಕು ಸಾಗಣೆ ಮತ್ತು ವಿಮಾ ವೆಚ್ಚ ಹೆಚ್ಚಳಕ್ಕೆ ಕಾರಣವಾಗುತ್ತದೆ. ಅದರಿಂದಾಗಿ ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆಯು ಹೆಚ್ಚಳ ಕಾಣುತ್ತದೆ. ಅದರ ಪರಿಣಾಮವು ಭಾರತದ ಆಮದು ವೆಚ್ಚಗಳಲ್ಲಿ ನೇರವಾಗಿ ಕಾಣಿಸಿಕೊಳ್ಳುತ್ತದೆಂದು ಜಿಟಿಆರ್‌ಐ (ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್) ಹೇಳಿದೆ.

ಈ ಯುದ್ಧದ ಕಾರಣದಿಂದಾಗಿ ಜಲಮಾರ್ಗಗಳಿಗೆ ಧಕ್ಕೆ ಆಗಿದೆ. ಇದು ಭಾರತದ ರಫ್ತುದಾರರ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 130 ಡಾಲರ್‌ವರೆಗೂ ಹೆಚ್ಚಳ ಆಗಬಹುದು. ಈ ರೀತಿ ಆದಲ್ಲಿ ಹಣದುಬ್ಬರ ಹೆಚ್ಚಬಹುದೆಂದು ವ್ಯಾಪಾರ ತಜ್ಞ ಬಿಸ್ವಜಿತ್ ಧರ್ ಅಂದಾಜಿಸಿದ್ದಾರೆ.

ಯುದ್ಧದ ಕಾರಣದಿಂದಾಗಿ ಹಳೆಯ ಸರಕು ಸಾಗಣೆ ಮಾರ್ಗಗಳಲ್ಲಿ ಅಡಚಣೆ ಈಗಾಗಲೇ ಕಾಣುತ್ತಿದೆ ಎಂದು ಭಾರತೀಯ ರಫ್ತುದಾರರ ಸಂಘಟನೆಗಳ ಒಕ್ಕೂಟದ (ಎಫ್‌ಐಇಒ) ಅಧ್ಯಕ್ಷ ಎಸ್.ಸಿ.ರಲ್ಹಾನ್ ತಿಳಿಸಿದ್ದಾರೆ.

ವಿಮಾನ ಮಾರ್ಗಗಳಲ್ಲಿ ಬದಲಾಣೆ ತರಲಾಗುತ್ತಿದೆ. ಕೆಂಪು ಸಮುದ್ರ ಮತ್ತು ಕೊಲ್ಲಿ ರಾಷ್ಟ್ರಗಳ ಸನಿಹದ ಪ್ರಮುಖ ಜಲಸಂಧಿಗಳ ಮೂಲಕ ಸಾಗುವ ಸಮುದ್ರ ಮಾರ್ಗ ಗಳಲ್ಲಿ ಅನಿಶ್ಚಿತ ಸ್ಥಿತಿ ಹೆಚ್ಚಾಗಿದೆ ಎಂದು ರಲ್ಹಾನ್ ಹೇಳಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷ: ವಿಮಾನ ಹಾರಾಟ ರದ್ದು

• ಪ್ರಜೋದಯ ವರದಿ

ನವದೆಹಲಿ: ಇರಾನ್ ಮೇಲೆ ಅಮೇರಿಕ-ಇಸ್ರೇಲ್ ದಾಳಿಯ ನಂತರ ಪಶ್ಚಿಮ ಏಷ್ಯಾದಲ್ಲಿ ವಾಯು ಪ್ರದೇಶ ನಿರ್ಬಂಧದಿಂದಾಗಿ ದೆಹಲಿ ಮತ್ತು ಮುಂಬೈನಿಂದ ತೆರಳಬೇಕಿದ್ದ 225 ಸೇರಿ ಭಾರತದಿಂದ ತೆರಳಬೇಕಿದ್ದ 350 ಅಂತರರಾಷ್ಟ್ರೀಯ ವಿಮಾನಗಳ ಹಾರಾಟ ರದ್ದಾಗಿದೆ ಎಂದು ವರದಿಯಾಗಿದೆ.

ಪಶ್ಚಿಮ ಏಷ್ಯಾ ದೇಶಗಳಿಗೆ ತೆರಳಬೇಕಿದ್ದ 444 ಅಂತರರಾಷ್ಟ್ರೀಯ ವಿಮಾನಗಳನ್ನು ರದ್ದು ಗೊಳಿಸುವ ನಿರೀಕ್ಷೆಯಿತ್ತು. ಸದ್ಯ 350 ವಿಮಾನಗಳನ್ನು ರದ್ದುಪಡಿಸಲಾಗಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿದೆ. ಶನಿವಾರವೂ ದೇಶೀಯ ವಿಮಾನಯಾನ ಸಂಸ್ಥೆಗಳ 410 ವಿಮಾನಗಳನ್ನು ರದ್ದುಗೊಳಿಸಲಾಗಿತ್ತು. ಪರಿಸ್ಥಿತಿಯನ್ನು ಅವಲೋಕಿಸುತ್ತಿದ್ದೇವೆ. ಅಗತ್ಯಕ್ಕೆ ತಕ್ಕಂತೆ ಕಾರ್ಯಾಚರಣೆ ಆರಂಭಿಸಲಾಗುತ್ತದೆ. ಪ್ರಯಾಣಿಕರಿಗೆ ಸೂಕ್ತ ವ್ಯವಸ್ಥೆ ಒದಗಿಸುವಂತೆ ವಿಮಾನಯಾನ ಸಂಸ್ಥೆಗಳು, ವಿಮಾನ ನಿಲ್ದಾಣ ನಿರ್ವಾಹಕರು ಮತ್ತು ಇತರ ಪಾಲುದಾರರೊಂದಿಗೆ ಸಂಪರ್ಕದಲ್ಲಿದ್ದೇವೆಂದು ಅಧಿಕಾರಿಗಳು ತಿಳಿಸಿದ್ದಾರೆ.

ದೆಹಲಿ ವಿಮಾನ ನಿಲ್ದಾಣದಿಂದ ತೆರಳಬೇಕಿದ್ದ 60 ಮತ್ತು ಆಗಮಿಸಬೇಕಿದ್ದ 40 ಅಂತರ ರಾಷ್ಟ್ರೀಯ ವಿಮಾನಗಳ ಹಾರಾಟ ರದ್ದಾಗಿದೆ. ಮುಂಬೈ ವಿಮಾನ ನಿಲ್ದಾಣದಿಂದ ತೆರಳಬೇಕಿದ್ದ 67 ಮತ್ತು ಆಗಮಿಸಬೇಕಿದ್ದ 58 ವಿಮಾನಗಳ ಹಾರಾಟ ರದ್ದಾಗಿದೆ.

ರಾಜ್ಯದಲ್ಲಿ ವಿರೋಧ ಪಕ್ಷ ಸತ್ತಿದೆ: ಈಶ್ವರಪ್ಪ

ರಾಜ್ಯ ಪ್ರವಾಸ ಮಾಡುವೆ | ಬಿಜೆಪಿ ಸೇರುವ ಸುಳಿವು ನೀಡಿದ ಮಾಜಿ ಸಚಿವ

• ಪ್ರಜೋದಯ ವರದಿ

ಹುಬ್ಬಳ್ಳಿ: ರಾಜ್ಯದಲ್ಲಿ ವಿರೋಧ ಪಕ್ಷ ಸತ್ತು ಹೋಗಿದ್ದು, ತಾನು ಅಧಿಕಾರಕ್ಕೆ ಬರಲು ಆಡಳಿತ ಪಕ್ಷ ಹಾಳಾಗುವುದನ್ನು ಕಾಯುತ್ತಿದೆಯೆಂದು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿಗೆ ಎಂದಿಗೂ ಬಹುಮತ ಬಂದಿಲ್ಲ. ಈ ಹಿಂದೆ ದಾರಿ ತಪ್ಪಿ ನಾವು ಅಧಿಕಾರಕ್ಕೆ ಬಂದಿದ್ದೆವು. ಪಕ್ಷದಲ್ಲಿ ಒಂದಷ್ಟು ಶುದ್ಧೀಕರಣವಾಗಬೇಕಿದೆ. ಲಕ್ಷಾಂತರ ಮಂದಿ ಕಾರ್ಯಕರ್ತರು ನೋವು ಅನುಭವಿಸುತ್ತ ಪಕ್ಷದಲ್ಲಿ ದಿನ ದೂಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ನಿರೀಕ್ಷೆಯಂತೆ ಎಲ್ಲವೂ ನಡೆಯುವ ಭರವಸೆಯಿದೆ. ಆ ದಿನಕ್ಕಾಗಿ ಕಾಯುತ್ತಿದ್ದು, ನಂತರ ಒಂದಷ್ಟು ಷರತ್ತುಗಳನ್ನು ಮುಂದಿಟ್ಟು ಪಕ್ಷದ ಕಾರ್ಯದಲ್ಲಿ ಸಕ್ರಿಯನಾಗುತ್ತೇನೆಂದರು.

ಮಗನಿಗೆ ಟಿಕೆಟ್ ತಪ್ಪಿಸಿದರು ಎನ್ನುವ ಒಂದೇ ಕಾರಣಕ್ಕಾಗಿ ಬಿಜೆಪಿಯಿಂದ ದೂರ ಉಳಿದಿಲ್ಲ. ಕೆಲವಷ್ಟು ಕಾರಣಗಳಿವೆ. ಮೊದಲು ಪಕ್ಷ ಶುದ್ಧೀಕರಣವಾಗಬೇಕು ಎನ್ನುವುದು ನನ್ನ ಹೆಬ್ಬಯಕೆ. ಅದು, ಏನು ಎನ್ನುವುದು ವರಿಷ್ಠರಿಗೆ ತಿಳಿದಿದೆಯೆಂದು ಹೇಳಿದರು.

ಗೂಂಡಾಗಳ ಕಾರುಬಾರು

ರಾಜ್ಯದಲ್ಲಿ ಡ್ರಗ್ಸ್ ಮಾಫಿಯಾ ಹೆಚ್ಚಾಗಿರುವುದರಿಂದ ಗೂಂಡಾಗಳ, ದೇಶದ್ರೋಹಿಗಳ ಕಾರುಬಾರು ಹೆಚ್ಚಾಗುತ್ತಿದೆ. ಮುಂದಿನ ಚುನಾವಣೆಯು ಹಿಂದೂತ್ವ ಹಾಗು ರಾಷ್ಟ್ರದ ಮೇಲೆ ನಡೆಯಲಿದ್ದು, ಹಿಂದೂತ್ವ ಉಳಿಸುವವರು ಮಾತ್ರ ಗೆಲುವು ಸಾಧಿಸುತ್ತಾರೆಂದು ಕೆ.ಎಸ್.ಈಶ್ವರಪ್ಪ ಅವರು ಪ್ರತಿಕ್ರಿಯಿಸಿದರು.

ರಾಜಕೀಯ ವೈರಾಗ್ಯ ಎನ್ನುವುದು ನನ್ನಲ್ಲಿ ಇಲ್ಲ. ಹೋರಾಡುತ್ತಲೇ ಬದುಕು ಕಟ್ಟಿಕೊಂಡವನು ನಾನು. ಸದ್ಯ ರಾಯಣ್ಣ ಬ್ರಿಗೇಡ್ ಕಾರ್ಯಕ್ರಮವೇನೂ ಮಾಡುತ್ತಿಲ್ಲ. ಹಿಂದೂತ್ವ ಮತ್ತು ಧರ್ಮದ ಕಾರ್ಯಕ್ಕೆ ರಾಜ್ಯ ಪ್ರವಾಸ ಮಾಡುತ್ತಿದ್ದೇನೆಂದರು.

ಕಾಂಗ್ರೆಸ್‌ನಲ್ಲಿ ಗುಂಪುಗಾರಿಕೆ

ರಾಜ್ಯ ಕಾಂಗ್ರೆಸ್‌ನಲ್ಲಿ ಮಿತಿ ಮೀರಿದ ಗುಂಪುಗಾರಿಕೆ ನಡೆಯುತ್ತಿದ್ದು, ಹೈಕಮಾಂಡ್ ಇದೆಯೋ ಇಲ್ಲವೋ ತಿಳಿಯುತ್ತಿಲ್ಲ. ಡಿ.ಕೆ. ಶಿವಕುಮಾರ್ ಹಾಗು ದಲಿತ ನಾಯಕರ ಬೆಂಬಲಿಗರು, ತಮ್ಮ ನಾಯಕನೇ ಮುಂದಿನ ಮುಖ್ಯಮಂತ್ರಿ ಎಂದು ಹೇಳಿಕೆ ನೀಡುತ್ತಿದ್ದಾರೆ. ಸಿದ್ದರಾಮಯ್ಯ ತಾನೇ ಐದು ವರ್ಷ ಮುಂದುವರಿಯುತ್ತೇನೆ ಎನ್ನುತ್ತಾರೆ. ಬಹುಮತ ಪಡೆದ, 125 ವರ್ಷದ ಇತಿಹಾಸವಿರುವ ಕಾಂಗ್ರೆಸ್ ಪಕ್ಷಕ್ಕೆ ಈ ಪರಿಸ್ಥಿತಿ ಬಂದಿರುವುದು ವಿಷಾದನೀಯವೆಂದು ವ್ಯಂಗ್ಯವಾಡಿದರು.

ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳೆಲ್ಲ ನೆನೆಗುದಿಗೆ ಬಿದ್ದಿವೆ. ಆಡಳಿತ ಪಕ್ಷದ ಪ್ರತಿ ಶಾಸಕರಿಗೆ 50 ಕೋಟಿ ರೂ. ನೀಡುವುದಾಗಿ ಮುಖ್ಯಮಂತ್ರಿ ಘೋಷಿಸಿದ್ದಾರೆ. ಈಗ ಆ ಸುದ್ದಿಯೇ ಇಲ್ಲ. ಕಾಂಗ್ರೆಸ್ ಶಾಸಕರಲ್ಲಿ ಅಧಿಕಾರ ದಾಹ ಹೆಚ್ಚಾಗಿರುವುದರಿಂದ ಆ ಕುರಿತು ಯಾರೂ ಧ್ವನಿ ಎತ್ತುತ್ತಿಲ್ಲ. ರಾಜ್ಯದ ಜನರ ನಂಬಿಕೆಯನ್ನು ಉಳಿಸಿಕೊಳ್ಳಲು ಸರ್ಕಾರ ಮುಂದಾಗಬೇಕಿತ್ತೆಂದು ಈಶ್ವರಪ್ಪ, ಉದ್ಯೋಗವಿಲ್ಲದೆ ಯುವಶಕ್ತಿಯ ಆಕ್ರೋಶ ಭುಗಿಲೆದ್ದಿದೆಯೆಂದು ಎಚ್ಚರಿಸಿದರು.

ಹಿಂದೂಗಳ ಮೇಲೆ ಹಲ್ಲೆ ಹಾಗು ದೇಶದ್ರೋಹ ಚಟುವಟಿಕೆಯಲ್ಲಿ ನಿರತರಾಗಿರುವ ಮುಸ್ಲಿಮರ ವಿರುದ್ಧ ರಾಜ್ಯ ಸರ್ಕಾರ ಕ್ರಮ ಕೈಗೊಂಡಿದ್ದರೆ, ಬಾಗಲಕೋಟೆಯಲ್ಲಿ ಕಲ್ಲೆಸೆತ ಪ್ರಕರಣಗಳು ಮರುಕಳಿಸುತ್ತಿರಲಿಲ್ಲ. ಗೂಂಡಾ ಮನಸ್ಥಿತಿಯವರಿಗೆ ತಾವು ಏನೇ ಮಾಡಿದರೂ ನಡೆಯುತ್ತದೆ, ಸರ್ಕಾರ ಜಾಮೀನಿನ ಮೇಲೆ ಬಿಡುಗಡೆ ಮಾಡುತ್ತದೆ ಎನ್ನುವ ಭಾವನೆ ಹೆಚ್ಚಾಗುತ್ತಿದೆಯೆಂದು ಆಕ್ರೋಶ ವ್ಯಕ್ತಪಡಿಸಿದರು.

ವೀರಶೈವ ಪರಿಪೂರ್ಣ ಧರ್ಮ: ಕಾರ್ಜುವಳ್ಳಿ ಶ್ರೀ ಪ್ರತಿಪಾದನೆ

• ಪ್ರಜೋದಯ ವರದಿ

ಆಲೂರು: ವೀರಶೈವ ಎಂಬುದು ಪರಿಪೂರ್ಣ ವಿಶ್ವಧರ್ಮವೇ ಹೊರತು ಕೇವಲ ಜಾತಿ ಮಾತ್ರವಲ್ಲವೆಂದು ರಂಭಾಪುರಿ ವೀರಸಿಂಹಾಸನದ ಕಾರ್ಜುವಳ್ಳಿ ಶಾಖಾ ಮಠದ ಶ್ರೀ ಸದಾಶಿವಸ್ವಾಮೀಜಿ ಪ್ರತಿಪಾದಿಸಿದರು.

ಪಟ್ಟಣದ ಬಸವೇಶ್ವರ ಶಾಲಾ ಆವರಣದಲ್ಲಿ ಜಗದ್ಗುರು ರೇಣುಕಾಚಾರ್ಯರ ಸೇವಾ ಸಮಿತಿ ವತಿಯಿಂದ ಭಾನುವಾರ ಏರ್ಪಡಿಸಿದ್ದ ಶ್ರೀ ರೇಣುಕಾಚಾರ್ಯರ ಜಯಂತಿಯಲ್ಲಿ ಮಾತನಾಡಿ, ವೀರಶೈವ ಸಂಸ್ಕೃತ ಪದ ಲಿಂಗಾಯತ, ಲಿಂಗವಂತ ಎಂಬೆಲ್ಲ ಪರ್ಯಾಯ ನಾಮಗಳಿವೆ. ಕರ್ಮವನ್ನು ಕಳೆದು ಧರ್ಮವನ್ನು ಬಿತ್ತಿ ಬದುಕನ್ನು ಬಂಗಾರಗೊಳಿಸಿದ ಕೀರ್ತಿ ರೇಣುಕಾಚಾರ್ಯರಿಗೆ ಸಲ್ಲುತ್ತದೆ. ವೀರಶೈವ ಧರ್ಮ ವೃಕ್ಷದ ತಾಯಿ ಬೇರಿನಂತಿರುವ ರೇಣುಕಾ ಚಾರ್ಯರು, ಸಕಲ ಜೀವಾತ್ಮರ ಅಭ್ಯುದಯಕ್ಕೆ ದುಡಿದವರು. ಭಾರತೀಯ ಸಂಸ್ಕೃತಿಗೆ ಅತ್ಯಮೂಲ್ಯ ಕೊಡುಗೆ ನೀಡಿದ್ದಾರೆಂದರು.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ರೇಣುಕಾಚಾರ್ಯರ ಸಾಧನೆ, ಬೋಧನೆ ಮತ್ತು ಮಾರ್ಗದರ್ಶನ ನಮ್ಮೆಲ್ಲರ ಬಾಳಿಗೆ ದಾರಿ ದೀಪವಾಗಿದೆ. ಬಾಳೆಹೊನ್ನೂರು ರಂಭಾಪುರಿ ಪೀಠ ಮಾನವ ಧರ್ಮದ ಆದರ್ಶ ಮೌಲ್ಯಗಳನ್ನು ಎತ್ತಿ ಹಿಡಿದಿದೆ. ಜಾತಿ ಧರ್ಮಗಳ ಸಂಘರ್ಷ ಮಯ ದಿನಗಳಲ್ಲಿ ರಂಭಾಪುರಿ ಪೀಠದ ಸಂದೇಶ ನಮ್ಮೆಲ್ಲರಲ್ಲಿ ಶಾಂತಿ ಸೌಹಾರ್ದತೆ ಮೂಡಿ ಬರಲು ಕಾರಣವೆಂದರು.

ಸಂಗಮೇಶ್ವರ ದೇವಸ್ಥಾನದಿಂದ ಬಸವೇಶ್ವರ ಶಾಲಾ ಆವರಣದವರೆಗೆ ರೇಣುಕಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ಜರುಗಿತು. ಮಹಿಳೆಯರು ಪೂರ್ಣಕುಂಭ ಹೊತ್ತು ಸಾಗಿದರು. ವೀರಗಾಸೆ ನೃತ್ಯ, ಬಸವೇಶ್ವರ ವಿದ್ಯಾ ಸಂಸ್ಥೆಯ ಮಕ್ಕಳಿಂದ ಹಮ್ಮಿಕೊಂಡಿದ್ದ ನಾಟಕ ಪ್ರದರ್ಶನ ಗಮನ ಸೆಳೆಯಿತು.

ಸಂಕಲಾಪುರ ಮಠದ ಉತ್ತರಾಧಿಕಾರಿ ಶ್ರೀ ಶಾಂತವೀರ ಮಲ್ಲಿಕಾರ್ಜುನ ಸ್ವಾಮೀಜಿ, ತಾಲ್ಲೂಕು ವೀರಶೈವ ಲಿಂಗಾಯತ ಸಂಘದ ಅಧ್ಯಕ್ಷ ಬಿ. ರೇಣುಕಾಪ್ರಸಾದ್, ಉಪಾಧ್ಯಕ್ಷ ಡಿ. ಎಸ್.ಜಯಣ್ಣ, ಸಹ ಕಾರ್ಯದರ್ಶಿ ಡಾ.ಜಯರಾಜ್, ಅಖಿಲ ಭಾರತ ವೀರಶೈವ ಮಹಾ ಸಭಾ ಅಧ್ಯಕ್ಷ ಅಜಿತ್ ಚಿಕ್ಕಕಣಗಾಲ್, ರೇಣುಕಾ ಸೇವಾ ಸಮಿತಿ ಉಪಾಧ್ಯಕ್ಷ ಮರಿಸ್ವಾಮಿ, ಖಜಾಂಚಿ ಮಹೇಶ್ ಮುರುಡೂರು, ಸಹಕಾರ್ಯದರ್ಶಿ ಆನಂದ್, ನಿರ್ದೇಶಕರಾದ ಮೋಹನ್ ಮಾವನೂರು, ನವೀನ್ ಬೈರಾಪುರ ಇತರರಿದ್ದರು.

ವಿದೇಶಿ ಪ್ರಜೆಗಳ ವೀಸಾ ವಿಸ್ತರಣೆಗೆ ಕ್ರಮ

• ಪ್ರಜೋದಯ ವರದಿ

ನವದೆಹಲಿ: ಪಶ್ಚಿಮ ಏಷ್ಯಾದಲ್ಲಿನ ಬೆಳವಣಿಗೆಗಳಿಂದ ಪ್ರಯಾಣದ ಯೋಜನೆಗಳಲ್ಲಿ ವ್ಯತ್ಯಾಸವಾಗಿರುವ ವಿದೇಶಿ ಪ್ರಜೆಗಳಿಗೆ ವೀಸಾ ವಿಸ್ತರಣೆ ಅಥವಾ ದೇಶದಲ್ಲಿ ತಮ್ಮ ವಾಸ್ತವ್ಯವನ್ನು ಕ್ರಮಬದ್ಧಗೊಳಿಸಲು ಹತ್ತಿರದ ವಿದೇಶಿಗರ ಪ್ರಾದೇಶಿಕ ನೋಂದಣಿ ಕಚೇರಿಯನ್ನು (ಎಫ್‌ಆರ್‌ಆರ್‌ಒ) ಸಂಪರ್ಕಿಸುವಂತೆ ಭಾರತದ

ವಿದೇಶಾಂಗ ಸಚಿವಾಲಯ ತಿಳಿಸಿದೆ.

ಇರಾನ್‌ನ ಪರಮೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆ ಬೆನ್ನಲ್ಲೇ, ಕೊಲ್ಲಿ ರಾಷ್ಟ್ರಗಳಲ್ಲಿನ ಅಮೇರಿಕದ ಸೇನಾ ನೆಲೆಗಳನ್ನು ಗುರಿಯಾಗಿಸಿ ಇರಾನ್ ಭಾರಿ ದಾಳಿ ನಡೆಸಿದೆ. ಅದರಿಂದಾಗಿ ಕೊಲ್ಲಿ ರಾಷ್ಟ್ರಗಳಲ್ಲಿ ವಿಮಾನ ಹಾರಾಟ ನಿಷೇಧ ವಲಯ ಘೋಷಿಸಲಾಗಿದೆ. ಅದರ ಪರಿಣಾಮ ಹಲವು ವಿಮಾನಗಳ ಹಾರಾಟ ರದ್ದಾಗಿದೆ. ಅದರಿಂದ ಪ್ರಯಾಣದ ತೊಂದರೆ ಎದುರಿಸುತ್ತಿರುವ ವಿದೇಶಿ ಪ್ರಜೆಗಳಿಗೆ ವೀಸಾ ವಿಸ್ತರಿಸಲು ಎಂಇಎ ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ಇರಾನ್ ಮೇಲೆ ಅಮೇರಿಕ-ಇಸ್ರೇಲ್ ದಾಳಿಯ ಬಳಿಕ ಅಂತರ ರಾಷ್ಟ್ರೀಯ ವಿಮಾನ ಪ್ರಮಾಣದ ಮೇಲೆ ತೀವ್ರ ಪರಿಣಾಮ ಬೀರಿದೆ. ಅದರಿಂದಾಗಿ ತಮ್ಮ ಪ್ರಯಾಣದ ಯೋಜನೆಗಳನ್ನು ಬದಲಿಸಬೇಕಾದ ವಿದೇಶಿ ಪ್ರಜೆಗಳು ತಮ್ಮ ವೀಸಾ ವಿಸ್ತರಣೆ ಅಥವಾ ವಾಸ್ತವ್ಯವನ್ನು ಕ್ರಮ ಬದ್ಧಗೊಳಿಸಲು ಎಫ್‌ಆರ್‌ಆರ್‌ಒಗಳನ್ನು ಸಂಪರ್ಕಿಸುವಂತೆ ತಿಳಿಸಲಾಗಿದೆಂದು ಎಂಇಎ ತಿಳಿಸಿದೆ.

ಈ ಕುರಿತು ವಿದೇಶಿ ಪ್ರಜೆಗಳ ಕೋರಿಕೆಗೆ ಅಗತ್ಯ ನೆರವು ನೀಡುವಂತೆ ಸಂಬಂಧಪಟ್ಟ ಎಫ್‌ಆರ್‌ಆರ್‌ಒ ಅಧಿಕಾರಿಗಳಿಗೆ ಎಂಇಎ ಸೂಚಿಸಿದೆ.

ಮಲ್ಲದೇವರಪುರ ಬೆಟ್ಟದಲ್ಲಿ ಸ್ವಾಧ್ಯಾಯ ಕಾರ್ಯಕ್ರಮ

• ಪ್ರಜೋದಯ ವರದಿ

ಹಾಸನ: ಅಖಿಲ ಭಾರತೀಯ ಸಾಹಿತ್ಯ ಪರಿಷತ್ ವತಿಯಿಂದ ತಾಲ್ಲೂಕಿನ ಮಲ್ಲದೇವರಪುರ ಬೆಟ್ಟದಲ್ಲಿ ಭಾನುವಾರ ಸ್ವಾಧ್ಯಾಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಐತಿಹಾಸಿಕ ಮಲ್ಲೇಶ್ವರಸ್ವಾಮಿ ದೇವಾಲಯ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಳಗೆರೆ ಕೃಷ್ಣಶಾಸ್ತ್ರಿ ಅವರು ರಚಿಸಿದ ಯೇಗ್ದಾಗೆಲ್ಲಾ ಐತೆ ಪುಸ್ತಕದ ಮಂಥನ ನಡೆಯಿತು. ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ಸದಸ್ಯರು ಕೃತಿ ಕುರಿತು ತಮ್ಮ ವಿಚಾರಗಳನ್ನು ಮಂಡಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಅ.ಭಾ.ಸಾ.ಪ. ಸಹ ಕಾರ್ಯದರ್ಶಿ ಮಲ್ಲಿಕಾರ್ಜುನ ಅವರು, ಸಾಹಿತ್ಯದಲ್ಲಿ ಭಾರತೀಯತೆಯನ್ನು ಪ್ರತಿಬಿಂಬಿಸುವ ಉದ್ದೇಶದಿಂದ 1966 ಅ.27 ರಂದು ಪರಿಷದ್ ಅಸ್ತಿತ್ವ ಪಡೆದಿದೆ. ಹಾಸನದಲ್ಲಿ 2015ರಿಂದ ಸಾಹಿತ್ಯದ ಕಾರ್ಯಕ್ರಮಗಳು ನಡೆಯುತ್ತಿವೆ. ಎಲ್ಲರಲ್ಲೂ ಪುಸ್ತಕ ಓದುವ ಅಭಿರುಚಿ ಬೆಳೆಸಬೇಕು. ಆ ಮೂಲಕ ಸಾಹಿತ್ಯವನ್ನು ಎಲ್ಲರಿಗೂ ತಲುಪಿಸಬೇಕೆಂಬ ಉದ್ದೇಶದಿಂದ ಸ್ವಾಧ್ಯಾಯ ಪರಿಕಲ್ಪನೆಯಡಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಸ್ವಾಧ್ಯಾಯ ಪ್ರಮುಖ್ ಸುನಿತಾ ದೇವಿ ಪ್ರಸಾದ್ ಅವರು ಮಾತನಾಡಿ, ಯೇಗ್ದಾಗೆಲ್ಲಾ ಐತೆ ಪುಸ್ತಕವು ಸರಳ ಹಾಗು ಅರ್ಥಪೂರ್ಣ ಕೃತಿಯಾಗಿದೆ. ಮುಕುಂದೂರು ಸ್ವಾಮೀಜಿ ಅವರು ನೆಲೆಸಿದ್ದ ಈ ಬೆಟ್ಟದಲ್ಲಿಯೇ ಕಾರ್ಯಕ್ರಮ ಹಮ್ಮಿಕೊಂಡಿರುವುದು ಔಚಿತ್ಯಪೂರ್ಣವಾಗಿದೆ. ಭಾರತೀಯ ಚಿಂತನೆಗಳನ್ನು ಆಮೂಲಾಗ್ರವಾಗಿ ಪರಿಚಯಿಸುವ ಈ ಪುಸ್ತಕ ಸಾಹಿತ್ಯ ಪ್ರಿಯರಿಗೆ ಖಂಡಿತ ಇಷ್ಟವಾಗುತ್ತದೆಂದರು.

ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಶೃಂಗೇರಿ ವಿಭಾಗ ಸಹ ಸಂಯೋಜಕ ನಾಗೇಂದ್ರ, ಕಟ್ಟೆಮನೆ, ಜಿಲ್ಲಾ ಖಜಾಂಚಿ ಜಯಣ್ಣ ವಂದಿಸಿದರು. ಕಾರ್ಯದರ್ಶಿ ನೇ.ರಾ.ಪ್ರಶಾಂತ್, ಸದಸ್ಯರಾದ ಯೋಗೇಶ್, ನಿರಂಜನ, ನಾಗರಾಜು, ತೋಂಟದಾರ್ಯ, ಲಕ್ಷ್ಮೀ ಮತ್ತಿತರರಿದ್ದರು.

ಇಂದಿನ ವಿಜ್ಞಾನವೇ ನಾಳೆಯ ತಂತ್ರಜ್ಞಾನ

• ಪ್ರಜೋದಯ ವರದಿ

ಹಾಸನ: ನಗರದ ಎಂ.ಜಿ.ರಸ್ತೆಯ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ವಸ್ತುಪ್ರದರ್ಶನ ಏರ್ಪಡಿಸಲಾಗಿತ್ತು. ವಸ್ತು ಪ್ರದರ್ಶನವು ವಿದ್ಯಾರ್ಥಿನಿಯರ ಸೃಜನಶೀಲತೆ ಮತ್ತು ವೈಜ್ಞಾನಿಕ ಆವಿಷ್ಕಾರಗಳಿಗೆ ಸಾಕ್ಷಿಯಾಯಿತು.

ಇಂದಿನ ವಿಜ್ಞಾನವೇ ನಾಳೆಯ ತಂತ್ರಜ್ಞಾನ ಎಂಬ ಆಶಯದೊಂದಿಗೆ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮವನ್ನು ಪ್ರಾಂಶುಪಾಲರಾದ ಡಾ.ಕೆ. ಜೆ.ಕವಿತ ಅವರು ಉದ್ಘಾಟಿಸಿದರು.

ವಿಜ್ಞಾನ ಮಾದರಿಗಳು

ಪರಿಸರ ಸಂರಕ್ಷಣೆ, ಸೌರಶಕ್ತಿ ಬಳಕೆ ಮತ್ತು ತ್ಯಾಜ್ಯಮುಕ್ತ ತಂತ್ರಜ್ಞಾನದ ಬಗ್ಗೆ ವಿದ್ಯಾರ್ಥಿ ನಿಯರು ಸಿದ್ಧಪಡಿಸಿದ್ದ ಕಲ್ಪನೆಗಳು ವೀಕ್ಷಕರ ಗಮನ ಸೆಳೆದವು. ಪ್ರಾಯೋಗಿಕ ಅನುಭವ ವೈಜ್ಞಾನಿಕ ಆಟಗಳು ಗಮನಸೆಳೆದವು.

ಗಣಕವಿಜ್ಞಾನ ವಿಭಾಗದ ಮುಖ್ಯಸ್ಥರಾದ ಎಂ.ಬಾಲಕೃಷ್ಣ, ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ನಟೇಶ್, ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಶಂಕರಲಿಂಗಪ್ಪ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಲತಾ, ಗಣಿತಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ.ಎಂ.ಜೆ. ಶ್ರೀದೇವಿ ಹಾಗೂ ಪ್ರಾಧ್ಯಾಪಕರು ಉಪಸ್ಥಿತರಿದ್ದರು. ನಗರದ ವಿವಿಧ ಪದವಿಪೂರ್ವ ಕಾಲೇಜುಗಳ ನೂರಾರು ವಿದ್ಯಾರ್ಥಿಗಳು, ಶಿಕ್ಷಕರು ವಸ್ತುಪ್ರದರ್ಶನದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು.

ನಾಳೆ ಉಚಿತ ಕಣ್ಣಿನ ತಪಾಸಣಾ ಶಿಬಿರ

• ಪ್ರಜೋದಯ ವರದಿ

ಅರಕಲಗೂಡು: ಸ್ವಸ್ಥ ಸಮಾಜ ನಿರ್ಮಾಣ ಸಮಿತಿ ವತಿಯಿಂದ ಮಾರ್ಚ್ 3ರಂದು ಅರ್ಥಪೂರ್ಣವಾಗಿ ಮಹಿಳಾ ದಿನಾಚರಣೆ ಹಾಗೂ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಪಟ್ಟಣದ ಚನ್ನಬಸವೇಶ್ವರ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಅಧ್ಯಕ್ಷ ಪ್ರದೀಪ್ ರಾಮಸ್ವಾಮಿ ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಮಹಿಳಾ ಅಧಿಕಾರಿಗಳು ಮುಖ್ಯ ಅತಿಥಿಗಳಾಗಿ ಆಗಮಿಸುತ್ತಿದ್ದು, ಆರು ಮಂದಿ ಮಹಿಳಾ ಸಾಧಕಿಯರನ್ನು ಗೌರವಿಸಲಾಗುತ್ತಿದೆಂದು ಹೇಳಿದರು.

ವಿಶೇಷವಾಗಿ ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆಯ ವೈದ್ಯರು, ತಜ್ಞರು ಸಕಲ ರೀತಿಯ ಕಣ್ಣಿನ ತೊಂದರೆ ಇರುವವರಿಗೆ ತಪಾಸಣೆ ಮಾಡಿ ಸಮಸ್ಯೆ ಕಂಡು ಬಂದವರಿಗೆ ಉಚಿತವಾಗಿ ಶಸ್ತ್ರ ಚಿಕಿತ್ಸೆ, ಔಷಧಿಗಳು, ಲೇನ್ಸ್ ಇತರೆ ಪರಿಕರಗಳನ್ನು ನೀಡುವರು ಎಂದರು.

ಶಿಬಿರವು ಅಂದು ಬೆಳಿಗ್ಗೆ 7ರಿಂದ ಆರಂಭಗೊಂಡು ಮಧ್ಯಾಹ್ನ 12ಕ್ಕೆ ಪೂರ್ಣಗೊಳ್ಳಲಿದೆ.ಕಣ್ಣಿನ ಶಸ್ತ್ರ ಚಿಕಿತ್ಸೆಗಾಗಿ ಬರುವವರು ಕಡ್ಡಾಯವಾಗಿ ಆಧಾರ್ ಕಾರ್ಡ್ ಜೆರಾಕ್ಸ್, ಮೊಬೈಲ್ ನಂಬರ್ ತರಬೇಕು. ಹೃದಯ, ರಕ್ತದ ಒತ್ತಡ, ಅಸ್ತಮಾ ಸಕ್ಕರೆ ಕಾಯಿಲೆಗಳಿಂದ ನರಳುತ್ತಿದ್ದರೆ ಮುಂಚಿತವಾಗಿಯೇ ವೈದ್ಯರ ಬಳಿ ತಿಳಿಸಬೇಕು. ಚಿಕಿತ್ಸೆಗೆ ಅಡೆ ತಡೆ ಇಲ್ಲವೆಂದು ವೈದರಿಂದಿ ಪ್ರಮಾಣ ಪತ್ರ ತರಬೇಕಿದೆ. ಕಣ್ಣಿನ ಪೊರೆ, ಗ್ಲಾಕೋಮ, ನೀರು ಸೋರುವಿಕೆ, ಕಣ್ಣಿನಲ್ಲಿ ಗೀಜು ಬರುವುದ, ಹತ್ತಿರ ಮತ್ತು ದೂರದೃಷ್ಟಿ ದೋಷ, ಕಣ್ಣಿನಲ್ಲಿ ಬಿರುಕು ಉಂಟಾಗುವುದು. ವಾರೆ ಕಣ್ಣು ಹಾಗೂ ರಾತ್ರಿ ಕುರುಡುತನ ದೋಷಗಳು ಇರುವವರು ಪ್ರಯೋಜನ ಪಡೆದುಕೊಳ್ಳ ಬಹುದೆಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಸಮಿತಿ ಮುಖಂಡರಾದ ಬಸವರಾಜು, ದಶರಥ, ಪಾಂಡುರಂಗ, ಬಸವರಾಜು, ನಸ್ರುಲ್ಲಾ ಟಿಪ್ಪು ಉಪಸ್ಥಿತರಿದ್ದರು.

83 ಲಕ್ಷರೂ. ವೆಚ್ಚದ ರಸ್ತೆ ಕಾಮಗಾರಿಗೆ ಚಾಲನೆ

• ಪ್ರಜೋದಯ ವರದಿ

ಸಕಲೇಶಪುರ: ತಾಲ್ಲೂಕಿನ ವಣಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಡ್ರಹಳ್ಳಿ ಗ್ರಾಮದ ಪರಿಮಿತಿಯಲ್ಲಿ 38 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ರಸ್ತೆ ಕಾಮಗಾರಿಗೆ ಶಾಸಕ ಸಿಮೆಂಟ್ ಮಂಜು ಅವರು ಭೂಮಿ ಪೂಜೆ ನೆರವೇರಿಸಿದರು.

ಇದೇ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುಬ್ರಹ್ಮಣ್ಯ ರಸ್ತೆಯಿಂದ ಸಬ್ಬಮ್ಮದೇವಿ ದೇವಾಲ ಯದವರೆಗೆ 15 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ನೂತನ ರಸ್ತೆ ಕಾಮಗಾರಿಗೆ ಹಾಗು ಅಂಡಹಳ್ಳಿ ಸೋಮವಾರಪೇಟೆ ಮುಖ್ಯ ರಸ್ತೆಯಿಂದ ಹೊಸಳ್ಳಿ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ 30 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ಕಾಮಗಾರಿಗೆ ಚಾಲನೆ ನೀಡಲಾಯಿತು. ಸ್ಥಳೀಯ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.

ವಜ್ರ ಮಹೋತ್ಸವ ಅಂಗವಾಗಿ ರಸ್ತೆ ಜಾಗೃತಿ ಜಾಥಾ

• ಪ್ರಜೋದಯ ವರದಿ

ಬೇಲೂರು: ಸಂಚಾರ ನಿಯಮಗಳನ್ನು ಉಲ್ಲಂಘಿಸುವುದರಿಂದ ಅಪಘಾತಗಳು ಹೆಚ್ಚಾಗುತ್ತಿವೆ ಎಂದು ವೃತ್ತ ನಿರೀಕ್ಷಕ ರೇವಣ ಅವರು ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ವಜ್ರ ಮಹೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ರಸ್ತೆ ಸುರಕ್ಷತೆ ಕುರಿತು ಜಾಗೃತಿ ಮೂಡಿಸುವ ಜಾಥಾದಲ್ಲಿ ಮಾತನಾಡಿದ ಅವರು, ರಸ್ತೆ ಸುರಕ್ಷತೆ ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿಯಾಗಿದೆ. ವಿಶೇಷವಾಗಿ ಹೆಲ್ಮೆಟ್ ಧರಿಸದೆ ದ್ವಿಚಕ್ರ ವಾಹನ ಚಾಲನೆ, ಸೀಟ್ ಬೆಲ್ಟ್ ಬಳಸದೆ ಕಾರು ಚಲಾಯಿಸುವುದು, ವೇಗ ಮೀರಿಸುವುದು ಹಾಗೂ ಮೊಬೈಲ್ ಫೋನ್ ಬಳಸುತ್ತಾ

ವಾಹನ ಓಡಿಸು ವುದು ಜೀವಹಾನಿಗೆ ಪ್ರಮುಖ ಕಾರಣವಾಗುತ್ತಿದೆಂದು ಎಚ್ಚರಿಸಿದರು.

ಪೊಲೀಸ್ ಇಲಾಖೆ ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿದ್ದರೂ, ಕೇವಲ ದಂಡ ವಿಧಿಸುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಜನರಲ್ಲಿ ಜಾಗೃತಿ ಮತ್ತು ಸ್ವಯಂ ಶಿಸ್ತಿನ ಮನೋಭಾವ ಬೆಳೆಸುವುದು ಅತ್ಯಂತ ಮುಖ್ಯ. ವಿದ್ಯಾರ್ಥಿಗಳು ಮತ್ತು ಯುವಕರು ಸಂಚಾರ ನಿಯಮಗಳನ್ನು ಪಾಲಿಸಿ ಇತರರಿಗೆ ಮಾದರಿಯಾಗಬೇಕೆಂದು ಸಲಹೆ ನೀಡಿದರು.

ಸ್ಕೌಟ್ಸ್-ಗೈಡ್ಸ್‌ನ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಈಶ್ವರಪ್ಪ ಮಾತನಾಡಿ, ರಸ್ತೆ ಸುರಕ್ಷತೆ ಎಂಬುದು ಕೇವಲ ಸರ್ಕಾರದ ಜವಾಬ್ದಾರಿ ಮಾತ್ರವಲ್ಲ, ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಆಗಿದೆ. ಯುವ ಪೀಳಿಗೆಯು ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಇತರರಿಗೆ ಮಾದರಿಯಾಗಬೇಕು. ರಸ್ತೆ ಅಪಘಾತಗಳಿಂದ ಅನೇಕ ಅಮೂಲ್ಯ ಜೀವಗಳು ಕಳೆದು ಹೋಗುತ್ತಿರುವುದು ದುಃಖಕರ ವಿಷಯ. ಇಂತಹ ಜಾಗೃತಿ ಜಾಥಗಳು ಜನರಲ್ಲಿ ಹೊಣೆಗಾರಿಕೆಯ ಮನೋಭಾವ ಬೆಳೆಸುತ್ತವೆ. ಸಂಘಟನೆ ವಿದ್ಯಾರ್ಥಿಗಳಲ್ಲಿ ಶಿಸ್ತಿನ ಜೀವನ, ಸೇವಾ ಮನೋಭಾವ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುವ ಉದ್ದೇಶ ಹೊಂದಿದೆ. ವಜ್ರ ಮಹೋತ್ಸವದ ಅಂಗವಾಗಿ ಸಮಾಜ ಮುಖಿ ಕಾರ್ಯಕ್ರಮ ಹಮ್ಮಿಕೊಳ್ಳುವುದು ನಮ್ಮ ಧ್ಯೇಯವಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಶ್ವೇತಾ, ಮಾನಸ ವಾಣಿ, ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳು ಹಾಜರಿದ್ದರು.

ಎಎಪಿ ವಿರುದ್ಧ ಸುಳ್ಳು ಆರೋಪ: ಬಿಜೆಪಿಗೆ ಮುಖಭಂಗ

• ಪ್ರಜೋದಯ ವರದಿ

ಹಾಸನ: ಆಮ್ ಆದ್ಮಿ ಪಕ್ಷದ ಬೆಳವಣಿಗೆ ಸಹಿಸದೆ ಬಿಜೆಪಿ ನಾಯಕರು ನಡೆಸಿದ ರಾಜಕೀಯ ಪಿತೂರಿಗೆ ಕೋರ್ಟ್ ಉತ್ತರ ಕೊಟ್ಟಿದೆ. ನಮ್ಮ ನಾಯಕರ ವಿರುದ್ಧ ಸುಳ್ಳು ಹಗರಣದ ಆರೋಪ ಹೊರಿಸಿದ್ದ ವಿರೋಧಿಗಳಿಗೆ ಮುಖಭಂಗವಾಗಿದೆ ಎಂದು ಎಎಪಿ ರಾಜ್ಯ ಉಪಾಧ್ಯಕ್ಷ ಅಗಿಲೆ ಯೋಗೀಶ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾಯಾಲಯದ ತೀರ್ಪಿನಿಂದ ನಮ್ಮ ಪಕ್ಷ ಹಾಗು ನಾಯಕರು ಯಾವುದೇ ಭ್ರಷ್ಟಾಚಾರ ಮಾಡಿಲ್ಲ ಎಂದು ಗೊತ್ತಾಗಿದೆ. ಈ ಬಗ್ಗೆ ದೇಶದ ಜನರಿಗೆ ತಿಳಿಸಲು ದೇಶಾದ್ಯಂತ ಜನಾಂದೋಲನ ಮಾಡುತ್ತೇವೆ ಎಂದರು.

ಎಎಪಿ ಸರ್ಕಾರದ ಅವಧಿಯಲ್ಲಿ ಯಾವುದೇ ಅಬಕಾರಿ ಹಗರಣ ನಡೆದಿಲ್ಲ ಎಂದು ನ್ಯಾಯಾಲಯ ತೀರ್ಪು ನೀಡಿರುವುದು ಸತ್ಯಕ್ಕೆ ದೊರೆತ ಜಯ. ಅದನ್ನು ಸ್ವಾಗತಿಸುವೆ. ಬಿಜೆಪಿ ಮತ್ತು ಕಾಂಗ್ರೆಸ್ ಪಿತೂರಿಯಿಂದ ಸಿಬಿಐ ಸಂಸ್ಥೆಯನ್ನು ದುರ್ಬಳಕೆ ಮಾಡಿಕೊಂಡು ನಮ್ಮ ನಾಯಕರ ಮೇಲೆ ಭ್ರಷ್ಟಾಚಾರದ ಆರೋಪ ಹೊರಿಸಿದ್ದರು. ಅದರಿಂದ ನಮಗೆ ಮಾನಸಿಕ ಹಿಂಸೆಯಾಗಿತ್ತು, ಅವಮಾನ ಆಗಿತ್ತು. ಆದರೀಗ

ಕೋರ್ಟ್ ಕ್ಲೀನ್ ಚಿಟ್ ನೀಡಿರುವುದು ಸಂತೋಷ ತಂದಿದೆ, ನಮಗೆ ಆನೆ ಬಲ ಬಂದಂತಾಗಿದೆ ಎಂದರು.

ಭಾರತದ ನ್ಯಾಯಾಂಗ ವ್ಯವಸ್ಥೆ ಯಾವುದೇ ಭೇದ ಭಾವವಿಲ್ಲದೆ ಸತ್ಯದ ಪರ ನಿಂತಿದೆ ಎಂಬುದನ್ನು ಈ ತೀರ್ಪು ಸಾಬೀತುಪಡಿಸಿದೆ. ನ್ಯಾಯಾ ಲಯದ ತೀರ್ಪಿನಿಂದ ಪಕ್ಷದ ನಾಯ ಕರು ಹಾಗು ಕಾರ್ಯಕರ್ತರಿಗೆ ಹೊಸ ಉತ್ಸಾಹ ದೊರೆತಿದೆ. ಭ್ರಷ್ಟಾ ಚಾರ ವಿರೋಧಿಸುತ್ತಲೇ ಹುಟ್ಟಿದ ಆಮ್ ಆದ್ಮಿ ಪಕ್ಷದ ಬೆಳವಣಿಗೆ ಸಹಿ ಸದೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ನಡೆಸಿದ ಪಿತೂರಿಗೆ ಕೋರ್ಟ್ ಉತ್ತರ ನೀಡುವುದು ಮಾತ್ರವಲ್ಲದೇ ಸಿಬಿಐಗೆ ತರಾಟೆಗೆ ತೆಗೆದು ಕೊಂಡಿದೆ. ಸಿಬಿಐ ದುರ್ಬಳಕೆ ಮಾಡಿಕೊಂಡಿರುವವರ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಇದೇ ವೇಳೆ ಒತ್ತಾಯಿಸಿದರು.

ಪಕ್ಷದ ಜಿಲ್ಲಾಧ್ಯಕ್ಷ ಆನಂದ್ ತೇಜೂರು, ಮುಖಂಡರಾದ ವಿಜಯ್ ಕುಮಾರ್, ವಿಕಾಶ್, ಮಂಜಣ್ಣ, ಗೌರಮ್ಮ ಹಾಜರಿದ್ದರು.

ಮಾರ್ಚ್ 3 ರಂದು ಲಕ್ಷ್ಮೀನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ

• ಪ್ರಜೋದಯ ವರದಿ

ಅರಕಲಗೂಡು: ಪಟ್ಟಣದ ಕೋಟೆ ಶ್ರೀಲಕ್ಷ್ಮೀ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವವು ಮಾರ್ಚ್ 3ರಂದು ನಡೆಯಲಿದ್ದು, ಸಕಲ ಸಿದ್ದತೆಗಳು ನಡೆದಿವೆ. ಈ ಬಾರಿ ಅಂದು ಚಂದ್ರಗ್ರಹಣ ಇರುವ ಕಾರಣ ರಥೋತ್ಸವವು ಬೆಳಿಗ್ಗ 7-25ರಿಂದ 9ರೊಳಗೆ ಜರುಗಲಿದೆ. ಈ ಅವಧಿಯಲ್ಲಿ ಭಕ್ತರು ಆಗಮಿಸಿ ಯಶಸ್ವಿಗೊಳಿಸಬೇಕೆಂದು ಭಕ್ತ ಮಂಡಳಿ ಮುಖ್ಯಸ್ಥ ಜಿ.ಎನ್.ರಮೇಶ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಥೋತ್ಸವದಂದೇ ಈ ಬಾರಿ ಚಂದ್ರಗ್ರಹಣ ಬಂದಿರುವುದರಿಂದ ದೇವರ ಕಾರ್ಯವನ್ನು ಬೆಳಿಗ್ಗೆಯಿಂದಲೇ ಆರಂಭಿಸಿ 9ಗಂಟೆಗೆ ಪೂರ್ಣ ಗೊಳಿಸಲಿದ್ದೇವೆ. ಮಾಜಿ ಸಚಿವರು, ಶಾಸಕ ಎ.ಮಂಜು, ತಹಶೀಲ್ದಾರ್ ಕೆ.ಸಿ.ಸೌಮ್ಯ ರಥಕ್ಕೆ ಚಾಲನೆ ನೀಡುವರು. ವಿಶೇಷವಾಗಿ ಗ್ರಹಣ ಹಿನ್ನಲೆ ಭಕಾಧಿಗಳಿಗೆ ಊಟದ ವ್ಯವಸ್ಥೆ ಇರುವುದಿಲ್ಲ, ಪ್ರಸಾದದ ವ್ಯವಸ್ಥೆ ಮಾತ್ರವಿರುತ್ತದೆ. ಭಕ್ತಾಧಿಗಳು ಸಹಕುಟುಂಬ ಸಮೇತರಾಗಿ ಆಗಮಿಸಿ ರಥೋತ್ಸವದಲ್ಲಿ ಭಾಗವಹಿಸಿ ತನು, ಮನ, ಧನ ಅರ್ಪಿಸಿ ದೇವರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದು ಭಕ್ತ ಮಂಡಳಿ ಪರವಾಗಿ ಮನವಿ ಮಾಡುತ್ತೇನೆ ಎಂದರು.

ನರಸಿಂಹಮೂರ್ತಿ, ಚಂದ್ರಶೇಖರ್ ಇತರರು ಹಾಜರಿದ್ದರು.

ಖಮೇನಿಯನ್ನು ಶ್ರೇಷ್ಠ ನಾಯಕ ಎಂದೇ ಸ್ಮರಿಸಲಾಗುವುದು

ಮಾಸ್ಕೊ: ಇರಾನ್‌ನ ಸರ್ವೋಚ್ಚ ನಾಯಕ ಅಯಾತೊಲ್ಲಾ ಅಲಿ ಖಮೇನಿ ಹಾಗೂ ಅವರ ಕುಟುಂಬಸ್ಥರ ಹತ್ಯೆಯ ಮೂಲಕ ಮಾನವೀಯ ಮೌಲ್ಯಗಳು ಹಾಗೂ ಅಂತರರಾಷ್ಟ್ರೀಯ ಕಾನೂನುಗಳನ್ನು ಕಗ್ಗೊಲೆ ಮಾಡಲಾಗಿದೆಂದು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿದ್ದಾರೆ. ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿ ಯಾನ್ ಅವರಿಗೆ ಬರೆದ ಪತ್ರದಲ್ಲಿ ಪುಟಿನ್ ಈ ರೀತಿ ಸಂತಾಪ ಸೂಚಿಸಿದ್ದಾರೆಂದು ಕ್ರೆಮ್ಲಿನ್ ಬಿಡುಗಡೆಗೊಳಿಸಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ರಷ್ಯಾ-ಇರಾನ್ ನಡುವಿನ ಸ್ನೇಹ ಸಂಬಂಧವನ್ನು ವೃದ್ಧಿಸುವಲ್ಲಿ ಹಾಗೂ ಉಭಯ ರಾಷ್ಟ್ರಗಳ ನಡುವೆ ಸಮಗ್ರ ಕಾರ್ಯತಂತ್ರ ಪಾಲುದಾರಿಕೆಯನ್ನು ಸಾಕಾರಗೊಳಿಸುವಲ್ಲಿ ಖಮೇನಿ ಬಹು ಮುಖ್ಯ ಪಾತ್ರ ವಹಿಸಿದ್ದರು. ಅವರನ್ನು ನಮ್ಮದೇಶದಲ್ಲಿ ಶ್ರೇಷ್ಠ ನಾಯಕ ಎಂದೇ ಸ್ಮರಿಸಲಾಗುವುದೆಂದು ಹೇಳಿದ್ದಾರೆ.

ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರ ಬಂಧನ

ಅರಸೀಕೆರೆ: ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಬಂಧಿಸಿರುವ ಘಟನೆ ತಾಲ್ಲೂಕಿನ ನಾಗರಹಳ್ಳಿ ಗೇಟ್ ಸಮೀಪ ಶುಕ್ರವಾರ ನಡೆದಿದೆ.

ನಾಗರಹಳ್ಳಿಯ ಚೇತನ್, ಬೇವಿನ ಮರದ ಕೂಡು ರಸ್ತೆಯ ಸಿ.ಅರುಣ್ ಬಂಧಿತರು. ಅರಸೀಕೆರೆಯ ಶೋಯಬ್ ಅರ್ಫಾನ್ ಎಂಬಾತ ಪೊಲೀಸರನ್ನು ಕಂಡು ಓಡಿ ಹೋಗಿದ್ದಾನೆ. ಖಚಿತ ಮಾಹಿತಿ ಮೇರೆಗೆ ಗಂಡಸಿ ಪೊಲೀಸ್ ಠಾಣೆಯ ಪಿಎಸ್‌ಐ ಆರತಿ ಹಾಗು ಸಿಬ್ಬಂದಿ ದಾಳಿ ನಡೆಸಿದಾಗ ಕೃತ್ಯ ಬಯಲಿಗೆ ಬಂದಿದೆ. ಅನುಮಾನಾಸ್ಪದವಾಗಿ ಓಡಾಡಿ ಕೊಂಡಿದ್ದವರು ಪೊಲೀಸರು ಬರುತ್ತಿದ್ದಂತೆ ಓಡಿ ಹೋಗಲು ಯತ್ನಿಸಿದರು. ಇಬ್ಬರನ್ನು ಬೆನ್ನಟ್ಟಿ ಹಿಡಿದು ವಿಚಾರಿಸಿದಾಗ ಗಾಂಜಾ ಮಾರಾಟ ಮಾಡುತ್ತಿದ್ದುದು ಗೊತ್ತಾಗಿದೆ. ಬಂಧಿತರಿಂದ 6,500 ರೂ. ಮೌಲ್ಯದ 120 ಗ್ರಾಂ ತೂಕದ ಗಾಂಜಾ ಸೊಪ್ಪನ್ನು ವಶಪಡಿಸಿಕೊಳ್ಳಲಾಗಿದೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಜ್ಞಾನದ ಬಗ್ಗೆ ಕುತೂಹಲ ಬೆಳೆಸಿಕೊಂಡರೆ ಯಶಸ್ಸು

• ಪ್ರಜೋದಯ ವರದಿ

ಹಾಸನ: ಸರ್ ಸಿ.ವಿ.ರಾಮನ್ ಅವರ ನಾನುಡಿಯಂತೆ ಯುವಕರು ಸತತ ಪ್ರಯತ್ನ ಹಾಗೂ ವಿಜ್ಞಾನದ ಬಗ್ಗೆ ಸದಾ ಕುತೂಹಲವನ್ನು ಬೆಳೆಸಿಕೊಂಡರೆ ಜೀವನದಲ್ಲಿ ಯಶಸ್ಸು ಸಾಧಿಸ ಬಹುದೆಂದು ಸರ್ಕಾರಿ ಗೃಹ ವಿಜ್ಞಾನ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಎಚ್.ಎಂ. ಶಿವಮೂರ್ತಿ ಅವರು ಹೇಳಿದರು.

ನಗರದ ಆರ್.ಸಿ.ರಸ್ತೆ ಗಂಧದ ಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೇಂದ್ರ ಸರ್ಕಾರದ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ವ್ಯಾಪ್ತಿಯ ಮೈ ಭಾರತ ಹಾಸನ ಸಂಸ್ಥೆ, ಕಲ್ಪಿತ ಜನಜಾಗೃತಿ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಸಂಸ್ಥೆ, ವೈಭವ ಯುವತಿ ಸಾಂಸ್ಕೃತಿ ಸಮಾಜ ಸಹಯೋಗದಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ದಿನ -2026 ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾವೆಲ್ಲರೂ ವಿಜ್ಞಾನದ ಹಾದಿಯಲ್ಲಿ ಸಾಗಬೇಕಾಗಿದ್ದು, ವಿಜ್ಞಾನ ಲೋಕದಲ್ಲಿನ ವಿಸ್ಮಯಗಳ ಬಗ್ಗೆ ಜ್ಞಾನ ಹೊಂದಬೇಕು. ವಿಜ್ಞಾನ ಎಂಬ ಪದದಲ್ಲಿಯೇ ಜ್ಞಾನ ಅಡಗಿದ್ದು, ನಮ್ಮ ಯುವ ಸಮೂಹ ಜ್ಞಾನ ಸಂಪಾದನೆಯ ಕಡೆಗೆ ಹೆಚ್ಚು ಒತ್ತು ನೀಡಬೇಕು ಎಂದರು.

ಪಠ್ಯದ ರೂಪದಲ್ಲಿ ಜ್ಞಾನದ ಜೊತೆ ಜೊತೆಗೆ ನಮ್ಮ ಸುತ್ತ ಮುತ್ತಲು ನಡೆಯುವ ವಿಸ್ಮಯ ಸಂಗತಿಗಳನ್ನು ವಿಜ್ಞಾನದ ದೃಷ್ಟಿಕೋನದಲ್ಲಿ ನೋಡುವುದರೊಂದಿಗೆ ಅವುಗಳನ್ನು ಪ್ರಶ್ನಿಸಿ ಪ್ರಯೋಗದ ಮೂಲಕ ಸತ್ಯಾಸತ್ಯೆಗಳ ಬಗ್ಗೆ ಜನ ಸಾಮಾನ್ಯರಿಗೆ ಅರ್ಥ ಮಾಡಿಸಬೇಕಾಗಿದೆ. ನಮ್ಮ ದೇಶ ಈಗಾಗಲೇ ವಿಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಅವಿಷ್ಕಾರಗಳನ್ನು ಮಾಡಿ ಸಾಧನೆ ಮಾಡಿದ್ದು, ವಿಶ್ವದಲ್ಲಿಯೇ ಭಾರತ ವಿಜ್ಞಾನ ಕ್ಷೇತ್ರದಲ್ಲಿ ಅತೀ ಹೆಚ್ಚು ಸಾಧನೆ ಮಾಡುತ್ತಿರುವ ರಾಷ್ಟ್ರವಾಗಿದೆ. ಯುವಕರು ಮುಂದಿನ ದಿನಗಳಲ್ಲಿ ದೇಶವನ್ನು ಪ್ರಗತಿಯ ಹಾದಿಯಲ್ಲಿ ತೆಗೆದು ಕೊಂಡು ಹೋಗುವಲುವಾಗಿ ವಿಜ್ಞಾನ ಕ್ಷೇತ್ರದಲ್ಲಿ ಹೆಚ್ಚು ಸಂಶೋಧನೆಯಲ್ಲಿ ತೊಡಗಿಕೊಂಡು ಸಾಧನೆ ಮಾಡಬೇಕೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜು ಪ್ರಾಂಶುಪಾಲ ಡಿ.ಕೆ.ಮಂಜಯ್ಯ ಮಾತನಾಡಿ, ಭಾರತದಲ್ಲಿ ವಿಜ್ಞಾನ ಕ್ಷೇತ್ರ ಸಾಕಷ್ಟು ಬೆಳೆದಿದ್ದರು, ದೇಶದಲ್ಲಿ ಇನ್ನು ಹಲವು ಭಾಗಗಳಲ್ಲಿ ಮೂಢನಂಬಿಕೆಯಂತಹ ಆಚರಣೆಗಳು ಜಾರಿಯಲಿದೆ. ಹಾಗಾಗಿ ನಮ್ಮಲ್ಲಿರುವ ಮೂಢನಂಬಿಕೆ ಆಚರಣೆಗಳು ಹೋಗಲಾಡಿಸುವ ಮೂಲಕ ವಿಜ್ಞಾನದ ಹಾದಿಯಲ್ಲಿ ಯುವ ಜನತೆ ಸಾಗಬೇಕಿದೆ. ಪ್ರತಿ ಯೊಬ್ಬರು ವಿಜ್ಞಾನ ಕ್ಷೇತ್ರದಲ್ಲಿ ಆಗುವ ವಿಸ್ಮಯಗಳ ಬಗ್ಗೆ ಹಾಗೂ ಹೊಸ ಹೊಸ ಆವಿಷ್ಕಾರಗಳ ಬಗ್ಗೆ ಅಧ್ಯಯನ ಮಾಡಿ ತಿಳಿದುಕೊಳ್ಳಬೇಕು ಎಂದರು.

ಮೈ ಭಾರತ ಸಂಸ್ಥೆಯ ಹರೀಶ್, ಕಾಲೇಜಿನ ಸಹ ಪ್ರಾಧ್ಯಾಪಕ ನಂದನ್, ಉಪನ್ಯಾಸಕ ಪುಟ್ಟರಾಜು ಇತರರು ಹಾಜರಿದ್ದರು.

ಕಲಿಕೆಯ ಭಾಗವಾಗಿ ಆಕಾಶವಾಣಿಗೆ ವಿದ್ಯಾರ್ಥಿಗಳ ಭೇಟಿ

• ಪ್ರಜೋದಯ ವರದಿ

ಹಾಸನ: ನಗರದ ಆರ್.ಸಿ.ರಸ್ತೆ ಗಂಧದ ಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವತಿಯಿಂದ ಅಂತಿಮ ವರ್ಷದ ವಿದ್ಯಾರ್ಥಿಗಳ ಪ್ರಾಯೋಗಿಕ ಕಲಿಕೆಯ ಭಾಗವಾಗಿ ಆಕಾಶವಾಣಿ ಕೇಂದ್ರಕ್ಕೆ ಭೇಟಿ ನೀಡಿದ್ದರು.

ಆಕಾಶವಾಣಿ ಕೇಂದ್ರದಲ್ಲಿ ವಿಶೇಷವಾಗಿ ಆಯೋಜಿಸಲಾಗಿದ್ದ ಕೃತಕ ಬುದ್ಧಮತ್ತೆ ಹಾಗೂ ಕೃಷಿ ಅಭಿವೃದ್ಧಿ ವಿಚಾರದ ಕುರಿತ ನೇರ ಪ್ರಸಾರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪತ್ರಿಕೋದ್ಯಮ ವಿದ್ಯಾರ್ಥಿನಿಯರು ಕಾರ್ಯಕ್ರಮ ನಿರ್ವಹಣೆ ಹಾಗೂ ತಾಂತ್ರಿಕ ಕೆಲಸ ಕಾರ್ಯಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಕಾರ್ಯಕ್ರಮದ ಸುದ್ದಿ ವರದಿ ತಯಾರಿಕೆ ಮಾಡಿದ ವಿದ್ಯಾರ್ಥಿಗಳು ಆಕಾಶವಾಣಿ ಕಾರ್ಯಕ್ರಮ ಸಂಯೋಜಕ ಅರಕಲಗೂಡು ಮಧುಸೂದನ್ ಅವರಿಗೆ

ವರದಿ ಸಿದ್ಧಪಡಿಸಿಕೊಟ್ಟರು. ಕಲಿಕೆಯ ಭಾಗವಾಗಿ ಆಕಾಶವಾಣಿ ಕೇಂದ್ರಕ್ಕೆ ಭೇಟಿ ನೀಡಿದ್ದ ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ಮಾಹಿತಿ ಪಡೆದುಕೊಂಡರು.

ಪ್ರಾಂಶುಪಾಲ ಡಿ.ಕೆ.ಮಂಜಯ್ಯ ಅವರು ಕಾಲೇಜಿನ ಪತ್ರಿಕೋದ್ಯಮ ವಿದ್ಯಾರ್ಥಿಗಳು ಸಕ್ರಿಯವಾಗಿ ಒಂದಿಲ್ಲೊಂದು ಉತ್ತಮ ಗುಣಮಟ್ಟದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಶೈಕ್ಷಣಿಕವಾಗಿ ಬೆಳೆಯುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಭವಿಷ್ಯದ ದೃಷ್ಟಿಯಿಂದ ಇಂತಹ ಕಾರ್ಯಕ್ರಮ ಪ್ರಯೋಜನವಾಗಲಿದ್ದು, ವಿದ್ಯಾರ್ಥಿನಿಯರು ಅದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕ ಹೆಚ್.ಕೆ.ದಿಲೀಪ್ ಕುಮಾರ್ ಅವರ ಮಾರ್ಗ ದರ್ಶನದಲ್ಲಿ ಆಕಾಶವಾಣಿ ಕೇಂದ್ರ ಭೇಟಿ ಮಾಡಲಾಗಿತ್ತು.

ಇರಾನ್ ಮೇಲೆ ದಿಢೀರ್ ದಾಳಿಗೆ ಕಾರಣವೇನು?

ಖಮೇನಿ ಹತ್ಯೆ ಖಂಡಿಸಿ ಭಾರತದಲ್ಲೂ ಪ್ರತಿಭಟನೆ | ತರಹೇವಾರಿ

• ಪ್ರಜೋದಯ ವರದಿ

ನವದೆಹಲಿ: ಅಮೇರಿಕಾ ಮತ್ತು ಇಸ್ರೇಲ್ ನಡೆಸಿದ ಜಂಟಿ ದಾಳಿಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಯಾತೊಲ್ಲಾ ಅಲಿ ಖಮೇನಿ ಮೃತಪಟ್ಟಿದ್ದು ಈ ಎಲ್ಲಾ ಬೆಳವಣಿಗೆಗಳ ನಡುವೆ ಇರಾನ್ ಮೇಲೆ ಇಸ್ರೇಲ್-ಅಮೇರಿಕ ಜಂಟಿ ದಾಳಿ ನಡೆಸಲು ಏನು ಕಾರಣ ಎಂಬುದರ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಹಲವು ಬಗೆಯ ಚರ್ಚೆಗಳು ನಡೆಯುತ್ತಿವೆ.

ಈಚೆಗೆ ಅಫ್ಘಾನಿಸ್ತಾನವು ಪಾಕಿಸ್ತಾನದ ಮೇಲೆ ದಾಳಿ ಮಾಡಿತ್ತು. ಅದಾದ ಕೆಲವೇ ಗಂಟೆಗಳಲ್ಲಿ ಅಮೇರಿಕಾ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ದಾಳಿ ಮಾಡಿವೆ. ಈ ಹಿಂದೆ ಇಸ್ರೇಲ್, ಇರಾನಿನ ಮೇಲೆ ದಾಳಿ ಮಾಡಿದಾಗ ಪಾಕಿಸ್ತಾನ ಅದರ ಬೆಂಬಲಕ್ಕೆ ನಿಂತಿತ್ತು. ಇಸ್ರೇಲ್ ಚರಿತ್ರೆಯಿಂದ ಪಾಠ ಕಲಿತು ಬಿಟ್ಟಿತ್ತು. ತನ್ನ ಆಪ್ತ ಮಿತ್ರನನ್ನು ಕರೆಸಿಕೊಂಡು ಇರಾನ್ ದೇಶದ ಬಗೆಗಿನ ಮಾಹಿತಿ ಕೊಡಲು, ಓಮನ್ ದೇಶದ ಜೊತೆಗಿನ ಮತ್ತು ಅಫ್ಘಾನ್ ಜೊತೆಗಿನ ಸ್ನೇಹವನ್ನು ಬಳಸಿಕೊಂಡಿದೆ ಎಂಬುದು ಕೆಲವರ ವಾದ.

ಅಫ್ಘಾನ್ ಈಚೆಗೆ ಪಾಕ್ ಮೇಲೆ ಬಾಂಬ್

ದಾಳಿ ನಡೆಸಿದೆ. ಪಾಕ್ ಇರಾನ್‌ಗೆ ಸಹಾಯ ಮಾಡುವುದು ದೂರದ ಮಾತು, ತನ್ನ ಮನೆ ಉಳಿಸಿಕೊಳ್ಳಲು ಪರದಾಡುತ್ತಿದೆ. ಓಮನ್ ಸೇರಿ ಇತರೆ ದೇಶಗಳು ಇರಾನ್‌ನ ಚಲನವಲನಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಇಸ್ರೇಲ್‌ಗೆ ರವಾನೆ ಮಾಡಿವೆ ಎಂಬುದು ಚರ್ಚೆಯ ಭಾಗವಾಗಿದೆ. ಮೇಲ್ನೋಟಕ್ಕೆ ಇರಾನ್‌ನ ಅಣುಸ್ಥಾವರ ಹೆಚ್ಚು ಅಪಾಯಕಾರಿ. ಹೀಗಾಗಿ ಇರಾನ್ ಮೇಲೆ ದಾಳಿ ಅನಿವಾರ್ಯ ಎನ್ನಲಾಗಿದೆ. ನಿಜವಾದ ಕಾರಣ ತೈಲ. ಇಲ್ಲಿ ಒಂದು ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆಯುವ ಹುನ್ನಾರವಿದೆ. ಒಂದು ತೈಲದ ಮೇಲಿನ ನಿಯಂತ್ರಣ, ಎರಡು ಚೀನಾ ಮೇಲೆ ನಿಯಂತ್ರಣ. ಇರಾನ್‌ನ ಬಹುತೇಕ ತೈಲ ಚೀನಾಕ್ಕೆ ರಫ್ತುಗುತ್ತದೆ. ಇರಾನ್ ಸುತ್ತ ಮುತ್ತಲಿನ ಎಲ್ಲಾ ಮುಸ್ಲಿಂ ದೇಶಗಳನ್ನೂ ಅಮೇರಿಕಾ ತನ್ನ ಹಿಡಿತದಲ್ಲಿ ಇಟ್ಟುಕೊಂಡಿದೆ. ಆ ದೇಶಗಳ ನೆಲವನ್ನು ಬಳಸಿಕೊಂಡು ಇರಾನ್ ಮೇಲೆ ದಾಳಿ ಮಾಡಲಾಗುತ್ತಿದೆ. ಹೀಗಾಗಿ ಇರಾನ್ ಕೋಪದಿಂದ ಬಹರೈನ್, ದುಬೈ, ಅಬುಧಾಬಿ ಮೇಲೆ ಕೂಡ ದಾಳಿ ಮಾಡುತ್ತಿದೆ ಎಂದು ವರದಿಯಾಗಿದೆ.

ಅಮೇರಿಕಾ ಮತ್ತು ಇಸ್ರೇಲ್ ದಾಳಿ ಮಾಡಿ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಹತ್ಯೆ ಖಂಡಿಸಿ ದೇಶದ ಹಲವೆಡೆ ಭಾನುವಾರ ಪ್ರತಿಭಟನೆ ಮತ್ತು ಶೋಕಾಚರಣೆಗಳು ನಡೆದವು.

ಶಿಯಾ ಸಮುದಾಯದ 15 ಲಕ್ಷ ಜನರಿರುವ ಕಾಶ್ಮೀರದ ಲಾಲ್ ಚೌಕ್, ಸೈದಾ ಕದಲ್, ಬದ್ಗಾಮ್, ಬಂಡಿಪೋರಾ, ಅನಂತನಾಗ್ ಮತ್ತು ಪುಲ್ವಾಮಗಳಲ್ಲಿ ಪ್ರತಿಭಟನೆ ತೀವ್ರವಾಗಿತ್ತು. ಪ್ರತಿಭಟನಕಾರರು ಅಮೇರಿಕಾ ಮತ್ತು ಇಸ್ರೇಲ್ ವಿರುದ್ಧ ಘೋಷಣೆಗಳನ್ನು ಹಾಕುತ್ತ ಎದೆಗೆ ಕೈಯಿಂದ ಬಡಿದುಕೊಂಡರು. ಸೋಮವಾರವೂ ಬಂದ್‌ಗೆ ಕರೆ ನೀಡಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಕಾಶ್ಮೀರದಾದ್ಯಂತ ಶಾಲಾ-ಕಾಲೇಜುಗಳಿಗೆ ಎರಡು ದಿನ ರಜೆ ಘೋಷಿಸಲಾಗಿದೆ. ದೇಶದಲ್ಲಿನ ಅನೇಕ ಮುಸ್ಲಿಂ ಸಂಘ-ಸಂಸ್ಥೆಗಳು ಹಲವು ದಿನಗಳ ಶೋಕಾಚರಣೆಯನ್ನು ಘೋಷಿಸಿದ್ದು ಸೋಮವಾರ ಪ್ರತಿಭಟನೆಗೆ ಕರೆ ನೀಡಿವೆ.

ಉತ್ತರ ಪ್ರದೇಶದ ಬಾರಾ ಇಮಾಂಬಾರ ಮಸೀದಿ ಬಳಿ ಜನರು ಪ್ರತಿಭಟನೆ ನಡೆಸಿದರು. ಮಹಿಳೆಯರು ಖಮೇನಿ ಚಿತ್ರಗಳನ್ನು ಹಿಡಿದು ಕೊಂಡು ಶೋಕತಪ್ತರಾಗಿದ್ದರು. ಸೋಮವಾರ ನಡೆಯಲಿರುವ ಪ್ರತಿಭಟನೆಯಲ್ಲಿ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಪ್ರತಿಕೃತಿಗಳನ್ನು ದಹಿಸುವುದಾಗಿ ಅಖಿಲ ಭಾರತೀಯ ಶಿಯಾ ವೈಯಕ್ತಿಕ ಕಾನೂನು ಮಂಡಳಿ ಅಧ್ಯಕ್ಷ ಮೌಲಾನಾ ಯಾಸೂಬ್ ಅಬ್ಬಾಸ್ ಘೋಷಿಸಿದ್ದಾರೆ.

ಶಿಯಾ ಸಮುದಾಯವು ಮೂರು ದಿನ ಶೋಕಾಚರಣೆಯನ್ನು ನಡೆಸಲಿದೆ. ಈ ಸಂದರ್ಭದಲ್ಲಿ ಕಪ್ಪು ಬಟ್ಟೆ ಧರಿಸಿ, ಮನೆಗಳಲ್ಲಿ ಕಪ್ಪು ಧ್ವಜಗಳನ್ನು ಹಾರಿಸಿ, ವಿಶೇಷ ಪ್ರಾರ್ಥನೆಗಳನ್ನು ಸಲ್ಲಿಸಲಾಗುವುದೆಂದು ಅವರು ಹೇಳಿದ್ದಾರೆ. ಪಂಜಾಬ್‌ನ ಲೂಧಿಯಾನದಲ್ಲಿಯೂ ಪ್ರತಿಭಟನೆ ಮತ್ತು ಪ್ರತಿಕೃತಿ ದಹನ ನಡೆಯಿತು. ಅಜ್ಮೇರ್‌ನಲ್ಲಿ ಶೋಕಾಚರಣೆ ಘೋಷಿಸಲಾಗಿದೆ.

ಮುಸ್ಲಿಮರ ವಿರುದ್ಧದ ಯುದ್ಧ

ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಹತ್ಯೆಯನ್ನು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ತೀವ್ರವಾಗಿ ಖಂಡಿಸಿದ್ದು, ಇದು ಮುಸ್ಲಿಮರ ವಿರುದ್ಧದ ಯುದ್ಧ ಘೋಷಣೆ ಎಂದು ಆಕ್ರೋಶ ಹೊರಹಾಕಿದ್ದಾರೆ.

ಇಸ್ರೇಲ್ ಹಾಗು ಅಮೇರಿಕಾದ ಜಂಟಿ ದಾಳಿಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಯಾತೊಲ್ಲಾ ಅಲಿ ಖಮೇನಿ ಮೃತಪಟ್ಟಿದ್ದಾರೆ. ಖಮೇನಿ ಹತ್ಯೆಗೆ ಸೇಡು ತೀರಿಸಿಕೊಳ್ಳುವುದು ನಮ್ಮ ಕಾನೂನುಬದ್ಧ ಕರ್ತವ್ಯ ಮತ್ತು ಹಕ್ಕು ಎಂದು ಮಸೂದ್ ಪೆಜೆಶ್ಕಿಯಾನ್ ಪ್ರತಿಪಾದಿಸಿದ್ದಾರೆ.

ಇರಾನ್ ಅಧ್ಯಕ್ಷ ಖಮೇನಿ ಹತ್ಯೆ

ದುಬೈ ಕನ್ನಡಿಗರಿಗೆ ಸಹಾಯಹಸ್ತ ಚಾಚಿದ ಒಕ್ಕಲಿಗ ಸಂಘ

ಆಪರೇಷನ್ ಎಪಿಕ್ ಫ್ಯೂರಿ ಹೆಸರಿನಲ್ಲಿ ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿ ಯುದ್ಧ ಕಾರ್ಮೋಡ ಕವಿದಿದ್ದು ದುಬೈನಲ್ಲಿ ತೊಂದರೆ ಅನುಭವಿಸುತ್ತಿರುವ ಕನ್ನಡಿಗರಿಗೆ ದುಬೈ ಒಕ್ಕಲಿಗರ ಸಂಘ ಸಹಾಯಹಸ್ತ ಚಾಚಿದೆ.

ದುಬೈನಲ್ಲಿ ಒಕ್ಕಲಿಗರ ಸಂಘ ಸ್ಥಾಪಿಸಿ ವಿವಿಧ ಚಟುವಟಿಕೆಗಳಲ್ಲಿ ತೊಡಗಿರುವ ಹಾಸನದ ಯತೀಶ್ ಗೌಡ ಅವರು ಕನ್ನಡಿಗರಿಗೆ ಆಸರೆಯಾಗಿದ್ದಾರೆ. ತಮ್ಮ ಸಂಪರ್ಕಕ್ಕೆ ಸಿಗುವವರನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸ್ಥಳಾಂತರಿಸುವುದು, ವಸತಿ, ಊಟದ ವ್ಯವಸ್ಥೆ ಮಾಡುವುದಕ್ಕೆ ಮುಂದಾಗಿದ್ದಾರೆ. ತಮ್ಮ ಮೊಬೈಲ್ ಸಂಖ್ಯೆ 00971555114205 ಅನ್ನು ನೀಡಿರುವ ಅವರು ಏನೇ ಸಮಸ್ಯೆಯಿದ್ದರೂ ಕರೆ ಮಾಡುವಂತೆ ಕೋರಿದ್ದಾರೆ. ಇದುವರೆಗೆ 150ಕ್ಕೂ ಹೆಚ್ಚು ಜನರು ಕರೆ ಮಾಡಿದ್ದು ನೆರವಾಗಿದ್ದೇನೆ. ಕೆಲವರಿಗೆ ವಸತಿ, ಊಟದ ವ್ಯವಸ್ಥೆ ಮಾಡಲಾಗಿದೆ. ಕೆಲವರಿಗೆ ವಿಮಾನ ಪ್ರಯಾಣದ ಬಗ್ಗೆ ಮಾಹಿತಿ ನೀಡಲಾಗುತ್ತಿದೆ ಎಂದಿದ್ದಾರೆ.

» **ಮೊದಲನೇ ಪುಟದಿಂದ**

ಟ್ರಂಪ್, ಅವರು ಅದನ್ನು ಮಾಡದಿರುವುದು ಒಳಿತು. ಒಂದು ವೇಳೆ ಅವರು ದಾಳಿ ಮಾಡಿದರೆ, ನಾವು ಹಿಂದೆಂದೂ ಕಂಡಿರದ ಬಲದೊಂದಿಗೆ ಪ್ರತ್ಯುತ್ತರ ನೀಡುತ್ತೇವೆಂದು ಅಬ್ಬರಿಸಿದ್ದಾರೆ. ಅಯಾತೊಲ್ಲಾ ಅಲಿ ಖಮೇನಿ ಹತ್ಯೆಯಿಂದ ಪ್ರತೀಕಾರ ಮುಂದುವರಿಸಿರುವ ಇರಾನ್, ಇಸ್ರೇಲ್‌ನ ಬೀಟ್ ಶೆಮೆಶ್‌ನಲ್ಲಿ ಕ್ಷಿಪಣಿ ದಾಳಿ ನಡೆಸಿದೆ. ಜೆರುಸಲೇಂನಿಂದ ಸುಮಾರು 35 ಕಿ.ಮೀ. ದೂರದಲ್ಲಿರುವ ಬೀಟ್ ಶೆಮೆಶ್‌ನಲ್ಲಿರುವ ವಸತಿ ಕಟ್ಟಡದ ಮೇಲೆ ನಡೆಸಿದ ನೇರ ಕ್ಷಿಪಣಿ ದಾಳಿಯಲ್ಲಿ ಎಂಟು ಜನರು ಸಾವನ್ನಪ್ಪಿದ್ದಾರೆಂದು ರಕ್ಷಣಾ ಸೇವೆಗಳು ತಿಳಿಸಿವೆ.

ಇರಾನ್ ಕ್ಷಿಪಣಿಯು ನಗರದ ವಸತಿ ಪ್ರದೇಶಕ್ಕೆ ಅಪ್ಪಳಿಸಿದ್ದು, ಬಾಂಬ್‌ನಿಂದ ರಕ್ಷಣೆ ಪಡೆಯಲು ಸಾರ್ವಜನಿಕರಿಗಾಗಿ ಮಾಡಲಾದ ಶೆಲ್ಟರ್ ಮತ್ತು ಸುತ್ತಮುತ್ತಲಿನ ಮನೆಗಳಿಗೆ ವ್ಯಾಪಕ ಹಾನಿಯುಂಟಾಗಿದೆ. ಯುವತಿ ಸೇರಿ ಇತರ ಇಬ್ಬರ ಸ್ಥಿತಿ ಗಂಭೀರವಾಗಿದೆ. ಘಟನಾ ಸ್ಥಳದಲ್ಲಿದ್ದ 20 ಜನರಿಗೆ ಅಲ್ಪ ಪ್ರಮಾಣದ ಗಾಯಗಳಾಗಿವೆ. ನಾಲ್ಕು ವರ್ಷದ ಬಾಲಕನೊಬ್ಬ ಗಾಯಗೊಂಡಿದ್ದಾನೆಂದು ಇಸ್ರೇಲ್‌ನ ಮ್ಯಾಗೆನ್ ಡೇವಿಡ್ ಆಡಮ್ ತುರ್ತು ಸೇವೆ ತಿಳಿಸಿದೆ. ಅಗ್ನಿಶಾಮಕ ದಳದವರು ಸ್ಥಳದಲ್ಲಿದ್ದು, ಅವಶೇಷಗಳಡಿ ಸಿಲುಕಿರುವವರಿಗಾಗಿ ಶೋಧ ನಡೆಸುತ್ತಿದ್ದಾರೆ. ಕ್ಷಿಪಣಿ ಅಪ್ಪಳಿಸಿದ ಕಟ್ಟಡದ ಸಮೀಪದಲ್ಲಿದ್ದ 12ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ. ಅಮೇರಿಕಾ ಮತ್ತು ಇಸ್ರೇಲ್ ಜಂಟಿಯಾಗಿ ನಡೆಸುತ್ತಿರುವ ಆಪರೇಷನ್ ಎಪಿಕ್ ಫ್ಯೂರಿ ಕಾರ್ಯಾಚರಣೆಯ ಮೊದಲ 24 ಗಂಟೆಗಳ ಘಟನೆಗಳ ಪೂರ್ಣ ಮಾಹಿತಿಯನ್ನು ಅಮೇರಿಕಾದ ರಕ್ಷಣಾ ಪಡೆಯಾಗಿರುವ ಯುಎಸ್ ಸೆಂಟ್ರಲ್ ಕಮಾಂಡ್ ಬಿಡುಗಡೆ ಮಾಡಿದೆ. ಅಧ್ಯಕ್ಷರು ದಿಟ್ಟ ಕ್ರಮಕ್ಕೆ ಆದೇಶಿಸಿ ದಾಗ ನಮ್ಮ ಕೆಚ್ಚೆದೆಯ ಸೈನಿಕರು, ನಾವಿಕರು, ವಾಯು ಪಡೆಗಳ ಸೈನಿಕರು, ಮೆರಿನ್‌ಗಳು, ಗಾರ್ಡಿಯನ್ಸ್ ಮತ್ತು ಕೋಸ್ಟ್ ಗಾರ್ಡ್ ಸೈನಿಕರು ಕಾರ್ಯಪ್ರವೃತ್ತರಾಗಿದ್ದಾರೆ.

ಪತ್ರಿಕಾ ವಿತರಕರ ಶ್ರೇಯೋಭಿವೃದ್ಧಿಯ ಭರವಸೆ

» **ಮೊದಲನೇ ಪುಟದಿಂದ**

ಲಾಗಿದೆ. ರಾಜ್ಯೋತ್ಸವ ಸಂದರ್ಭದಲ್ಲಿ ವಿತರಕರನ್ನು ಗುರುತಿಸಿ ಪ್ರಶಸ್ತಿ ನೀಡಲಾಗುತ್ತಿದೆ ಎಂದರು.

ಘೋಷಣೆಗಷ್ಟೇ ಸೀಮಿತವಾದ ಯೋಜನೆ

ಪತ್ರಿಕಾ ವಿತರಕರ ಹಿತಕ್ಕಾಗಿ 2018ರಲ್ಲಿ 2 ಕೋ.ರೂ. ಕ್ಷೇಮಾಭಿವೃದ್ಧಿ ನಿಧಿ ಘೋಷಿಸಲಾಗಿದೆಯಾದರೂ ಇನ್ನೂ ಜಾರಿಯಾಗಿಲ್ಲ. ಕನಿಷ್ಟ 10 ಕೋ.ರೂ. ಅನುದಾನ ಮೀಸಲಿಟ್ಟು ಆರೋಗ್ಯ, ಅಪಘಾತ ಹಾಗು ಕುಟುಂಬ ಭದ್ರತಾ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಆಗ್ರಹಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಜಿಲ್ಲಾಧ್ಯಕ್ಷ ಉದಯರವಿ ಅವರು ಮಾತನಾಡಿ, ಪತ್ರಿಕಾ ವಿತರಕರು ಸಮಾಜದ ನಿಜವಾದ ಮೌನ ಯೋಧರಾಗಿದ್ದು, ಮನೆ ಮನೆಗೆ ಪತ್ರಿಕೆ ತಲುಪಿಸುವ ಮೂಲಕ ಜನ ಜಾಗೃತಿ ಮೂಡಿಸುತ್ತಿದ್ದಾರೆ. ಡಿಜಿಟಲ್ ಯುಗದಲ್ಲಿಯೂ ಮುದ್ರಿತ ಪತ್ರಿಕೆಯ ಮಹತ್ವ ಅಚಲವಾಗಿದ್ದು, ನಂಬಿಕೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಹೊತ್ತ ಮಾಧ್ಯಮವಾಗಿ ಅದು ಮುಂದುವರಿದಿದೆ ಎಂದು ಹೇಳಿದರು. ಲಯನ್ಸ್ ಕ್ಲಬ್ ಅಧ್ಯಕ್ಷ ಗಿರೀಶ್, ತಾಲ್ಲೂಕು ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಮಂಜುನಾಥ್ ಮತ್ತಿತರರಿ ದ್ದರು.

ಯುದ್ಧ ಪೀಡಿತ ಪ್ರದೇಶದಲ್ಲಿ ಜಿಲ್ಲೆಯ ಹಕ್ಕಿ ಪಿಕ್ಕಿಗಳು

ದುಬೈನಲ್ಲಿ ಐವರು ಕನ್ನಡಿಗರು

ರಾಜ್ಯ ಮಟ್ಟದ ದಿನಪತ್ರಿಕೆಯೊಂದು ಕೊಡ ಮಾಡುವ ಪ್ರಶಸ್ತಿ ಸ್ವೀಕಾರ ಸಮಾರಂಭಕ್ಕೆ ತೆರಳಿದ್ದ ಅರಸೀಕೆರೆ ತಾಲ್ಲೂಕಿನ ಐವರು ವಿಮಾನ ಸಂಚಾರ ರದ್ದಾಗಿರುವ ಹಿನ್ನಲೆಯಲ್ಲಿ ದುಬೈನಲ್ಲಿ ಸಿಲುಕಿದ್ದಾರೆ. ಪ್ರಶಸ್ತಿ ಸ್ವೀಕಾರ ಹಾಗು ವಿದೇಶ ಪ್ರವಾಸಕ್ಕಾಗಿ ನಾಲ್ಕು ದಿನಗಳ ಹಿಂದಷ್ಟೇ ಜಯದೇವ್ ಎಂಬುವವರ ನೇತೃತ್ವದಲ್ಲಿ ತೆರಳಿದ್ದರು. ಶನಿವಾರ ಕಾರ್ಯಕ್ರಮ ಮುಗಿಸಿಕೊಂಡು ವಿಮಾನ ಹತ್ತಬೇಕೆನ್ನುವಷ್ಟರಲ್ಲಿ ಆಪರೇಷನ್ ಎಪಿಕ್ ಫ್ಯೂರಿ ಹೆಸರಿನಲ್ಲಿ ಅಮೇರಿಕಾ ಮತ್ತು ಇಸ್ರೇಲ್ ಒಟ್ಟಾಗಿ ಇರಾನ್ ಮೇಲೆ ನಡೆಸಿದ ದಾಳಿಯಿಂದ ಸಂಚಾರ ಸ್ಥಗಿತಗೊಂಡಿದೆ. ಆದ್ದರಿಂದ ಅವರೆಲ್ಲರೂ ಅಲ್ಲಿಯ ಹೋಟೇಲ್‌ನಲ್ಲಿ ವಾಸ್ತವ್ಯ ಮಾಡಬೇಕಾಗಿದೆ. ಮಾ.2ರ ಸೋಮವಾರದಿಂದ ವಿಮಾನ ಹಾರಾಟ ಪ್ರಾರಂಭವಾಗುವ ನಿರೀಕ್ಷೆ ಇದೆ.

ಯುದ್ಧ ಭೀತಿ ಹಿನ್ನಲೆಯಲ್ಲಿ ಅಲ್ಲಿನ ಸರ್ಕಾರ ಇರುವ ಸ್ಥಳದಿಂದ ಹೊರಬರದಂತೆ ಎಚ್ಚರಿಕೆ ನೀಡಿದೆ. ವಾಹನ ಸಂಚಾರವೂ ಸ್ಥಗಿತವಾಗಿರುವುದರಿಂದ ಎಲ್ಲಿಯೂ ಹೋಗುವಂತಿಲ್ಲ. ಇರುವ ಜಾಗಕ್ಕೆ ಊಟ, ಉಪಹಾರ ತಲುಪುತ್ತಿದ್ದು, ಸದ್ಯಕ್ಕೆ ಯಾವ ತೊಂದರೆ ಇಲ್ಲವೆಂದು ಜಯದೇವ್ ಅವರು ತಿಳಿಸಿದ್ದಾರೆ.

ನಶಾ ಮುಕ್ತ ಸಮಾಜ ನಿರ್ಮಾಣ ಎಲ್ಲರ ಧ್ಯೇಯವಾಗಲಿ

» **ಮೊದಲನೇ ಪುಟದಿಂದ**

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಅವರು ಮಾತನಾಡಿ, ರಾಜ್ಯ ಪೊಲೀಸ್ ಇಲಾಖೆ ವತಿಯಿಂದ ರಾಜ್ಯಾದ್ಯಂತ 5 ರಿಂದ 10 ಕಿ.ಮೀ. ಓಟ ಆಯೋಜಿಸಲಾಗಿದೆ. ಡ್ರಗ್ಸ್ ಮುಕ್ತ ಸಮಾಜ ಹಾಗು ಅಪರಾಧ ಪ್ರಮಾಣ ಕಡಿಮೆಗೊಳಿಸುವುದು ಕಾರ್ಯಕ್ರಮದ ಮುಖ್ಯ ಗುರಿ ಎಂದು ತಿಳಿಸಿದರು.

5 ಕಿ.ಮೀ. ಓಟದಲ್ಲಿ ವಿವಿಧ ಶಾಲಾ ಕಾಲೇಜು ವಿದ್ಯಾರ್ಥಿಗಳು, ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಮಹಿಳೆಯರು, ಸರ್ಕಾರಿ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಿ.ಪಿ.ಕೃಷ್ಣೇಗೌಡ, ಎಸ್‌ಡಿಎಂ ಕಾಲೇಜು ಮತ್ತು ಆಸ್ಪತ್ರೆ ನಿರ್ದೇಶಕ ಪ್ರಸನ್ನ ರಾವ್, ಶೈಲಜಾ, ರೆಡ್ ಕ್ರಾಸ್ ಜಿಲ್ಲಾ ಸಭಾಪತಿ ಹೆಚ್.ಪಿ.ಮೋಹನ್, ಅರಣ್ಯಾಧಿಕಾರಿ ಹೇಮಂತ್, ಎಎಸ್‌ಪಿ ತಮ್ಮಯ್ಯ, ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷ ಐ.ಜಿ.ರಮೇಶ್, ಲಯನ್ಸ್ ಹಾಸನಾಂಬ ಕ್ಲಬ್ ಅಧ್ಯಕ್ಷ ಕೆ.ಕೆ.ಮೋಹನ್ ಕುಮಾರ್, ಶಬ್ಬೀರ್ ಅಹಮದ್, ಕೆ.ಟಿ.ಜಯಶ್ರೀ ಮತ್ತಿತರರಿದ್ದರು.

ಜಂಬೂರು ಕಾಲೋನಿಯಲ್ಲಿ ಭೀಮ ನಗರ ನಾಮಫಲಕ ಅನಾವರಣ

• ಪ್ರಜೋದಯ ವರದಿ

ನುಗ್ಗೇಹಳ್ಳಿ: ಹೋಬಳಿಯ ಜಂಬೂರು ಕಾಲೋನಿ ಭೀಮ ನಗರ ನಿವಾಸಿಗಳ ಅನುಕೂಲಕ್ಕಾಗಿ ರಾಜ್ಯ ರಸ್ತೆ ಸಾರಿಗೆ ಬಸ್ ನಿಲುಗಡೆ ಜೊತೆಗೆ ಬಸ್ ನಿಲ್ದಾಣ ನಿರ್ಮಾಣಕ್ಕೆ ಆದ್ಯತೆ ನೀಡಲಾಗುತ್ತದೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಭರವಸೆ ನೀಡಿದರು.

ಭಾನುವಾರ ಗ್ರಾಮದಲ್ಲಿ ಭೀಮ ನಗರ ನಾಮಫಲಕ ಅನಾವರಣಗೊಳಿಸಿ ಮಾತನಾಡಿದ ಅವರು, ಈ ಹಿಂದೆ ಜಂಬೂರು ಕಾಲೋನಿಯೆಂದು ಕರೆಯಲಾಗುತ್ತಿತ್ತು. ಗ್ರಾಮಸ್ಥರೆಲ್ಲ ಸೇರಿ ಭೀಮ ನಗರ ಎಂದು ಹೆಸರಿಟ್ಟಿದ್ದಾರೆ. ಅದರಿಂದ ಚನ್ನರಾಯ ಪಟ್ಟಣ-ತಿಪಟೂರು ಮಾರ್ಗದಲ್ಲಿ ಸಂಚರಿಸುವ ಸಾರಿಗೆ ಬಸ್‌ಗಳಿಗೆ ನಿಲುಗಡೆ ನೀಡುವಂತೆ ತಿಳಿಸಲಾಗಿದೆ ಎಂದರು.

ಮುಂಬರುವ ದಿನಗಳಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಬಸ್ ನಿಲ್ದಾಣ ನಿರ್ಮಿಸಲಾಗುವುದು. ಗ್ರಾಮದಲ್ಲಿ ಕುಡಿಯುವ ನೀರು, ಒಳಚರಂಡಿ, ಹಲವು ದೇವಾಲಯ ನಿರ್ಮಾಣ, ಗಂಗಾ ಕಲ್ಯಾಣ ಯೋಜನೆ ಮೂಲಕ ಬೋರವೆಲ್‌ಗಳ ಅನುಕೂಲ ಮಾಡಿಕೊಡಲಾಗಿದೆ. ತಾವರೆಕೆರೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿಗೆ ಅನುದಾನ ಕೊಡಿಸಲಾಗುವುದೆಂದು ಭರವಸೆ ನೀಡಿದರು.

ಇದೇ ವೇಳೆ ನಿವೃತ್ತ ಬಸ್ ನಿರ್ವಾಹಕ ಸಣ್ಣೇಗೌಡ ಅವರು ಕಾಂಗ್ರೆಸ್ ತೊರೆದು ಶಾಸಕರ ಸಮ್ಮುಖದಲ್ಲಿ ಜೆಡಿಎಸ್‌ಗೆ ಸೇರ್ಪಡೆಯಾದರು. ಎಪಿಎಂಸಿ ಮಾಜಿ ಅಧ್ಯಕ್ಷ ದೊರೆಸ್ವಾಮಿ, ಹೇಮಾವತಿ ಸಕ್ಕರೆ ಕಾರ್ಖಾನೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಹೆಚ್.ಪಿ.ರಂಗಸ್ವಾಮಿ, ಕೃಷಿ ಪತ್ತಿನ ಮಾಜಿ ಅಧ್ಯಕ್ಷ ಹಾಲಿ ನಿರ್ದೇಶಕ ಹುಲಿಕೆರೆ ಸಂಪತ್ ಕುಮಾರ್, ಮುಖಂಡರಾದ ಜೆ.ಡಿ.ಶಂಕರ್, ರಮೇಶ್, ಹೊನ್ನೇಗೌಡ, ಅಣ್ಣಯ್ಯ, ಮಹೇಶ್, ಹೊನ್ನಮ್ಮ ಧರಣಿ ಕುಮಾರ್ ಇತರರು ಇದ್ದರು.

ಕನ್ನಡಿಗರ ಸುರಕ್ಷಿತ ವಾಪಸ್ಸಿಗೆ ಕ್ರಮ: ಪರಮೇಶ್ವರ್

• ಪ್ರಜೋದಯ ವರದಿ

ಬೆಂಗಳೂರು : ಮಧ್ಯ ಪ್ರಾಚ್ಯ ದೇಶಗಳಲ್ಲಿ ಸಿಲುಕಿರುವ ಕನ್ನಡಿಗರನ್ನು ಸುರಕ್ಷಿತವಾಗಿ ಕರೆದಿರುವ ಪ್ರಯತ್ನಗಳು ನಡೆದಿವೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇರಾನ್ ಮೇಲೆ ಇಸ್ರೇಲ್, ಅಮೇರಿಕಾ ದಾಳಿ ನಡೆಸಿರುವುದರಿಂದ ಸಂಘರ್ಷದ ವಾತಾವರಣ ನಿರ್ಮಾಣವಾಗಿದೆ. ಈ ಹಿನ್ನಲೆಯಲ್ಲಿ ಇರಾನ್, ದುಬೈ ಸೇರಿ ಮಧ್ಯ ಪ್ರಾಚ್ಯ ದೇಶಗಳಲ್ಲಿ ನೆಲೆಸಿರುವ ಕನ್ನಡಿಗರನ್ನು ಕರೆತರುವ ಪ್ರಯತ್ನಗಳನ್ನ ನಡೆಸಿದ್ದೇವೆ. ಚಿಕ್ಕಬಳ್ಳಾಪುರ ಮೂಲದ ವಿದ್ಯಾರ್ಥಿಗಳು ಸೇರಿ ಸೇರಿ 150 ಹೆಚ್ಚು ಕನ್ನಡಿಗರು ಸಿಲುಕಿದ್ದಾರೆ. ಅವರೆಲ್ಲರನ್ನು ಸಂಪರ್ಕಿಸಿ ಸುರಕ್ಷಿತವಾಗಿ ಕರೆತರುವ ಪ್ರಯತ್ನ ಮುಂದುವರೆದಿದೆ ಎಂದರು.

• ಪ್ರಜೋದಯ ವರದಿ

ಬೇಲೂರು: ತಾಲ್ಲೂಕಿನ ಅರೇಹಳ್ಳಿ ಹೋಬಳಿ ನಲ್ಕೆ ಗ್ರಾಮದ ಹರೀಶ್ ನಲ್ಕೆ ಅವರಿಗೆ ಹಂಪಿ ಕನ್ನಡ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದೆ. ಹರೀಶ್ ಅವರು ಪ್ರೊ. ಸುರೇಶ್ ರೈ ಅವರ ಮಾರ್ಗದರ್ಶನದಲ್ಲಿ ಚಿಕ್ಕಮಗಳೂರು ಜಿಲ್ಲೆಯ ದಲಿತ ಚಳವಳಿ-ಸಮಕಾಲೀನ ಅಧ್ಯಯನ ವಿಷಯವಾಗಿ ಪ್ರಬಂಧ ಮಂಡಿಸಿದ್ದರು. ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲ್ಲೋತ್ ಅವರು ಪದವಿ ಪ್ರದಾನ ಮಾಡಿದರು. ಹರೀಶ್ ನಲ್ಕೆ ಅವರ ಸಾಧನೆಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಅಭಿನಂದಿಸಿದೆ.

ಬಡ ಹೆಣ್ಣು ಮಕ್ಕಳಿಂದ ಶಿಕ್ಷಣ ಕಸಿಯುವ ಹುನ್ನಾರ

» **ಮೊದಲನೇ ಪುಟದಿಂದ**

ಕಿತ್ತುಕೊಳ್ಳುವ ಹುನ್ನಾರ ನಡೆ ಯುತ್ತಿದೆ. ರಾಜ್ಯದಲ್ಲಿ 6000 ಗ್ರಾಮ ಪಂಚಾಯಿತಿ ಸರ್ಕಾರಿ ಶಾಲೆಗಳನ್ನು ಕೆಪಿಎಸ್ ಮ್ಯಾಗ್ನೆಟ್ ಶಾಲೆಯನ್ನಾಗಿ ಪರಿವರ್ತಿಸಲು ಹೊರಟಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಎಐಡಿಎಸ್‌ಓ ಖಂಡಿಸುತ್ತದೆ ಎಂದರು.

ಕಳೆದ 15 ವರ್ಷಗಳಲ್ಲಿ ರಾಜ್ಯ ಸರ್ಕಾರದ ವರದಿಯ ಪ್ರಕಾರ 17 ಲಕ್ಷ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇನ್ನೊಂದೆಡೆ ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯ ಒದಗಿಸದೆ, ಪೋಷಕರ ಮೇಲೆ ಆರೋಪ ಮಾಡಲಾಗುತ್ತಿದೆ. ರಾಜ್ಯದಲ್ಲಿ 60,000 ಕ್ಕೂ ಹೆಚ್ಚು ಶಿಕ್ಷಕರ ಹುದ್ದೆಗಳು ಖಾಲಿ ಇವೆ, 21,000ಕ್ಕೂ ಹೆಚ್ಚು ಶಾಲೆ ಕಟ್ಟಡಗಳು ದುರಸ್ತಿಗಾಗಿ ಕಾಯುತ್ತಿವೆ. ಕುಡಿಯುವ ನೀರು, ಶೌಚಾಲಯದ ವ್ಯವಸ್ಥೆ ಇಲ್ಲದೆ ಸಾವಿರಾರು ಸರ್ಕಾರಿ ಶಾಲೆಗಳು ನಶಿಸುತ್ತಿವೆ. ಇಂತಹ ಸಂದರ್ಭದಲ್ಲಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಶ್ರಮಿಸಬೇಕಾದ ಸರ್ಕಾರ ಶಾಲೆಗಳಿಗೆ ಬೀಗ ಹಾಕು ತ್ತಿರುವುದು ಏಕೆಂದು ಪ್ರಶ್ನಿಸಿದರು.

ಹೋರಾಟಗಾರ ನರಸಿಂಹೇಗೌಡ ಅವರು ಮಾತನಾಡಿ, ಮಕ್ಕಳು ಶಿಕ್ಷಣದಿಂದ ವಂಚಿತರಾದರೆ ಸಮಾಜಕ್ಕೆ ಬಹಳಷ್ಟು ಮಾರಕ. ಅದನ್ನು ಅರಿತು ಸರ್ಕಾರ ಪ್ರತಿಯೊಂದು ಮಗುವಿಗೂ ಶಿಕ್ಷಣವನ್ನು ಕೊಡ ಬೇಕು. ಇಲ್ಲಿಯವರೆಗೆ ಆಡಳಿತ ನಡೆಸಿದ ಮೂರು ಪಕ್ಷದವರು ಕೂಡ ಶಿಕ್ಷಣ, ಜನ ವಿರೋಧಿ ನೀತಿಗಳನ್ನು ಜಾರಿಗೆ ತರುತ್ತಿವೆ. ಇದರ ವಿರುದ್ಧ ಪ್ರಬಲ ಹೋರಾಟ ರೂಪಿಸ ಬೇಕೆಂದರು.

ದಲಿತ ಸಂಘರ್ಷ ಸಮಿತಿಯ ಎಂ.ಬಿ.ಪುಟ್ಟಸ್ವಾಮಿ, ರಾಜ್ಯ ರೈತ ಸಂಘಟನೆ ಜಿಲ್ಲಾಧ್ಯಕ್ಷ ಕಣಗಾಲ್ ಮೂರ್ತಿ, ಸಂವಿಧಾನ ಓದು ಬಳಗ ಸಂಚಾಲಕ ರಾಜು ಗೊರೂರು, ಕೆ.ವಿ.ಭಟ್, ಕಾರ್ಮಿಕ ಮುಖಂಡ ಹನುಮೇಶ್, ಹೆಚ್.ಎಲ್. ನಿರ್ಮಲಾ, ದೇವರಾಜಪುರ ಗ್ರಾಮದ ಸರ್ಕಾರಿ ಶಾಲೆ ಉಳಿಸಿ ಸಮಿತಿ ಅಧ್ಯಕ್ಷ ಮಲ್ಲೇಶ್ ಮಾತನಾಡಿದರು.

ಶಾಲೆ ಉಳಿವಿಗೆ ಸಮಿತಿ ರಚನೆ

ಸರ್ಕಾರಿ ಶಾಲೆಗಳನ್ನು ಉಳಿಸುವ ಉದ್ದೇಶದಿಂದ ಸಮಿತಿ ರಚಿಸಲಾಗಿದ್ದು, ಜಿಲ್ಲಾಧ್ಯಕ್ಷರಾಗಿ ಮಮತಾ, ಕಾರ್ಯದರ್ಶಿಯಾಗಿ ಚೈತ್ರ, ಉಪಾಧ್ಯಕ್ಷ, ಸಂಘಟನೆಗಳ ಮುಖಂಡರು ಹಾಗು ಸದಸ್ಯರ ಆಯ್ಕೆ ಮಾಡಲಾಯಿತು. ಎಐಡಿಎಸ್‌ಓ ಜಿಲ್ಲಾಧ್ಯಕ್ಷೆ ಚೈತ್ರ, ಉಪಾಧ್ಯಕ್ಷ ಅಭಿಷೇಕ್, ಕಾರ್ಯದರ್ಶಿ ಸುಷ್ಮಾ, ಪದಾಧಿಕಾರಿಗಳಾದ ಪುರುಷೋತ್ತಮ್, ಶ್ರೇಷ್ಠ, ಧನಂಜಯ್ ಧನರಾಜ್,ತಿಲಕ್, ಧನುಶ್ರೀ ಮತ್ತಿತರರಿದ್ದರು.

ಭಾರತಕ್ಕೆ ಬೃಹತ್ ಗೆಲುವಿನ ಗುರಿ

• ಪ್ರಜೋದಯ ವರದಿ

ಕೋಲ್ಕತ್ತಾ: ಇಲ್ಲಿನ ಈಡೆನ್ ಗಾರ್ಡನ್ಸ್ ಕ್ರಿಕೆಟ್ ಮೈದಾನದಲ್ಲಿ ನಡೆದ ಟಿ-20 ವಿಶ್ವಕಪ್‌ನ ಸೂಪರ್8ರ ನಿರ್ಣಾಯಕ ಪಂದ್ಯದಲ್ಲಿ ಅಮೋಘ ಬ್ಯಾಟಿಂಗ್ ಪ್ರದರ್ಶಿಸಿದ ವೆಸ್ಟ್ ಇಂಡೀಸ್ ತಂಡವು ನಿಗದಿತ 20 ಓವರ್‌ಗಳಲ್ಲಿ 195 ರನ್ ಕಲೆಹಾಕಿದೆ. ಆ ಮೂಲಕ ಭಾರತದ ಗೆಲುವಿಗೆ 196 ರನ್‌ಗಳ ಗುರಿ ನೀಡಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ನಡೆಸಿದ ವೆಸ್ಟ್ ಇಂಡೀಸ್ ತಂಡಕ್ಕೆ ನಾಯಕ ಶಾಯ್ ಹೋಪ್ ಹಾಗೂ ರೋಸ್ಟನ್ ಚೇಸ್ ಉತ್ತಮ ಆರಂಭ ನೀಡಿದರು. ಬಳಿಕ ಜಸ್‌ಪ್ರೀತ್ ಬುಮ್ರಾ ಅವರು ಒಂದೇ ಓವರ್‌ನಲ್ಲಿ ಹೆಟ್‌ಮೇಯರ್ ಹಾಗೂ ಚೇಸ್ ಅವರ ವಿಕೆಟ್ ಪಡೆಯುವ ಮೂಲಕ ವಿಂಡೀಸ್ ರನ್ ವೇಗಕ್ಕೆ ಕಡಿವಾಣ ಹಾಕಿದರು. ಆದರೆ, ನಂತರ ಬಂದ ಜೇಸನ್ ಹೋಲ್ಡರ್ ಹಾಗೂ ರೋವ್‌ಮನ್ ಪೋವೆಲ್ ಭಾರತೀಯ ಬೌಲರ್‌ಗಳ ಮೇಲೆ ಸವಾರಿ ಮಾಡಿದರು. ಈ ಜೋಡಿ ಮುರಿಯದ 76 ರನ್‌ಗಳ ಜೊತೆ ಯಾಟ ಆಡಿದರು. ಈ ವೇಳೆ ಹೋಲ್ಡರ್ (ಅಜೇಯ 37 ರನ್) ಹಾಗೂ ರೋವ್‌ಮನ್ ಪೋವೆಲ್ (ಅಜೇಯ 34 ರನ್) ಬಾರಿಸಿದರು.

ಭಾರತದ ಪರ ಅಮೋಘ ಬೌಲಿಂಗ್ ಪ್ರದರ್ಶಿಸಿದ ಜಸ್‌ಪ್ರೀತ್ ಬುಮ್ರಾ 2, ಹಾರ್ದಿಕ್ ಪಾಂಡ್ಯ ಹಾಗೂ ವರುಣ್ ಚಕ್ರವರ್ತಿ ತಲಾ ಒಂದೊಂದು ವಿಕೆಟ್ ಪಡೆದರು.

ಸ್ಕಾಲರ್ಸ್ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನ

• ಪ್ರಜೋದಯ ವರದಿ

ಹಾಸನ: ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ನಗರದ ಸ್ಕಾಲರ್ಸ್ ಶಾಲೆಯಲ್ಲಿ ಮಕ್ಕಳೇ ತಯಾರಿಸಿದ ವಿಜ್ಞಾನ ವಸ್ತುಗಳ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಮ ಉದ್ಘಾಟಿಸಿದ ಎಂಸಿಎಫ್ ಹಿರಿಯ ನಿರ್ದೇಶಕ ರಜನೀಶ್ ಶರ್ಮ ಅವರು ಮಾತನಾಡಿ, ವಿಜ್ಞಾನ ಮಾದರಿಗಳು ಅನ್ವಯಿಕವಾಗಿರಬೇಕು. ಅವು ಸಮಾಜಕ್ಕೆ ಅನುಕೂಲವಾಗುವ ಸಾಧನಗಳಾಗಿರಬೇಕು. ವಿಜ್ಞಾನದ ಬೆಳವಣಿಗೆಯಿಂದ ದೇಶದ ಪ್ರಗತಿ ಸಾಧ್ಯ. ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾಗಿದೆ. ವಸ್ತು ಪ್ರದರ್ಶನಗಳು ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಮತ್ತು ಸಂಶೋಧನಾ ಕೌಶಲ್ಯ ಪ್ರೋತ್ಸಾಹಿಸುವ ವೇದಿಕೆಯಾಗಿದೆ ಎಂದರು.

ಭಾರತೀಯ ಭೌತಶಾಸ್ತ್ರಜ್ಞ ಸರ್

ಸಿ.ವಿ.ರಾಮನ್ ಅವರ ಸ್ಮರಣಾರ್ಥ ಫೆ.28 ರಂದು ರಾಷ್ಟ್ರೀಯ ವಿಜ್ಞಾನ ದಿನವಾಗಿ ಆಚರಿಸಲಾಗುತ್ತದೆ. ನಿತ್ಯ ಜೀವನದಲ್ಲಿ ವಿಜ್ಞಾನದ ಅವಶ್ಯಕತೆ ಹೆಚ್ಚಿದೆ. ಅದನ್ನು ತಿಳಿಸುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ಹೇಳಿದರು.

ಶಾಲೆಯ ಆಡಳಿತಾಧಿಕಾರಿ ಡಾ.ಹೆಚ್.ಎನ್.ಚಂದ್ರಶೇಖರ್ ಅವರು ಮಾತನಾಡಿ, ಏನಾದರೂ ಸಾಧಿಸಬೇಕೆಂಬ ಹಠ ಇದ್ದರೆ ಮಾತ್ರ ಅಸಾಧ್ಯವಾದುದನ್ನು ಸಾಧಿಸಲು ಸಾಧ್ಯ. ಮಕ್ಕಳು ತಮ್ಮಲ್ಲಿರುವ ಸುಪ್ತ ಪ್ರತಿಭೆಯನ್ನು ಇಂತಹ ವೇದಿಕೆಗಳ ಮೂಲಕ ಸಾಬೀತುಪಡಿಸಬೇಕೆಂದು ಸಲಹೆ ನೀಡಿದರು.

ಭಾರತ ಶಾಂತಿ ಬಯಸುವ ದೇಶ, ಯುದ್ಧಗಳು ಸರಿಯಲ್ಲ : ಡಿಸಿಎಂ

• ಪ್ರಜೋದಯ ವರದಿ

ಬೆಂಗಳೂರು : ಮೂವರು ಶಾಸಕರು ಸೇರಿ ಸಾವಿರಾರು ಮಂದಿ ದುಬೈನಲ್ಲಿ ಸಿಲುಕಿದ್ದಾರೆಂದು ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕ, ಕೇರಳ ಸೇರಿ ದಕ್ಷಿಣ ಭಾರತ ಲಕ್ಷಾಂತರ ಮಂದಿ ದುಬೈನಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಇರಾನ್-ಇಸ್ರೇಲ್ ಯುದ್ಧ ದಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಅವರುಗಳನ್ನು ಸುರಕ್ಷಿತವಾಗಿ ಕರೆತರಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ ಎಂದರು.

ವಿದೇಶದಲ್ಲಿ ಸಿಲುಕಿರುವವರನ್ನು ಕೇಂದ್ರ ಸರ್ಕಾರ ರಕ್ಷಣೆ ಮಾಡಬೇಕಿದೆ. ರಾಜ್ಯ ಸರ್ಕಾರ ಅಗತ್ಯ ಸಹಕಾರ ನೀಡಲಿದೆ. ಕರ್ನಾಟಕದ ಶಾಸಕ ಎ.ಸಿ. ಶ್ರೀನಿವಾಸ್, ವಿಧಾನ ಪರಿಷತ್ ಸದಸ್ಯ ಎಸ್.ಎಲ್.ಭೋಜೇಗೌಡ, ಶಾಸಕ ಭರತ್‌ರೆಡ್ಡಿ ಅವರ ಕುಟುಂಬದ ಸದಸ್ಯರು ದುಬೈನಲ್ಲಿ ಸಿಲುಕಿದ್ದಾರೆ ಎಂದು ಮಾಹಿತಿ ಇದೆ. ಯಾರಿಗೂ ಆತಂಕ ಬೇಡ, ಎಲ್ಲರನ್ನೂ ಸುರಕ್ಷಿತವಾಗಿ ಕರೆತರಲು ಪ್ರಯತ್ನಿಸುತ್ತೇವೆ. ಭಾರತ ಶಾಂತಿ ಬಯಸುವ ದೇಶ. ಶಾಲೆಯ ಮೇಲೆ ದಾಳಿ ನಡೆಸಿ, 70 ಮಕ್ಕಳನ್ನು ಹತ್ಯೆ ಮಾಡಿರುವುದು ಖಂಡನೀಯ ಎಂದರು.

ಸಾವಯವ ಕೃಷಿಯಲ್ಲಿ ಪ್ರಾವೀಣ್ಯತೆ ಸಾಧಿಸಿದ ಯುವಕ

ಉದ್ಯೋಗ ಅರಸಿ ಅಲೆದಾಡಿದ್ದ ಯುವಕ | ಹುಟ್ಟೂರಿನಲ್ಲೇ ಅಪ್ರತಿಮ ಸಾಧನೆ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಕೈ ಕೆಸರಾದರೆ ಬಾಯಿ ಮೊಸರು ಎಂಬ ಮಾತಿನಂತೆ ಸಾವಯವ ಹಾಗು ಸಮಗ್ರ ಕೃಷಿ ಅನುಸರಿಸಿರುವ ರೈತರೊಬ್ಬರು ಇತರರಿಗೆ ಮಾದರಿಯಾಗಿದ್ದಾರೆ.

ವ್ಯವಸಾಯ ಎಂದರೆ ನಷ್ಟದ ಕ್ಷೇತ್ರ ಎಂದು ಭಾವಿಸುವ ಪ್ರಸ್ತುತ ದಿನಗಳಲ್ಲಿ ಅಂತಹ ಅಪವಾದಗಳನ್ನು ದೂರ ಮಾಡಿ ಸತತ ಪರಿಶ್ರಮ, ತಾಳ್ಮೆ ಹಾಗು ವೈಜ್ಞಾನಿಕ ವಿಧಾನಗಳಿಂದ ಯಶಸ್ವಿ ರೈತ ಎನಿಸಿಕೊಂಡಿದ್ದಾರೆ ತಾಲ್ಲೂಕಿನ ವಗರಹಳ್ಳಿ ಗ್ರಾಮದ ಪ್ರವೀಣ್.

ತಮ್ಮ 4 ಎಕರೆ 23 ಗುಂಟೆ ಜಮೀನಿನಲ್ಲಿ 200 ತೆಂಗಿನ ಮರ, 300 ಅಡಿಕೆ, 200 ಬಾಳೆ, ಪಪ್ಪಾಯಿ, ಬಟರ್ ಫ್ರೂಟ್, ಚಕ್ಕೋತ, ನಿಂಬೆ, ಮಾವು, ಮೆಣಸು, ವೀಳ್ಯದೆಲೆ, ನುಗ್ಗೆ, ಏಲಕ್ಕಿ, ಡ್ರಾಗನ್ಸ್ ಫ್ರೂಟ್ಸ್, ನೇರಳೆ, ದಾಳಿಂಬೆ, ಸಪೋಟ ಸೇರಿ ವಿವಿಧ ಬಗೆಯ ಹಣ್ಣು ಹಾಗು ಇತರೆ ಗಿಡಗಳನ್ನು ಬೆಳೆಸಿದ್ದಾರೆ.

ಜಮೀನಿನ ಒಂದು ಬದಿಯಲ್ಲಿ ದೊಡ್ಡದಾದ ಕೃಷಿ ಹೊಂಡ ನಿರ್ಮಿಸಿದ್ದು, ಪೈಪ್ ಲೈನ್ ಅಳವಡಿಸಿದ್ದಾರೆ. ಮರ, ಗಿಡ ಹಾಗು ಬೆಳೆಗಳಿಗೆ ಹನಿ ನೀರಾವರಿ ಮತ್ತು ತುಂತುರು ನೀರಾವರಿ ವ್ಯವಸ್ಥೆ ಮಾಡಲಾಗಿದೆ. ಉಳುಮೆ ಮಾಡಲು, ತೆಂಗು ಮತ್ತು ಅಡಿಕೆ ಕಾಯಿ ಕೀಳುವ ನಿಟ್ಟಿನಲ್ಲಿ ಯಂತ್ರೋಪಕರಣ ಬಳಸುತ್ತಿದ್ದಾರೆ. ಕಳೆದ 15 ವರ್ಷಗಳಿಂದ ರಾಸಾಯನಿಕ ಗೊಬ್ಬರ ಹಾಗು ಕ್ರಿಮಿನಾಶಕ ಔಷಧಿಯ ಅವಲಂಬನೆ ತಪ್ಪಿಸಿರುವ ಅವರು ಸಾವಯವ ಪದ್ಧತಿ ಮೂಲಕ ಇಳುವರಿ

ಪಡೆದು ಲಾಭದತ್ತ ಸಾಗುತ್ತಿದ್ದಾರೆ. ಪ್ರಾರಂಭದಲ್ಲಿ ಕಷ್ಟ ಎನಿಸಿದರು 2-3 ವರ್ಷಗಳ ನಂತರ ಉತ್ತಮ ಪ್ರತಿಫಲ ಸಿಕ್ಕಿದೆ ಎಂದು ಪ್ರವೀಣ್ ಅವರು ಹೇಳುತ್ತಾರೆ. ಸಾವಯವ ಅಥವಾ ಕೊಟ್ಟಿಗೆ ಗೊಬ್ಬರಕ್ಕಾಗಿ 10 ಹಸು, 2 ಎಮ್ಮೆ ಹಾಗು ಐದಾರು ಕುರಿ ಗಳನ್ನು ಸಾಕಿದ್ದು ಜೊತೆಗೆ ನೂರಕ್ಕೂ ಹೆಚ್ಚು ನಾಟಿ ಕೋಳಿ ಸಾಕುತ್ತಿದ್ದಾರೆ. ಅದರಿಂದ ತಮ್ಮ ಜಮೀನಿಗೆ ಸಾಕಾಗುವಷ್ಟು ಕೊಟ್ಟಿಗೆ ಗೊಬ್ಬರ ವನ್ನು ತಾವೇ ಉತ್ಪಾದನೆ ಮಾಡಿಕೊಂಡು ಬೆಳೆಗಳಿಗೆ ಅಗತ್ಯಾನುಸಾರ ನೀಡುತ್ತಿರುವುದು ವಿಶೇಷವಾಗಿದೆ.

2 ಗುಂಟೆ ಜಾಗದಲ್ಲಿ ಕೈ ದೋಟ ಮಾಡಿಕೊಂಡು ಮನೆಗೆ ಬೇಕಾಗುವಷ್ಟು ಸೊಪ್ಪು ಹಾಗು ತರಕಾರಿ ಪದಾರ್ಥ ಬೆಳೆದುಕೊಳ್ಳುತ್ತಾರೆ. ಕನಕಾಂಬರ, ಮಲ್ಲಿಗೆ, ಸೇವಂತಿಗೆ, ದಾಸವಾಳ, ಗುಲಾಬಿ ಸೇರಿ ಸಾಕಷ್ಟು ಹೂವಿನ ಗಿಡಗಳನ್ನು ಬೆಳೆಸಿರುವುದು ವಿಶೇಷ. ಅಲ್ಲದೆ ಹೈನುಗಾರಿಕೆಯಲ್ಲಿ ತೊಡಗಿರುವ ಅವರು ಹಸು ಹಾಗು ಎಮ್ಮೆಗಳಿಗಾಗಿ ವಿವಿಧ ಬಗೆಯ ಮೇವನ್ನು ಸಹ ಬೆಳೆಸಿದ್ದಾರೆ. 10 ಪೆಟ್ಟಿಗೆಗಳನ್ನು ಅಳವಡಿಸಿ ಜೇನು ಕೃಷಿ ಪ್ರಾರಂಭಿಸಿದ್ದಾರೆ. ಅದರಿಂದ ವರ್ಷದಲ್ಲಿ 2 ರಿಂದ 3 ಬಾರಿ ಜೇನು ತುಪ್ಪ ಸಂಗ್ರಹವಾಗಲಿದ್ದು, ಪ್ರತಿ ಕೆ.ಜಿ.ಗೆ 600 ರಿಂದ 700 ರೂ. ದರ ದೊರೆ ಯುತ್ತಿದೆ.

ಮೊಟ್ಟೆಯಿಂದ ನಿರೀಕ್ಷೆಯಂತೆ ಲಾಭ

ಪ್ರವೀಣ್ ಅವರು ತಮ್ಮ ಜಮೀನಿನಲ್ಲಿರುವ ಹಳೆ ಮನೆಯನ್ನು ನಾಟಿ ಕೋಳಿಗಳ ಸಾಕಾಣಿಕೆಗೆಂದು ಮಾರ್ಪಾಡು ಮಾಡಿಕೊಂಡಿದ್ದು ಸುಮಾರು ನೂರಕ್ಕೂ ಹೆಚ್ಚು ಕೋಳಿಗಳನ್ನು ಸಾಕಿದ್ದಾರೆ. ಪ್ರತಿದಿನ 20 ರಿಂದ 30ಕ್ಕೂ ಹೆಚ್ಚು ಮೊಟ್ಟೆಗಳು ಸಿಗುತ್ತಿದ್ದು, ತಲಾ ಒಂದು ಮೊಟ್ಟೆಗೆ 16 ರಿಂದ 20 ರೂ. ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ಕೆಲವು ಬೆಳೆಗಳ ಅವಧಿ ಆಧಾರದ ಮೇಲೆ 1 ತಿಂಗಳು, 3 ತಿಂಗಳು, 6 ತಿಂಗಳು ಹಾಗು ವಾರ್ಷಿಕ ಬೆಳೆಗಳ ಮಾದರಿಯಲ್ಲಿ ಹಂತ ಹಂತವಾಗಿ ಆದಾಯ ಸಿಗುತ್ತಿದ್ದು, ಖರ್ಚು ವೆಚ್ಚ ಕಳೆದು ವಾರ್ಷಿಕವಾಗಿ ನಿರೀಕ್ಷೆಗಿಂತ ಹೆಚ್ಚು ಆದಾಯ ಉಳಿಯುತ್ತಿದೆ.

" **ಸಾವಯವ, ಸಮಗ್ರ ಕೃಷಿ ಅನುಸರಿಸಿದರೆ ಮಣ್ಣಿನ ಫಲವತ್ತತೆ ಕಾಪಾಡಬಹುದು. ಸಾವಯವ ಕೃಷಿ ಪದ್ಧತಿ ಯಲ್ಲಿ ಬೆಳೆದ ಆಹಾರ ಪದಾರ್ಥಗಳನ್ನು ಉಪಯೋಗಿಸುವುದರಿಂದ ಆರೋಗ್ಯವು ಸದೃಢವಾಗಿರುತ್ತದೆ. ಪ್ರಾರಂಭದಲ್ಲೇ ಲಾಭ ಸಿಗಬೇಕೆಂದು ಬಯಸದೆ ಸ್ವಲ್ಪ ತಾಳ್ಮೆ ರೂಢಿಸಿಕೊಂಡರೆ ಇಲ್ಲಿಯೂ ಯಶಸ್ಸು ಸಾಧಿಸಬಹುದು.**
-ಪ್ರವೀಣ್, ಸಾವಯವ ಕೃಷಿಕ

ಉದ್ಯೋಗ ಅರಸಿ ಮುಂಬೈಗೆ ಪ್ರಯಾಣ

ಕಳೆದ 15 ವರ್ಷಗಳ ಹಿಂದೆ ಪ್ರವೀಣ್ ಅವರ ತಂದೆ ಸಾಲ ಮಾಡಿ ಕೊಳವೆ ಬಾವಿ ಕೊರೆಸಿದ್ದು ಕಬ್ಬು ಬೆಳೆ ಮಾಡಿದ್ದರು. ನಿರೀಕ್ಷೆಯಂತೆ ಬೆಳೆ ಸಿಗದ ಕಾರಣ ನಷ್ಟ ಅನುಭವಿಸಿ ಸಾಲ ಹೆಚ್ಚಾಯಿತು. ಅದರಿಂದ ಬೇಸತ್ತು ಪ್ರವೀಣ್ ವ್ಯಾಸಂಗ ಮೊಟಕುಗೊಳಿಸಿ ಸಾಲ ತೀರಿಸುವ ಸಲುವಾಗಿ ಉದ್ಯೋಗ ಅರಸಿ ಬೆಂಗಳೂರಿಗೆ ಹೋಗುತ್ತಾರೆ. ನಿರೀಕ್ಷಿಸಿದಷ್ಟು ಸಂಬಳ ದೊರೆಯದ ಹಿನ್ನಲೆಯಲ್ಲಿ ಮುಂಬೈನತ್ತ ಮುಖ ಮಾಡುತ್ತಾರೆ. ಆದರೂ ಅಲ್ಲಿ ಇರಲಾಗದೆ ಹುಟ್ಟೂರಿಗೆ ವಾಪಾಸ್ಸಾದರು. ನಷ್ಟ ಅನುಭವಿಸಿದ ಜಾಗದಲ್ಲೇ ಲಾಭ ಮಾಡಬೇಕೆಂದು ಹಠ ತೊಟ್ಟು ವೈಜ್ಞಾನಿಕ ಪದ್ಧತಿ ಮೂಲಕ ಅಂದುಕೊಂಡಿದ್ದನ್ನು ಸಾಧಿಸಿದರು.

ಪ್ರವೀಣ್‌ಗೆ ಒಲಿದ ಪ್ರಶಸ್ತಿಗಳು

ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಪ್ರವೀಣ್‌ಗೆ ಹಲವಾರು ಪ್ರಶಸ್ತಿಗಳು ಅರಸಿ ಬಂದಿವೆ. 2013-14ನೇ ಸಾಲಿನಲ್ಲಿ ಬೆಂಗಳೂರು ಜಿಕೆವಿಕೆ ಯುವ ರೈತ ಪ್ರಶಸ್ತಿ ನೀಡಿದೆ. 2015ರಲ್ಲಿ ನಡೆದ ಕೃಷಿ ಮೇಳದಲ್ಲಿ ಜಿಲ್ಲಾ ಮಟ್ಟದ ಪ್ರಗತಿ ಶೀಲ ರೈತ ಪ್ರಶಸ್ತಿ, ಕ್ಯಾನ್ ಬ್ಯಾಂಕ್‌ನಿಂದ ಅತ್ಯುತ್ತಮ ರೈತ ಪ್ರಶಸ್ತಿ, 2016ರಲ್ಲಿ ಕೃಷಿ ಇಲಾಖೆಯ ರಾಗಿ ಬೆಳೆ ಪ್ರಶಸ್ತಿ, 2015ರಲ್ಲಿ ಕೃಷಿ ಇಲಾಖೆ ಆಯೋಜನೆಯಲ್ಲಿ ಶ್ರೇಷ್ಠ ಕೃಷಿಕ ಪ್ರಶಸ್ತಿ, 2017ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಕಾರ್ಯ ಕ್ರಮದಲ್ಲಿ ಅವ್ವ ಪ್ರಶಸ್ತಿ ಹಾಗು 2023ರಲ್ಲಿ ಕೃಷಿ ಇಲಾಖೆಯಿಂದ ನೇಗಿಲ ಯೋಗಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಬೆಳ್ಳಿ ಆಭರಣ ಕಳವು

ಹಾಸನ: ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಚಿತಪಡಿಸಿ ಕೊಂಡು ಬೀಗ ಮುರಿದು ಒಳನುಗ್ಗಿರುವ ಕಳ್ಳರು 42,500 ರೂ. ಮೌಲ್ಯದ ಬೆಳ್ಳಿ ಆಭರಣ ಕಳವು ಮಾಡಿರುವ ಘಟನೆ ಸಾಲಗಾಮೆ ರಸ್ತೆಯ ಮಾವಿನಹಳ್ಳಿ ಗೇಟ್‌ನಲ್ಲಿ ನಡೆದಿದೆ.

ಹೇಮಂತ್ ಕುಮಾರ್ ಮನೆಗೆ ಬೀಗ ಹಾಕಿಕೊಂಡು ತಮ್ಮ ಸಂಬಂಧಿಕರ ಶವ ಸಂಸ್ಕಾರಕ್ಕೆ ಹೋಗಿದ್ದರು. ವಾಪಾಸ್ ಬಂದು ನೋಡಿ ದಾಗ ಮನೆ ಬಾಗಿಲು ಮುರಿದಿರುವುದು ತಿಳಿದಿದೆ. ಬೀರುವಿನಲ್ಲಿಟ್ಟಿದ್ದ ಬೆಳ್ಳಿ ಪದಾರ್ಥ ಕಳುವಾಗಿದೆ. ಬಡಾ ವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿನ್ನಾಭರಣ ಕಳವು

ಹಾಸನ: ಮನೆ ಬಾಗಿಲ ಬೀಗ ಮುರಿದು ಒಳನುಗ್ಗಿರುವ ಕಳ್ಳರು 1.30 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ಎಂಸಿಎಂ ವಸತಿ ಬಡಾವಣೆಯಲ್ಲಿ ನಡೆದಿದೆ.

ಚಲುವರಾಯಸ್ವಾಮಿ ಅವರು ಶನಿವಾರ ಬೆಳಿಗ್ಗೆ ಕರ್ತವ್ಯದ ನಿಮಿತ್ತ ಹೊಳೆನರಸೀಪುರಕ್ಕೆ ತೆರಳಿದ್ದರು. ಸಂಜೆ ಮನೆಗೆ ಬಂದು ನೋಡಿದಾಗ ಮನೆ ಬಾಗಿಲು ಮುರಿದಿರುವುದು ತಿಳಿದಿದೆ. ಬಲವಾದ ಆಯುಧದಿಂದ ಬಾಗಿಲ ಬೀಗ ಮುರಿದು ಬೀರುವಿನಲ್ಲಿಟ್ಟಿದ್ದ ಚಿನ್ನಾಭರಣ ದೋಚಿದ್ದಾರೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019